# ಉತ್ತಮ ಪ್ರಶ್ನೆ ಮತ್ತು ಉತ್ತಮ ಉತ್ತರಗಳು



ಪೂಜ್ಯ ಭಿಕ್ಷು ಕೆ. ಶ್ರೀ ಧಮ್ಮಾನಂದ
ಪೂಜ್ಯ ಎಸ್. ಧಮ್ಮಿಕ

# ಉತ್ತಮ ಪ್ರಶ್ನೆ ಮತ್ತು ಉತ್ತಮ ಉತ್ತರಗಳು

ಪೂಜ್ಯ ಎಸ್. ಧಮ್ಮಿಕ

ಕನ್ನಡಕ್ಕೆ : ಎ. ಡಿ. ಕೃಷ್ಣಯ್ಯ

ಪ್ರಕಾಶಕರು :

**ಬುದ್ಧ ವಚನ ಟ್ರಸ್ಟ್**

ನಂ. 14, ಕಾಳಿದಾಸ ರಸ್ತೆ,

ಗಾಂಧಿನಗರ, ಬೆಂಗಳೂರು-560 009.

ಉತ್ತಮ ಪ್ರಶ್ನೆ ಮತ್ತು ಉತ್ತಮ ಉತ್ತರಗಳು
—ಬರೆದವರು ಪೂಜ್ಯ ಎಸ್. ಧಮ್ಮಿಕ ಕನ್ನಡಕ್ಕೆ : ಎ. ಡಿ. ಕೃಷ್ಣಯ್ಯ
ಪ್ರಕಾಶಕರು : ಬುದ್ಧ ವಚನ ಟ್ರಸ್ಟ್,
14, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರ-9.
ಪುಟಗಳು 60+4

ಪ್ರತಿಗಳು : 1000
**1992**

© ಬುದ್ಧ ವಚನ ಟ್ರಸ್ಟ್

**ಬೆಲೆ : ರೂ. 15-00**

"ಪೂಜ್ಯ ಆಚಾರ್ಯ ಬುದ್ಧರಕ್ಷಿತ ಸ್ವಾಮೀಜಿಯವರ 71ನೇ ವರ್ಷದ ಜನ್ಮದಿನದ ಗೌರವಾದರಣೆಯ ಅರ್ಪಣೆ ಈ ಕೃತಿ" 18-3-92ರ ಫಾಲ್ಗುಣ ಪೂರ್ಣಿಮೆ ಯಂದು ಪ್ರಕಟಿತ.

ಮುದ್ರಕರು :
ತ್ರಿಪಿಟಕ ಮುದ್ರಣಾಲಯ, ಗಾಂಧಿನಗರ, ಬೆಂಗಳೂರು-9.

## ಪರಿವಿಡಿ

ವಿಷಯಾನು ಕ್ರಮಣಿಕೆ ಪುಟಗಳು


| | | | |
|---|---|---|---|
| 1. | ಬೌದ್ಧೀಯತೆ ಎಂದರೇನು ? | | 1 |
| 2. | ಬೌದ್ಧೀಯತೆಯ ಮೂಲ ಭಾವನೆಗಳು | .... | 15 |
| 3. | ಬೌದ್ಧ ಧರ್ಮ ಮತ್ತು ದೈವತ್ವ | .... | 21 |
| 4. | ಪಂಚಸೂತ್ರಗಳು ಪಂಚೇಂದ್ರಿಯ ಗ್ರಾಹ್ಯಗಳು | .... | 28 |
| 5. | ಪುನರ್ಜನ್ಮ | .... | 34 |
| 6. | ಬುದ್ಧಿವಂತಿಕೆ ಮತ್ತು ದಯೆ (ಕನಿಕರ) | .... | 47 |
| 7. | ಸಸ್ಯಾಹಾರಿ ಜೀವನ | .... | 51 |
| 8. | ಉತ್ತಮ ಅದೃಷ್ಟ ಮತ್ತು ವಿಧಿ | .... | 53 |
| 9. | ಬೌದ್ಧೀಯರಾಗುವಿಕೆ | .... | 56 |


—00—

## ಅನುವಾದಕನ ಅನಿಸಿಕೆ

ಪೂಜ್ಯ. ಎಸ್. ಧಮ್ಮಿಕರವರು ರಚಿಸಿರುವ ಈ ಪ್ರಶ್ನೋತ್ತರ ಭಾಗಗಳ ಈ ಕಿರು ಹೊತ್ತಿಗೆಯು ಚಿಕ್ಕದಾಗಿದ್ದರೂ ಅತಿ ಚೊಕ್ಕಟ. ಇದೊಂದು ಈ ದಿಶೆಯಲ್ಲಿ ಹೊಸ ಪ್ರಯೋಗ. ಬೌದ್ಧೀಯ ಧರ್ಮಗಳ ಅಪಾರ ಜ್ಞಾನ ರಾಶಿಯನ್ನು ಅತಿಯಾಗಿ ಸಂಗ್ರಹಿಸಿ, ಹಿತವಾಗಿ ಅದರ ಪ್ರಮುಖಾಂಶಗಳನ್ನು ಅತಿ ಸರಳವಾಗಿ ಹೊರತಂದಿದ್ದಾರೆ. ಈ ಬೌದ್ಧ ಧರ್ಮವು ವಿಶ್ವಧರ್ಮವಾಗಿರುವುದರಿಂದ, ಇದರ ವ್ಯಾಪ್ತಿಯನ್ನು ಭಾಷೆ, ದೇಶ ಮತ್ತು ಸಂಸ್ಕೃತಿಗೆ ಮಿತಿಗೊಳಿಸುವುದು ಸಲ್ಲದು, ಮಾನವ ಹಿತಾಸಕ್ತಿಗಳಿಗೇ ಸೀಮಿತಗೊಳಿಸದೆ, ಅವನ ಸರ್ವಾಭಿವೃದ್ಧಿಗೂ ಮಾರ್ಗತೋರುವ ಈ ಧರ್ಮಗಳು ಯಾವ ಬಗೆಯಲ್ಲಿ, ಯಾವ ದೇಶದಲ್ಲಿ ಹೇಗೆ ತನ್ನ ವ್ಯಾಪ್ತತೆಯನ್ನು ವೃದ್ಧಿಸಿಕೊಂಡರೂ, ಅದು ಶ್ಲಾಘನೀಯ, ಶ್ರೇಯಸ್ಕರ.

ಬಹುತೇಕದ ಬೌದ್ಧ ಧರ್ಮಗಳು 'ಪಾಳಿ' ಭಾಷೆಯಲ್ಲಿ ಮೂಲ ರೂಪತಳೆದಿದ್ದು, ಕ್ರಮೇಣ, ಸಂಸ್ಕೃತ, ಸಿನ್ಹಳಿ, ಚೀಣಾ, ಜಪಾನ್ ಬರ್ಮೀಯ ಭಾಷೆಗಳಲ್ಲಿ ಭಾಷಾಂತರಗೊಂಡಿರುವುದು ಕಾಣಬರುತ್ತದೆ. ಇಂದು, ಇದು ವಿಶ್ವವ್ಯಾಪ್ತಿಯಾಗಿ, ಆಂಗ್ಲ ಭಾಷೆಯ ನೆರವನ್ನು ಪಡೆದರೆ, ಭೂ ಭಾಗದ ಅನೇಕ ದೇಶಗಳಿಗೆ ಉಪಯೋಗವಾಗಬಹುದು. ಆದರೂ, ಪ್ರಾಂತೀಯ ಭಾಷೆಗಳಲ್ಲಿ ಈ ಧರ್ಮಗಳು ಹೊರಬಂದಲ್ಲಿ, ಇವುಗಳ ಉಪಯೋಗ ಸಾಮಾನ್ಯರಿಗೂ ಲಭ್ಯ.

ಕನ್ನಡದಲ್ಲಿ, ಈ ದಿಶೆಯಲ್ಲಿ ಅಪಾರ ಸಶ್ರಮ ಕೆಲಸಗಳು ನಡೆಯಬೇಕಾಗಿದೆ. ಇಂತಹ ಅಪರೂಪದ ಹಾಗೂ ಏಕೈಕ ಧರ್ಮವಾಗಿ, ಇಡೀ ವಿಶ್ವಮಾನವೀಯತೆಗೆ ಜ್ಞಾನ ದೀವಿಗೆ ಬೆಳಗಿಸುವ ಈ ಧರ್ಮಗಳು ಕನ್ನಡದಲ್ಲಿದ್ದರೆ ಅದೆಂತಹ ಚೆನ್ನ. ನನ್ನ ಈ ಭಾವನೆಯೇ ಪ್ರೇರಕ.

ಜೊತೆಗೆ, ಬೆಂಗಳೂರಿನ ಮಹಾಬೋಧಿ ಸಂಘದ ಅಧ್ಯಕ್ಷರಾದ ಪೂಜ್ಯ ಸಂಗಸೇನರವರು ಹಾಗೂ ಪೂಜ್ಯ ಆನಂದರವರು ಸರ್ವ ಉತ್ತೇಜನಗಳು ನನ್ನೀಕಾರ್ಯಕ್ಕೆ ಮಹಾಪೂರಕ ಪ್ರೇರಣೆಗಳು. ನನ್ನ ಹೃತ್ಪೂರಕ ಪ್ರಣಾಮಗಳು. ಈ ಪೂಜ್ಯ ಗುರುವರ್ಯರಿಗೆ ಕಾಣಬರಬಹುದಾದ ತಪ್ಪುಗಳಿಗೆ (ಇದ್ದರೆ) ಕ್ಷಮೆ ಕೋರಿದೆ.

—ಎ. ಡಿ. ಕೃಷ್ಣಯ್ಯ

ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ

## 1. ಬೌದ್ಧೀಯತೆ ಎಂದರೇನು ?

ಬೌದ್ಧೀಯತೆ ಎಂಬುದು 'ಬುದ್ಧಿ' ಎಂಬ ಶಬ್ದದಿಂದ ಉಗಮವಾಗುತ್ತದೆ. ಇದರ ಅರ್ಥವು 'ಎಚ್ಚೆತ್ತುಕೊಳ್ಳು' ಎಂಬ ಅರ್ಥವೀಯುವುದಾಗಿದೆ. ಹೀಗೆ ಬೌದ್ಧಿಯತೆಯು ಎಚ್ಚೆತ್ತುಕೊಳ್ಳುವ ಮೂಲಾಧಾರದ ತತ್ವವನ್ನು ಹೊಂದಿರುವುದು. ಈ ತತ್ವದ ಮೂಲಾಧಾರವು ಗೌತಮ ಬುದ್ಧರೆಂಬ ಒಬ್ಬ ಮಾನವನ ಜೀವನಾನುಭವಗಳು ಅವರನ್ನು ಬುದ್ಧರೆಂದೂ ಗುರುತಿಸಿರುವುವು. ಇವರು ತಮ್ಮ ಮೂವತ್ತಾರನೆಯ ವಯಸ್ಸಿನಲ್ಲಿ ತಮ್ಮಷ್ಟಕ್ಕೆ ತಾವೇ ಸಂಪೂರ್ಣ ಎಚ್ಚೆತ್ತುಕೊಂಡಿರುವವರಾದರು. ಈ ಬೌದ್ಧೀಯ ಧರ್ಮಗಳು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪ್ರಮುಖವಾಗಿ ಹೊರಬಂದು ಇಂದು 300 ಮಿಲಿಯನ್‌ಗಳಿಗೂ ಹೆಚ್ಚು ಸಂಖ್ಯೆಯ ಅನುಯಾಯಿಗಳನ್ನು ಹೊಂದಿ ಇಡೀ ಪ್ರಪಂಚದೆಲ್ಲೆಡೆಯಲ್ಲಿಯೂ ಹರಡಿಕೊಂಡಿದೆ. ಒಂದು ನೂರು ವರ್ಷಗಳ ಹಿಂದಿನಿಂದಾಚೆಗೆ ಈ ಬೌದ್ಧೀಯ ಧರ್ಮಗಳು ಕೇವಲ ಏಷ್ಯಾದವರ ತತ್ವವಾಗಿದ್ದವು, ಆದರೆ, ಅದು ಇತ್ತೀಚೆಗೆ ಯುರೋಪ್, ಏಷ್ಯಾ ಮತ್ತು ಅಮೆರಿಕಾ ಖಂಡಗಳಾದಿಯಾಗಿ ಪ್ರಖ್ಯಾತಿಯೊಡನೆ ಅಪಾರ ಸಂಖ್ಯೆಯ ಅನುಯಾಯಿಗಳನ್ನು ಹೊಂದಿದೆ.

**ಪ್ರಶ್ನೆ :**— ಅಂದರೆ, ಬೌದ್ಧೀಯತೆ ಎಂಬುದು ಒಂದು ಕೇವಲ ತತ್ವ ಶಾಸ್ತ್ರವಾಗಿರುವುದಲ್ಲವೇ ?

—ತತ್ವಶಾಸ್ತ್ರ ಅಥವಾ 'ಫಿಲಾಸಫಿ' ಎಂಬುದು ಎರಡು ಮುಖ್ಯ ಶಬ್ದಗಳಿಂದ ಉಗಮವಾಗಿದೆ. 'ಫಿಲೋ' ಎಂದರೆ 'ಪ್ರೀತಿ' ಎಂಬ ಅರ್ಥದಿಂದಲೂ ಮತ್ತು 'ಸೊಫಿಯಾ' ಎಂದರೆ 'ಬುದ್ಧಿವಂತಿಕೆ' ಎಂಬುದರ ಅರ್ಥದಿಂದ ಕೂಡಿ ಹೊರಬಂದಿದೆ. ಅಂದರೆ ಈ ತತ್ವಶಾಸ್ತ್ರವು ಬುದ್ಧಿವಂತಿಕೆಯ ಪ್ರೀತಿ ಗಳಿಸುವಿಕೆ ಅಥವಾ ಪ್ರೀತಿ ಮತ್ತು ಬುದ್ಧಿವಂತಿಕೆ ಎಂಬೆರಡೂ ಶಬ್ದಗಳು ಬೌದ್ಧೀಯತೆಯನ್ನು ಪರಿಪೂರ್ಣತೆಯಿಂದ ವರ್ಣಿಸುತ್ತಿರುವುವು. ಪ್ರತಿಯೊಂದನ್ನೂ ಪರಿಪೂರ್ಣವಾಗಿ ತಿಳಿದುಕೊಳ್ಳಲು ಬೇಕಾಗಿರುವ ಬುದ್ಧಿ ಚಾತುರ್ಯದ ಸಾಮರ್ಥ್ಯವನ್ನು, ನಾವು ಅಭಿವೃದ್ಧಿಸಿಕೊಳ್ಳಲು ಪ್ರಯತ್ನಗಳನ್ನು ಬೆಳೆಸಿಕೊಳ್ಳುವುದನ್ನೇ

ಬೌದ್ಧೀಯತೆಯು ಬೋಧಿಸುತ್ತದೆ. ಸಕಲ ಜೀವರಾಶಿಗಳಿಗೂ ನಾವು ನಿಷ್ಠಾವಂತ ಸ್ನೇಹಿತರೋಪಾದಿಯಲ್ಲಿ ಅಪಾರ ಪ್ರೀತಿ ಮತ್ತು ದಯೆಯನ್ನು ಅಭಿವೃದ್ಧಿಸಿಕೊಳ್ಳಲು ಸರ್ವನೆರವು ನೀಡುವ ಸರ್ವೋತ್ತಮ ಮಾರ್ಗಾಭಿವೃದ್ಧಿಯ ದಿವ್ಯಜ್ಯೋತಿಯಾಗಿದೆ. ಆದುದರಿಂದ ಬೌದ್ಧೀಯತೆಯು ಕೇವಲ ತತ್ವಶಾಸ್ತ್ರವಾಗದೆ, ಜೊತೆಯಲ್ಲಿ ದಯೆ, ಕರುಣೆ ಮತ್ತು ಸರ್ವೋತ್ತಮ ಮಾನವತ್ವವನ್ನು ಬೋಧಿಸುವ ಏಕೈಕ ಧರ್ಮವಾಗಿದೆ. ಹೀಗೆ ಇದೊಂದು ಅಸಮಾನ್ಯ ತತ್ವ ಬೋಧನಾಮಾರ್ಗವೂ ಸಹ.

**ಪ್ರಶ್ನೆ** :—ಭಗವಾನ್‌ಬುದ್ಧರು ಯಾರು ?

—ಕ್ರಿ. ಪೂ. 563 ನೆಯ ವರ್ಷದಲ್ಲಿ, ಹಿಮಾಲಯ ತಪ್ಪಲಿನಲ್ಲಿದ್ದ ಒಂದು ರಾಜಮನೆತನದಲ್ಲಿ ಒಂದು ಮಗುವು ಜನನವಾಗುವುದು. ಈ ರಾಜಕುಮಾರನನ್ನು ಸಕಲ ಐಶ್ವರ್ಯ ಸಂಪತ್ತು ಮತ್ತು ಸುಖ ಸಂತೋಷಗಳ ಸಮೂಹದಲ್ಲಿ ಬೆಳೆಸಿದರಾದರೂ, ಈ ಕುಮಾರನು ಕೊನೆಗೊಮ್ಮೆ ಈ ಪ್ರಾಪಂಚಿಕ ಸಕಲ ಸುಖಭಾಗ್ಯ ಭೋಗಗಳು ಮತ್ತು ಅವ್ಯಾಹತ ರಕ್ಷಣೆಗಳು ಜೀವನದಲ್ಲಿ ಶಾಂತಿಯನ್ನೊದಗಿಸಲಾರವೆಂಬ ನಿತ್ಯ ಸತ್ಯವನ್ನು ಕಂಡುಕೊಳ್ಳುತ್ತಾನೆ. ಜೊತೆಗೆ, ತನ್ನ ಸುತ್ತಮುತ್ತಲಲ್ಲಿಯೂ ತಾನೇತಾನಾಗಿ ದುಃಖ ಮತ್ತು ಸಂಕಟಗಳನ್ನನುಭವಿಸುವ ಸನ್ನಿವೇಶಗಳನ್ನು ಕಂಡು ಮನಮರುಗಿ, ದುಃಖಿಸಿ, ಕೊನೆಗೆ, ಏನೇ ಆದರೂ ಸರಿಯೇ ಈ ಸಂಕಟ ಮತ್ತು ದುಃಖ ನಿವಾರಣೆಗೆ ಸೂಕ್ತ ಪರಿಹಾರವನ್ನು ಕಂಡು ಹಿಡಿಯಲೇಬೇಕೆಂಬ ದೃಢ ನಿಲುವು ತಳೆದರು. ಇವರು 29 ನೆ ವಯಸ್ಸಿನಲ್ಲಿ ತಮ್ಮ ಪ್ರೀತಿವಾತ್ಸಲ್ಯದ ಪತ್ನಿಯನ್ನು ಮತ್ತು ತನ್ನ ಮುದ್ದು ಕುಮಾರನನ್ನು ತೊರೆದರು. ಅನತಿ ದೂರ ಪಯಣಿಸಿದರು, ಸರ್ವೋತ್ತಮ ಧರ್ಮದರ್ಶತ್ವವನ್ನು ಹೊಂದಿರುವ ಪ್ರಬೋಧಕರ ಅಡಿದಾವರೆಗಳನ್ನು ಹಿಡಿದು, ಅವರಿಂದ ಸನ್ಮಾರ್ಗಗಳನ್ನು ತಿಳಿದು ಆಶೀರ್ವಚನ ಪಡೆಯಲು ನಿರ್ಧರಿಸಿದರು. ಈ ಪ್ರಬೋಧಕರು ಸಾಕಷ್ಟು ಬೋಧನೆಗಳನ್ನೇನೋ ನೀಡಿದರಾದರು, ಇವರಲ್ಲಿ ಯಾರೊಬ್ಬರಿಗೂ, ಮಾನವನ ಸರ್ವ ಸಂಕಟಗಳ ಕಾರಣ ಅಥವಾ ಮೂಲವನ್ನಾಗಲೀ ತಿಳಿದವರಲ್ಲ ಮತ್ತು ಇವುಗಳ ನಿವಾರಣೆಯ ಬಗ್ಗೆಯೂ ಅರಿತವರಾಗಿರಲಿಲ್ಲ. ಇದಾದ ನಂತರ ಆರು ವರ್ಷಗಳ ಕಾಲದ ಸತತ ಜ್ಞಾನಾರ್ಜನೆಯ ಜೊತೆಗೆ ಧ್ಯಾನಾಭಿವೃದ್ಧಿಯನ್ನು ಬಲಿಸಿ, ಒಲಿಸಿಕೊಂಡವರಾಗಿ, ಆಮೂಲಕ ಮಾನವನಲ್ಲಿನ ಅಜ್ಞಾನವನ್ನು ಸಂಪೂರ್ಣ ತೊಲಗಿಸಬಹುದಾದ ಮತ್ತು

ಆ ಮೂಲಕ ಶಾಂತಿಯುತ ಜೀವನವನ್ನು ನಡೆಸಬಹುದಾದ ಸ್ವಯಂ ಅನುಭವಗಳ ಅರಿವನ್ನು ಪಡೆದರು. ಆ ದಿನದ ನಂತರ, ಅವರು ಬುದ್ಧರಾದರು. ಸರ್ವಜ್ಞಾನಾರ್ಜನೆಯನ್ನು ಪಡೆದ ಪರಮಜ್ಞಾನೋದಯರೇ ಆದರು.— ಸರ್ವವಿಧಗಳಲ್ಲಿ ಎಚ್ಚೆತ್ತವರಾದರು. ಇದಾದ ಮೇಲೆ ನಲವತ್ತೈದು ವರ್ಷಗಳ ಕಾಲ ಜೀವಿಸಿದ್ದು ಆ ಕಾಲದಲ್ಲಿ ಉತ್ತರ ಭಾರತದಲ್ಲೆಲ್ಲಾ ಪ್ರವಹಿಸುತ್ತ, ತಾವೇನನ್ನು ಕಂಡು ಹಿಡಿದರೋ ಅದನ್ನು ಸರ್ವರಿಗೂ ಬೋಧಿಸುತ್ತಾ ಕಾಲವನ್ನು ಕಳೆದರು. ಅವರ ದಯಾಪರತೆ ಮತ್ತು ಶಾಂತ ಸ್ವಭಾವವು 'ಅಸಮಾನ್ಯವಾದುದ್ದಾಗಿಯೂ ಆಪ್ಯಾಯ ಮಾನತೆಯುಳ್ಳದ್ದಾಗಿದ್ದು ಸಹಸ್ರ ಸಹಸ್ರ ಸಂಖ್ಯೆಯ ಅನುಯಾಯಿಗಳನ್ನು ಗಳಿಸಿತು. ಇವರು ಎಂಭತ್ತನೆಯ ವಯಸ್ಸಿನಲ್ಲಿ, ತಮ್ಮ ವೃದ್ಧಾಪ್ಯ ಮತ್ತು ದುಸ್ಥಿತಿಯ ದೇಹದಿಂದ ಬಳಲಿದ್ದರು, ಆದರೂ ಅತಿ ಸಂತೋಷಭರಿತರಾಗಿಯೂ ಶಾಂತ ಮನಸ್ಸನ್ನು ತಳೆದವರಾಗಿ ತಮ್ಮ ಶರೀರವನ್ನು ತೊರೆದರು. ಕೊನೆಗೆ ಮರಣವನ್ನಪ್ಪಿದರು.

ಪ್ರಶ್ನೆ :—ಬುದ್ಧರು ತನ್ನ ಪತ್ನಿ ಮತ್ತು ಮಗುವನ್ನು ತೊರೆದು ಹೋದುದು, ಅವರ ಬೇಜವಾಬ್ದಾರಿತನವನ್ನು ಸೂಚಿಸುವುದಲ್ಲವೇ ?

—ಭಗವಾನ್ ಬುದ್ಧರಿಗೆ ಹಾಗೆ ತಮ್ಮ ಕುಟುಂಬದವರನ್ನು ತೊರೆದು ಹೊರಟು ಹೋಗುವ ಸನ್ನಿವೇಶವು ಸುಲಭ ಸಾಧ್ಯವಾದುದ್ದೇನೂ ಅಲ್ಲ. ಇಂತಹ ಅಂತಿಮದ ಘೋರ ತೀರ್ಮಾನವನ್ನು ತಳೆಯುವ ಮುನ್ನ ಅವರು, ಆ ಬಗೆಗೆ ಸಾಕಷ್ಟು ಮಾನಸಿಕ ಕಳವಳ ಮತ್ತು ಹಿಂಜರಿಯುವ ಸ್ವಭಾವಗಳಿಂದ ವ್ಯಥಿಥರಾಗಿದ್ದರೆಂಬುವುದರಲ್ಲಿ ಯಾವ ಸಂದೇಹವಿಲ್ಲ. ಈ ದಿಶೆಯಲ್ಲಿ ಅವರಂಗೆ ಉಳಿದಿದ್ದುದು ಕೇವಲ ಎರಡೇ ಮಾರ್ಗಗಳು. ಅವೇದರೆ ತನ್ನ ಪತ್ನಿ ಮತ್ತು ಪುತ್ರರಿಗಾಗಿ ತನ್ನನ್ನು ಸಂಪೂರ್ಣ ಅರ್ಪಿಸಿಕೊಳ್ಳುವುದು ಅಥವಾ ಇವರನ್ನು ತೊರೆದು ಇಡೀ ಪ್ರಪಂಚದ ಒಳಿತಿಗಾಗಿ ತನ್ನನ್ನು ತಾನೇ ಅರ್ಪಿಸಿಕೊಳ್ಳುವುದೇ ಎಂಬುವೇ ಆಗಿದ್ದವು ಈ ಸಂಧಿಗ್ಧ ಮಾನಸಿಕ ತಳಮಳದಲ್ಲಿನ ಅಂತ್ಯದಲ್ಲಿ, ತನ್ನನ್ನು ಇಡೀ ಪ್ರಪಂಚದ ಒಳಿತಿಗಾಗಿ ಅರ್ಪಣೆ ಮಾಡಿಕೊಳ್ಳುವುದು ಪರಮ ಹಿತವೆಂಬ ಕನಿಕರ ತಳೆದವರಾಗಿ ಅದರಂತೆ ಅವರು ತನ್ನನ್ನು ಅರ್ಪಿಸಿಕೊಂಡರು. ಇವರ ಈ ತ್ಯಾಗ ಬಲಿದಾನಗಳಿಂದ ಈ ಪ್ರಪಂಚವೂ ಇಂದಿಗೂ ಮತ್ತು ಇನ್ನುಮುಂದೆಯೂ ಅದರ ಉಪಯೋಗವನ್ನು ಪಡೆಯುತ್ತಿದೆ. ಇಂತಹ ಮಹಾನ್‌ತ್ಯಾಗವನ್ನು ಬೇಜವಾಬ್ದಾರಿಯೆಂದು ಪರಿಗಣಿಸಲಾಗದು, ಬಹುಶಃ ಇಂತಹ ಸ್ವಯಂ

ತ್ಯಾಗವನ್ನು ಈ ಪ್ರಪಂಚದಲ್ಲಿ ಇದುವರೆಗೂ ಯಾರೂ ಮಾಡಿಲ್ಲ; ಅದು ಸಾಧ್ಯವೂ ಅಲ್ಲ.

**ಪ್ರಶ್ನೆ :—** ಭಗವಾನ್ ಬುದ್ಧರು ಮರಣ ಹೊಂದಿದ್ದಾರಾದ್ದರಿಂದ ಅವರು ಹೇಗೆ ಸಹಾಯಕರಾಗಬಲ್ಲರು ?

ಫಾರಡೇ ಎಂಬುವನು, ವಿದ್ಯುತ್‌ಚ್ಛಕ್ತಿಯನು ಕಂಡುಹಿಡಿದನು, ಅವನು ಮರಣಹೊಂದಿರುವನು. ಆದರೆ ಅವನು, ಕಂಡುಹಿಡಿದಿರುವ ಆ ಮಹಾನ್ ಶಕ್ತಿಯು ಇಂದಿಗೂ ಮತ್ತು ಮುಂದೆಯೂ ಸಹಾಯ ನೀಡುತ್ತಿಲ್ಲವೇ ? 'ಲೂಯಿಸ್ ಪಾಶ್ಚರ್' ಎಂಬುವರು ಅನೇಕ ರೋಗಾಣು ನಾಶಕಗಳನ್ನು ಕಂಡುಹಿಡಿದು ಮಡಿದರು, ಆದರೆ ಅವರು ಸಂಶೋಧನೆ ನಡೆಸಿ ಕಂಡುಹಿಡಿದಿರುವ ಸಾಧನೆಗಳು ಇಂದು ಅನೇಕ ಜೀವಿಗಳನ್ನು ರಕ್ಷಿಸುತ್ತಿಲ್ಲವೇ? 'ಲಿಯೋನಾರ್ಡೊ ಡ ವಿನ್ಚಿ' ಎಂಬುವರು ಚಿತ್ರಕಲೆ ನೈಪುಣ್ಯತೆಯಿಂದ ಮಹತ್ ಪ್ರತಿಭೆ ಬೀರುವ ಕಲೆ ಸಾಮ್ರಾಜ್ಯವನ್ನು ಸೃಷ್ಟಿಸಿ ಮರಣ ಹೊಂದಿದರು. ಆದರೆ ಅವರು ರಚಿಸಿದ ಕಲಾಕೃತಿಗಳು ಸರ್ವಕಾಲದಲ್ಲಿಯೂ ಮೇಧಾವಿತ್ವವನ್ನು ಪಡೆದು ಇಂದಿಗೂ ಸುಖ ಭಾವನೆಗಳನ್ನು ನೀಡುತ್ತಿಲ್ಲವೇ? ಮಹಾ ಪುರುಷರು ಮತ್ತು ಸರ್ವಶ್ರೇಷ್ಠರು ಹುಟ್ಟುತ್ತಾರೆ, ಅಂತೆಯೇ ಅವರು ಮರಣವನ್ನೂ ಅಪ್ಪುತ್ತಾರೆ. ಆದರೆ ನಾವು ಅವರ ಮಹಾತ್ಸಾಧನೆಗಳನ್ನು ಹಾಗೂ ಅಸಮಾನ್ಯ ಕಾರ್ಯ ಚಟುವಟಿಕೆಗಳನ್ನು ಓದಿ ತಿಳಿದಾಗ, ಅವರ ಅಪರೂಪದ ಸಾಧನೆಗಳು ನಮ್ಮನ್ನು ಪ್ರೇರೇಪಿಸಿ ಹುರಿದುಂಬಿಸುವುವು ಮಾತ್ರವಲ್ಲದೆ ಅವುಗಳನ್ನು ಸಾಧ್ಯವಾದಮಟ್ಟಿಗೂ ಅನುಸರಿಸಲು ಪ್ರೋತ್ಸಾಹಿಸುವುವು. ಹಾಗೆಯೇ ಭಗವಾನ್ ಬುದ್ಧರು ಮರಣ ಹೊಂದಿದ್ದರು, ಎರಡು ಸಾವಿರದ ಐನೂರು ವರ್ಷಗಳು ಕಳೆದರೂ, ಅವರ ಸರ್ವಕಾಲಿಕ ಚೈತನ್ಯದಾಯಕವಾಗಿರುವ ಪ್ರಬೋಧನೆಗಳೂ ಇಂದಿಗೂ ಮಾನವಕೋಟಿಗೆ ಅಪಾರ ನೆರವು, ಜ್ಞಾನ ಮತ್ತು ಸೌಹಾರ್ದ ಜೀವನ ನಡೆಸಲು ಮಾರ್ಗ ತೋರುವ ದಿವ್ಯ ಜ್ಯೋತಿಗಳೇ ಆಗಿವೆ. ಜೊತೆಗೆ ಅವರ ಜೀವನ ಕ್ರಮದ ಪ್ರತಿ ಹಂತವೂ ಅನೇಕ ಜನರ ಮನಸ್ಸಿನ ಗತಿಯನ್ನೇ ಸಂಪೂರ್ಣವಾಗಿ ಬದಲಿಸಲೂ ಬಲ್ಲವು. ಇಂತಹ ಅತ್ಯಮೋಘ ಮಾನವ ತನ್ನ ಯಾವ ಧ್ಯೇಯೋದ್ದೇಶಗಳ ಹಿರಿಮೆಯನ್ನು ಕುಂದಿಸಲಾರದ ಶಕ್ತಿ ಸಾಮರ್ಥ್ಯಗಳನ್ನು ಹೊಂದಿವೆ.

ಪ್ರಶ್ನೆ : ಬುದ್ಧರು ದೇವರೆ ?

—ಅಲ್ಲ, ಅವರು ದೇವರಲ್ಲ. ಅವರೆಂದೂ, ತಾನು ದೇವರೆಂದು ಭಾವಿಸಿದವರಲ್ಲ, ಯೋಚಿಸಿದವರಲ್ಲ, ಅದರಂತೆ ವರ್ತಿಸಿದವರಲ್ಲ, ಅಥವಾ ತಾನು ದೇವತ ಮಗನೆಂತಲೂ, ಅಥವಾ ದೇವದೂತನೆಂಬ ಭಾವನೆಯನ್ನು ತಳೆದವರಲ್ಲ. ಅವರು, ತಾನೊಬ್ಬ ಮಾನವ, ತನ್ನ ಸ್ವ-ಪ್ರಯತ್ನದಿಂದಲೇ ಸರ್ವೋತ್ತಮ ಜ್ಞಾನ ಸಂಪಾದಕ ಮತ್ತು ಹೀಗೆ ಪಡೆದ ತನ್ನ ಜ್ಞಾನ ಭಂಢಾರವನ್ನೆಲ್ಲಾ ಇಡೀ ಮಾನವ ಕೋಟಿಯ ಸರ್ವ ಉದ್ಧಾರಕ್ಕಾಗಿಯೇ ವಿನಿಯೋಗಿಸಿದ ಏಕೈಕ ಮಾನವ, ಇವರ ಕೆಲವೇ ಉದಾಹರಣೆಗಳನ್ನು ಅನುಸರಿಸಿದಲ್ಲಿ, ನಾವೂ ಸಹ ಜೀವನದಲ್ಲಿ ಉತ್ತಮ ಪರಿಪೂರ್ಣತೆಯನ್ನು ಪಡೆಯುವುದು ನಿಸ್ಸಂಶಯ.

ಪ್ರಶ್ನೆ :— ಭಗವಾನ್ ಬುದ್ಧರು ದೇವರಲ್ಲದಿದ್ದರೆ, ಅಪಾರ ಜನ ಸಮೂಹವು ಆತನನ್ನು ದೇವರೆಂದು ಪೂಜಿಸುವರೇಕೆ ?

– ಪೂಜಾ ವಿಧಾನಗಳು ಅನೇಕವಿವೆ ಹಾಗೂ ಹಲವಾರು ಬಗೆಯವುಗಳೂ ಇವೆ- ಹಲವರು ದೇವರನ್ನು ಅಥವಾ ದೇವರೆಂದು ಪೂಜಿಸುವಾಗ, ಆ ದೇವರನ್ನು ಅಥವಾ ದೇವತೆಯನ್ನು ಹೊಗಳಿ, ಕೊಂಡಾಡಿ, ಅಪಾರ ಗೌರವಾದರಗಳನ್ನು ತೋರಿಸಿ, ಅನೇಕ ಬಲಿದಾನಗಳನ್ನರ್ಪಿಸಿ ಆ ಮೂಲಕ ತಮ್ಮ ಇಷ್ಟಾರ್ಥಗಳ ಪೂರೈಕೆಗಾಗಿ ಬೇಡಿಕೊಳ್ಳುವರು. ಈ ಸನ್ನಿವೇಶದಲ್ಲಿ ಬಲಿದಾನಗಳನ್ನು ಒಪ್ಪಿಸಿಕೊಂಡು, ಆ ಮೂಲಕ ಇವರ ಕೋರಿಕೆಯನ್ನು ಒಗೊಟ್ಟಿರುವನೆಂದು ದೃಢ ನಂಬಿಕೆ ಮಾತ್ರವಲ್ಲದೆ, ಒಳ್ಳೆಯ ವರ ಪ್ರಸಾದಗಳನ್ನೇ ನೀಡುವನೆಂಬ ಪೂರ್ಣ ಭರವಸೆಯಿಂದ ಪೂಜಿಸುವರು. ಆದರೆ, ಭಗವಾನ್ ಬುದ್ಧರನ್ನು ಪೂಜಿಸುವವರು ಇವಾವುದನ್ನೂ ಆಲೋಚಿಸದೆ, ನಿರೀಕ್ಷಿಸದೆ, ಕೇವಲ ನಿಸ್ವಾರ್ಥತೆಯಿಂದ ತಮ್ಮ ಮನಸ್ಸಿನ ಸುಖ ಶಾಂತಿಗಾಗಿಯೇ ನೆರವೇರಿಸುವರು.

ಮತ್ತೊಂದು ಬಗೆಯ ಪೂಜೆಯೆಂದರೆ, ನಾವು ಮೆಚ್ಚಿ ಶ್ಲಾಘಿಸುವವರಿಗೆ ಅಥವಾ ವಸ್ತುವಿಗೆ ಮರ್ಯಾದೆಯನ್ನಿತ್ತು ಗೌರವಿಸುವುದೇ ಆಗಿದೆ. ಒಬ್ಬ ಗುರುವು ಶಿಷ್ಯ ವೃಂದವಿರುವ ಕೊಠಡಿಗೆ ಆಗಮಿಸುವಾಗ, ಶಿಷ್ಯರು ಎದ್ದು ನಿಂತು ಗೌರವ ಸೂಚಿಸುವರು. ಗೌರವವುಳ್ಳವರೆಲ್ಲರೂ ಎದ್ದು ನಿಂತು ಗೌರವಿಸುವರು. ನಾವು ಯಾರಾದರೊಬ್ಬ ಧೀಮಂತರನ್ನು ಸಂಧಿಸಿದಾಗ ಅವರೊಡನೆ ಹಸ್ತಲಾಘವನ್ನೀಯುತ್ತೇವೆ, ನಮ್ಮ ರಾಷ್ಟ್ರಗೀತೆ ಮೊಳಗುವಾಗ ನಾವೆದ್ದು ನಿಂತು ವಂದಿಸುತ್ತಾ ಗೌರವ ತೋರುವೆವು.

ಇವೆಲ್ಲವೂ ಉತ್ತಮರನ್ನು ಅಥವಾ ಶ್ರೇಷ್ಠ ವಸ್ತುಗಳನ್ನು ಗೌರವಾದರಗಳಿಂದ ಪೂಜಿಸುವುದೇ ಅಲ್ಲವೇ ಹಾಗೂ ನಮ್ಮ ಗೌರವವನ್ನೂ ನೀಡುವ ಮಾರ್ಗವೂ ಕೂಡ! ಈ ಬಗೆಯ ಪೂಜೆಯನ್ನೇ ಬೌದ್ಧೀಯರು ಅನುಸರಿಸುವರು. ತನ್ನೆರಡು ಕೈಗಳನ್ನು ತೊಡೆಯ ಮೇಲಿರಿಸಿಕೊಂಡು ಕುಳಿತು ತನ್ನಲ್ಲಿ ಅತ್ಯಂತ ದಯೆ ಮತ್ತು ಕರುಣೆಯನ್ನು ಹಸನ್ಮುಖದಿಂದ ಸೂಚಿಸುವಂತೆ ಕುಳಿತಿರುವ ಭಗವಾನ್ ಬುದ್ಧರ ಪ್ರತಿಮೆಯು, ನಮ್ಮಲ್ಲಿಯೇ ಶಾಂತ ಸ್ವಭಾವ ಚಿತ್ತ ವೃದ್ಧಿಗೆ ಪ್ರೇರಣೆಯನ್ನೀಯುವುದಲ್ಲದೆ. ಆ ಸ್ವಭಾವವನ್ನು ಅನುಸರಿಸಲು ಕರೆನೀಡುವಂತಿರುವುದು. ಈ ಸಂದರ್ಭದಲ್ಲಿ ಬಳಸುವ ಸುಮಧುರ ಸುಗಂಧ ದುಪಟಗಳು ನಮ್ಮೊಡನೆ ಇರಬೇಕಾಗಿರುವ ಸಕಲ ಸದ್ಗುಣಗಳ ಪರಿಸರವನ್ನೇ ಸಾರುವುವು ಅಲ್ಲಿ ಪ್ರಜ್ವಲಿಸುವ ದೀಪಗಳು ಜ್ಞಾನ ಪ್ರಕಾಶವನ್ನು ಮತ್ತು ಅಲ್ಲಿ ಶೃಂಗರಿಸಿದ ಪುಷ್ಪಗಳು ಕ್ರಮೇಣ ಕಳೆಗುಂದಿ ಬಾಡುತ್ತಿರುವುದು, ಜೀವನದಲ್ಲಿ ಪ್ರತಿಯೊಂದು ಸತತ ಬದಲಾವಣೆ ಹೊಂದುತ್ತಾ ತಮ್ಮ ಅಶಾಶ್ವತ ಜೀವವನ್ನು ಪಡೆದು ಅಂತ್ಯವಾಗುವುದನ್ನು ಸೂಚಿಸುವುವು. ನಾವು ಆತನ ವಿಗ್ರಹದ ಮುಂದೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದಾಗ ನಾವು ಭಗವಾನ್ ಬುದ್ಧರು ಮಾನವ ಕೋಟಿಗೆ ನೀಡಿರುವ ಸದ್ಬೋಧನೆಗಳನ್ನು ನೆನಪಿಸಿ ಕೃತಜ್ಞತೆ ತೋರುವೆವು ಹಾಗೂ ನಮಗೆಷ್ಟು ಉತ್ತಮ ಮಾರ್ಗಸೂಚಕಗಳೆಂಬುದನ್ನು ನವೀಕರಿಸಿಕೊಳ್ಳುತ್ತೇವೆ. ಈ ಮೊದಲಾದ ವಿಧಾನಗಳೇ ಬೌದ್ಧೀಯರು ಬಾಹ್ಯದಲ್ಲಿ ಪೂಜಿಸುವುದನ್ನು ಸೂಚಿಸುವುವು.

**ಪ್ರಶ್ನೆ :—** ಬೌದ್ಧೀಯರೂ ಸಹ ವಿಗ್ರಹಾರಾಧಕರೆಂದು ಜನರಾಡಿಕೊಳ್ಳುವರು, ಇದು ಸರಿಯೇ ?

—ಇಂತಹವರು ತಾವು ತಪ್ಪಾಗಿ ಗ್ರಹಿಸಿಕೊಂಡಿರುವ ಭಾವನೆಗಳನ್ನು ಹೇಳುವರೇ ವಿನಃ ಸತ್ಯಾಂಶವನ್ನಲ್ಲ. ವಿಗ್ರಹ ಎಂಬುದು ಶಬ್ದಕೋಶದಲ್ಲಿ, ಒಂದು 'ಬಿಂಬ ಅಥವಾ ಪ್ರತಿಮೆಯು' ಎಂದು ತಿಳಿಸುವುದು. ಅದನ್ನು ಪೂಜಿಸಲೂ ಬಹುದಾದುದು ಎಂಬ ಅರ್ಥವೀಯುವುದು. ನೀವು ತಿಳಿದಿರುವಂತೆ, ಬೌದ್ಧೀಯರು, ಭಗವಾನ್ ಬುದ್ಧರನ್ನೇ ದೇವರೆಂದು ನಂಬಿರಲಿಲ್ಲ; ಅಂತಹವರು ಒಂದು ಮರದ ತುಂಡನ್ನೊ ಅಥವಾ ಒಂದು ಲೋಹದ ತುಂಡನ್ನೊ ದೇವರೆಂದು ನಂಬುವರೆ ? ಎಲ್ಲಾ ಧರ್ಮಗಳವರೂ ತಮ್ಮ ಧರ್ಮ ಸಾಂಕೇತಿಕ ಗುರುತುಗಳನ್ನು, ಅವುಗಳನ್ನು ವಿವರಿಸುವ ಸಾಧನಗಳನ್ನು ಬಳಸುವ ಪದ್ಧತಿಗಳನ್ನು ಹೊಂದಿವೆ. ಟೋಯಿಸಮ್‌ನಲ್ಲಿ ಯಿಂಗ್‌ಯಾಂಗ್ ಎಂ[illegible]ರುತು ವಿರುದ್ಧ ಭಾವದವರೊಡನೆ ಸೌಹಾರ್ದ

ಸೂಚಿಸಲು ಬಳಸುವರು. 'ಸಿಕ್ಕ್' ಜನರಲ್ಲಿ ಕತ್ತಿಯು ಆಧ್ಯಾತ್ಮಿಕ ಹೋರಾಟದ ಸಂಕೇತವೆಂದು ಉಪಯೋಗಿಸುವರು. ಕ್ರೈಸ್ತಧರ್ಮದಲ್ಲಿ, ಯೇಸುಕ್ರಿಸ್ತರ ಇರುವಿಕೆಯನ್ನು ಸೂಚಿಸಲು ಮೀನನ್ನು ಬಳಸುವರು ಮತ್ತು ಕ್ರಾಸ್'ನ್ನು ಕ್ರಿಸ್ತರ ಬಲಿದಾನವನ್ನು ಸೂಚಿಸಲು ಬಳಸುವರು. ಬೌದ್ಧೀಯ ಧರ್ಮಗಳಲ್ಲಿ ಭಗವಾನ್ ಬುದ್ಧರ ಪ್ರತಿಮೆಯನ್ನು ಮಾನವನ ಸಹಜ ಪರಿಪೂರ್ಣತೆಯನ್ನು ಸೂಚಿಸಲು ಬಳಸುವರು. ಈ ಪ್ರತಿಮೆಯು ಬೌದ್ಧೀಯ ಪ್ರಬೋಧನೆಗಳಲ್ಲಿರುವ ಅಸಮಾನ್ಯ ವೈಶಾಲ್ಯತೆಯನ್ನೂ ಹಾಗೂ, ಅದು ಮಾನವನ ಏಳ್ಗೆಯ ವಿಧಾನದ ಕೇಂದ್ರವಾಗಿದೆ ಎಂಬ ನಿಜಾಂಶವನ್ನೂ ಸಾರುವುದು ಮಾತ್ರವಲ್ಲದೆ ಇದು ದೇವರ ಬಗೆಗಿನ ಯಾವ ಕೇಂದ್ರವುಳ್ಳದ್ದಲ್ಲವೆಂತಲೂ, ಪರಿಪೂರ್ಣತೆ ಮತ್ತು ಉತ್ತಮ ಜ್ಞಾನಾರ್ಜನೆಯನ್ನು ತನ್ನ ಅಂತರ್ಯದಲ್ಲಿಯೆ ಪಡೆಯಬೇಕಲ್ಲದೆ ಬಾಹ್ಯದಲ್ಲಲ್ಲವೆಂಬುದನ್ನೂ ಸಾಂಕೇತಿಸುತ್ತದೆ. ಆದುದರಿಂದ ಬೌದ್ಧೀಯರು ವಿಗ್ರಹಾರಾಧಕರೆಂಬುದು ಸತ್ಯಕ್ಕೆ ದೂರವಾದುದು ಹಾಗೂ ಅದು ತಪ್ಪು ಭಾವನೆ.

**ಪ್ರಶ್ನೆ** :— ಬೌದ್ಧ ದೇವಾಲಯಗಳಲ್ಲಿ ಜನರು, ಕಾಗದದ ಹಣವನ್ನು ಸುಡುವುದಲ್ಲದೆ ಇನ್ನೂ ಅನೇಕ ಬಗೆಯ ಅಪರೂಪದ, ವಿಕಾರ ಸ್ವರೂಪದ ಕಾರ್ಯಗಳನ್ನು ಮಾಡುವರೇಕೆ ?

—ಈ ಬಗೆಯ ಅನೇಕ ಕಾರ್ಯಗಳನ್ನು ನಾವು ಸರಿಯಾಗಿ ತಿಳಿದುಕೊಳ್ಳದವರಾದರೆ, ಅವೆಲ್ಲವೂ ಅಪರೂಪದ ವಿಕಾರ ಸ್ವರೂಪಗಳೆಂದು ಗೋಚರಿಸುವುದು ಆಶ್ಚರ್ಯವಾಗುವುದಿಲ್ಲ. ಇಂತಹ ಸರ್ವ ಬಗೆಯ ಕಾರ್ಯಕ್ರಮಗಳ ಪೂರ್ಣ ಅರ್ಥ ವಿವರಣೆಯನ್ನು ತಿಳಿದುಕೊಳ್ಳುವ ಬಗೆಗೆ ಸರ್ವ ಪ್ರಯತ್ನ ಮಾಡಬೇಕೇ ಹೊರತು, ಅವುಗಳನ್ನು ಅಪರೂಪದ್ದು, ವಿಕಾರ ಸ್ವರೂಪದ್ದೆಂದು ತಳ್ಳಿ ಹಾಕುವುದು ಸಾಧುವಾದುದಲ್ಲ. ಹೀಗಿದ್ದರೂ, ಬೌದ್ಧೀಯರು ಅತಿ ಪುರಾತನ ಕಾಲದ ಪೂರ್ವ ಸಂಪ್ರದಾಯಕ ಮೂಢನಂಬಿಕೆಗಳನ್ನು ಕೆಲವಾರು ಸಂದರ್ಭಗಳಲ್ಲಿ ಅನುಸರಿಸುವರು ಮತ್ತು ಅವನ್ನು ತಪ್ಪಾಗಿಯೂ ಗ್ರಹಿಸಿಕೊಂಡಿರುವರು, ಅವರ (ಬುದ್ಧರ) ಬೋಧನೆಗಳನ್ನು ಒರೆಗಲ್ಲಿಗೆ ಹಚ್ಚದೆ ಈ ಭಾವನೆ ತಳೆದಿರುವುದಿದೆ. ಇಂತಹ ಹಲವಾರು ತಪ್ಪುಗ್ರಾಹ್ಯಗಳು ಕೇವಲ ಬೌದ್ಧೀಯತೆಗೆ ಸೀಮಿತವಾಗದೆ ಉಳಿದೆಲ್ಲಾ ಧರ್ಮಗಳಲ್ಲೂ ಕಾಲ ಕಾಲಕ್ಕೆ ಉದ್ಭವವಾಗುತ್ತಲೇ ಇವೆ. ಆದರೆ, ಭಗವಾನ್ ಬುದ್ಧರು ಅತಿ ನಿಚ್ಚಳವಾಗಿಯೂ ಸರಳ

ವಾಗಿಯೂ ತಮ್ಮ ಪ್ರಬೋಧನೆಗಳಲ್ಲಿ ವಿವರಿಸಿರುವುದನ್ನು ತಪ್ಪಾಗಿ ಗ್ರಹಿಸಿಕೊಂಡಿರುವರಾದ್ದರಿಂದ, ಈ ಬಗ್ಗೆ ಬುದ್ಧರ ದೂಷಣೆ ಯಾವ ಕಾರಣಕ್ಕೂ ಅಸಮಂಜಸ, ಇಲ್ಲೊಂದು ಸೂಕ್ತಿ ಕೂಡ ಇದೆ.

"ರೋಗಗ್ರಸ್ತನೊಬ್ಬನು, ತನ್ನ ಉಪಯೋಗಕ್ಕಾಗಿ ಸಿದ್ಧರಿರುವ ವೈದ್ಯನನ್ನು ಬಳಸಿಕೊಂಡು ಚಿಕಿತ್ಸೆಯನ್ನು ಪಡೆಯದವನಾದರೆ, ಆ ವೈದ್ಯರಿಂದ ಯಾವ ತಪ್ಪೂ ನಡೆದಿಲ್ಲ.

"ಹಾಗೆಯೇ, ಭ್ರಷ್ಟಾಚಾರಭಾವನೆಯ ರೋಗದಿಂದ ಪೀಡಿತನೂ ಮತ್ತು ಬಾಧಿತನಾದವನೊಬ್ಬನು, ಬುದ್ಧರ ಸಹಾಯವನ್ನು ಬೇಡದೆ ನಿರಾಸಕ್ತನಾದರೆ, ಅದು ಬುದ್ಧರಿಂದಾದ ತಪ್ಪಲ್ಲ.

J. N. 28–9

ಯಾವ ಧರ್ಮ ಸೂಚನೆಗಳನ್ನೇ ಆಗಲಿ ಅಭ್ಯಸಿಸಿ ಅನುಸರಿಸಲಾರದವರು, ಅಂತಹ ಯಾವೊಂದು ಧರ್ಮದ ಬಗ್ಗೆಯೂ ಸತ್ಯಾಂಶವನ್ನು ತೀರ್ಮಾನಿಸಲಾರರು. ಬೌದ್ಧ ಧರ್ಮಗಳ ಸದಾಚಾರ ಸದ್ಬೋಧನೆಗಳನ್ನು ಸಾಂಗೋಪಾಂಗವಾಗಿ ತಿಳಿಯಲಪೇಕ್ಷೆಯುಳ್ಳವರಾದರೆ, ಭಗವಾನ್ ಬುದ್ಧರ ಬೋಧನೆಗಳನ್ನು ಪಠಿಸಿರಿ ಅಥವಾ ಈ ಬಗೆಗೆ ಉತ್ತಮ ತಿಳುವಳಿಕೆಗಳಿಸಿರುವವರೊಡನೆ ವ್ಯವಹರಿಸುವುದು ಉತ್ತಮ.

ಪ್ರಶ್ನೆ :— ಬೌದ್ಧೀಯ ಧರ್ಮವು ಉತ್ತಮವಾದುದೇ ಆಗಿದ್ದರೆ, ಹಲವು ಬೌದ್ಧೀಯ ದೇಶಗಳು ಬಡತನವನ್ನನುಭವಿಸುತ್ತಿರುವುವು ಏಕೆ ?

—ಈ ಬಡತನವು ಕೇವಲ ಆರ್ಥಿಕ ಸಂಬಂಧದಾದರೆ, ಹಲವು ದೇಶಗಳು ನಿಜಕ್ಕೂ ಬಡತನದ ದೇಶಗಳೆಂಬುದು ಸತ್ಯ. ಆದರೆ ಈ ಬಡತನವೆಂಬುದು ಜೀವನದ ಗುಣಮಟ್ಟದ್ದಾದರೆ, ಹಲವು ಬೌದ್ಧೀಯ ದೇಶಗಳು ಬಹುಶಃ ನಿರೀಕ್ಷೆಗಿಂತಲೂ ಹೆಚ್ಚಿನ ಉನ್ನತೆಯನ್ನು ಪಡೆದಿವೆ. ಉದಾಹರಣೆಗೆ, ಅಮೆರಿಕಾ ದೇಶವು ಆರ್ಥಿಕವಾಗಿ ಸಂಪದ್ಭರಿತವಾದದ್ದು ಮತ್ತು ಬಲಯುತವಾದದೂ ಕೂಡ, ಆದರೆ ಇಲ್ಲಿನ ಅಪರಾಧಗಳ ಪ್ರಮಾಣ ಇಡೀ ವಿಶ್ವದ ಮಕ್ಕಳಿಂದ ಉದಾಶೀನಕ್ಕೊಳಗಾಗಿದ್ದಾರೆ, ಹಾಗು ಅವರು ವೃದ್ಧಾಪ್ಯರ ಧಾಮಗಳಲ್ಲಿ ಏಕಾಂಗಿಯಾಗಿ ಮರಣಕ್ಕೊಳಗಾಗುವರು ಮನೆಗಳಲ್ಲಿನ ಸೌಹಾರ್ದತೆಯು ಮಾಯವಾಗಿದೆ ಮಕ್ಕಳ

ದೂಷಣೆ ಮತ್ತು ದೋಷಾಪವಾದದ ಯೋಚನೆಗಳು ಹೆಚ್ಚಾಗಿ, ಇವೊಂದು ಗುರುತರ ಸಮಸ್ಯೆಗಳನ್ನೊಡ್ಡಿವೆ. ಪ್ರತಿ ಮೂರು ಮದುವೆಗಳಲ್ಲಿ ಒಂದು ವಿವಾಹವು ವಿವಾಹ ವಿಚ್ಛೇದನದಿಂದ ಪರ್ಯವಸಾನವಾಗುತ್ತಿವೆ. ಲಂಪಟ ತನಕ್ಕೂ ಹಾಗೂ ಅದರ ಸಾಹಿತ್ಯಕ್ಕೂ ಕಿಂಚಿತ್ತೂ ಬರವಿಲ್ಲ ಹಾಗೂ ಅದು ಅತಿ ಸುಲಭವಾಗಿಯೂ ಲಭ್ಯ. ಆರ್ಥಿಕವಾಗಿ ಅತಿ ಮುಂದುವರಿದದ್ದಾದರೂ ಉತ್ತಮ ಜೀವನ ಕ್ರಮದಲ್ಲಿ ಅದು ಬಡತನದ್ದು. ಅಂತೆಯೇ, ಬರ್ಮಾ ದೇಶವನು ಪರಿಗಣಿಸಿದರೆ ಅದು ಆರ್ಥಿಕವಾಗಿ ಅತಿ ಹಿಂದುಳಿದಿದೆ. ಆದರೂ ಇಲ್ಲಿನ ತಂದೆ ತಾಯಿಗಳು ತಮ್ಮ ಮಕ್ಕಳಿಂದ ಅಪಾರ ಗೌರವ ಆದರಗಳಿಂದಲೂ ಪ್ರೀತಿ ವಾತ್ಸಲ್ಯಗಳಿಂದ ಕಾಪಾಡಲ್ಪಡುತ್ತಾರೆ, ಇಲ್ಲಿ, ಅಪರಾಧಗಳ ಪ್ರಮಾಣಗಳು ಹೋಲಿಕೆಯಿಂದ ಕಡಿಮೆ ಪ್ರಮಾಣದ್ದು ; ವಿವಾಹ ವಿಚ್ಛೇದನ ಮತ್ತು ಆತ್ಮಹತ್ಯೆಗಳು ಕೇಳಿ ಬರುವುದಿಲ್ಲ ; ಜೊತೆಗೆ, ಗೃಹ ಕಲಹ, ಮತ್ತು ಮಕ್ಕಳ ದೂಷಣೆಗಳು ಹಾಗು ವ್ಯಭಿಚಾರ-ಲಂಪಟ ತನಗಳು ಇಲ್ಲೆಲ್ಲೂ ಸುಳಿಯುವುದೇ ಇಲ್ಲ ; ಲೈಂಗಿಕ ವ್ಯಭಿಚಾರಕ್ಕೆಂದು ಯಾವ ಪರವಾನಗಿಯೂ ಇಲ್ಲ. ಒಟ್ಟಿನಲ್ಲಿ ಆರ್ಥಿಕವಾಗಿ ಈ ದೇಶವು ಹಿಂದುಳಿದಿದ್ದರೂ, ಉತ್ತಮ ಜೀವನ ಕ್ರಮದಲ್ಲಿ ಈ ದೇಶವು ಅಮೇರಿಕಾಕ್ಕಿಂತ ಅಪಾರ ಉನ್ನತ ಸ್ಥಾನದಲ್ಲಿದೆ. ಜೊತೆಗೆ ಅರ್ಥಿಕಾಭಿವೃದ್ಧಿ ಹೊಂದಿರುವ ದೇಶವಾದ ಜಪಾನ್ ರಾಷ್ಟ್ರ ಬೌದ್ಧಿಯತೆಯನ್ನುಳ್ಳ ಸುಮಾರು 93% (ಶೇ. 93.0) ರಷ್ಟು ಬೌದ್ಧೀಯರ ಜನ ಸಂಖ್ಯೆಯನ್ನು ಹೊಂದಿ, ಸಂಪದ್ಭರಿತ ಮಾತ್ರವಲ್ಲದೆ ಅತ್ಯುತ್ತಮ ಶಕ್ತಿಸಾಮರ್ಥತೆಯನ್ನು ಪಡೆದಿದೆ.

**ಪ್ರಶ್ನೆ** :— ಬೌದ್ಧೀಯರಿಂದ, ಉತ್ತಮ ಧರ್ಮದತ್ತಿಗಳನೀಯಬಲ್ಲವರ ಬಗ್ಗೆ ಹೆಚ್ಚು ಕೇಳಿ ಬರುತ್ತಿಲ್ಲ. ಇದಕ್ಕೇನು ಕಾರಣ ?

—ಏಕೆಂದರೆ, ಬೌದ್ಧೀಯರು, ತಾವು ಮಾಡಿದ ಉತ್ತಮ ಕಾರ್ಯ ಪ್ರಚಾರಗಳನ್ನು ಮಾಡುವುದರಲ್ಲಿ ನಂಬಿಕೆ ತಳೆದಿಲ್ಲ ಹಾಗೂ ಆ ಬಗ್ಗೆ ಜಂಬ ಕೊಚ್ಚಿಕೊಳ್ಳಲೂ ಅವರು ಇಚ್ಛಿಸುವುದಿಲ್ಲ. ಅನೇಕ ವರ್ಷಗಳ ಹಿಂದೆ, ಜಪಾನ್ ದೇಶದ ಬೌದ್ಧೀಯರ ಮುಖಂಡ 'ನಿಕ್ಕೊ ನಿವಾರ್ನೊ' ಎಂಬುವರು ತಾವು ನೆರವೇರಿಸಿದ ಅತ್ಯುತ್ತಮ ಕಾರ್ಯ ವೈಖರಿಗೆ ಟೆಂಪಲ್‌ಟನ್ ಬಹುಮಾನವನ್ನು—ಪರಸ್ಪರ ಧರ್ಮಗಳ ಸಾಮರಸ್ಯವನ್ನು ವೃದ್ಧಿಸುವಲ್ಲಿ ನೆರವೇರಿಸಿದ ಕಾರ್ಯಕ್ಕಾಗಿ–ಇದನ್ನಿತ್ತು ಗೌರವಿಸಿದರು. ಇದೇ ತರವಾಗಿ, ಒಬ್ಬ ಥಾಯ್‌ಲ್ಯಾಂಡಿನ ಬೌದ್ಧ ಸನ್ಯಾಸಿಯೂ ಇತ್ತೀಚೆಗೆ ತಾನೆ ಅತಿ ಪ್ರತಿಷ್ಠಿತ ಗೌರವ ಪ್ರಶಸ್ತಿಯಾದ ಮ್ಯಾಗ್ ಸೇಸೆ ಬಹುಮಾನವನ್ನು ಈ

ಮಾದಕ ದ್ರವ್ಯಗಳ ಸೇವನೆಯಿಂದುಂಟಾಗುವ ತೊಂದರೆ ನಿವಾರಣೆಗಾಗಿ ನೆರವೇರಿಸಿದ ಕಾರ್ಯಕ್ಕಾಗಿ ಪಡೆದರು. ಇದೇ 1987 ರಲ್ಲಿ ಮತ್ತೊಬ್ಬ ಥಾಯ್‌ಲ್ಯಾಂಡಿನ ಬೌದ್ಧ ಸನ್ಯಾಸಿ, ಪೂಜ್ಯ ಕಂಟಯಪಿವತ್' ಎಂಬುವರಿಗೆ, ಅನೇಕ ವರ್ಷಗಳಿಂದಲೂ ಮನೆಯಿಲ್ಲಿ ಮಕ್ಕಳಿಗೆ ಸಹಾಯಕರಾಗುತ್ತಿದ್ದು ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಈ ಬಗ್ಗೆ ನೀಡಿದ ಉತ್ತಮ ಸಹಕಾರಕ್ಕಾಗಿ, ನಾರ್ವೆ ದೇಶದ ಮಕ್ಕಳ ಶಾಂತಿ ದೌತಕ ಬಹುಮಾನವನ್ನು ಕೊಟ್ಟು ಗೌರವಿಸಿದರು. ಹಾಗೆಯೇ ಪಾಶ್ಚಿಮಾತ್ಯ ಬೌದ್ಧೀಯ ಸಂಘದವರಿಂದ ಇಂಡಿಯಾದಲ್ಲಿ ಹೆಚ್ಚು ಪ್ರಮಾಣದ ಸಾಮಾಜಿಕ ಸೇವೆಯ ರೂಪದಲ್ಲಿ ಬಡವರ ಪುರೋಭಿವೃದ್ಧಿಗಾಗಿ ನಡೆಸಿದ ಸೇವೆ ಏನು ಕಡಿಮೆಯದೆ ? ಇವರು ಪಾಠಶಾಲೆಗಳನ್ನು, ಮಕ್ಕಳ ಮಾನಸಿಕ ವಿಕಾಸನ ಕೇಂದ್ರಗಳನ್ನು, ಆರೋಗ್ಯ ಕೇಂದ್ರಗಳನ್ನು ಮತ್ತು ಸ್ವಯಂ ಉದ್ಯೋಗ ಸಾಧನೆಗೆ ಸಣ್ಣ ಕೈಗಾರಿಕಾ ಸಂಸ್ಥೆಗಳನ್ನು ಕಟ್ಟಿರುವರು. ಬೌದ್ಧೀಯರು, ಅವರ ಧರ್ಮ ವಿಧಿಗಳಂತೆ ಇತರರಿಗೆ ನೀಡಿದುದನ್ನು ತಮ್ಮ ಧರ್ಮದ ಧರ್ಮಕೊಡುಗೆ ಎಂದು ಪರಿಗಣಿಸುವರು. ಇದೇ ವಿಧದ ಧರ್ಮ ಕಾರ್ಯಗಳನ್ನು ಇನ್ನಿತರ ಧರ್ಮದರ್ಶಿಗಳು ನೆರವೇರಿಸುವವರಾದರೂ, ಆ ಬಗೆಗೆ, ಇವರು ಯಾವ ಹೇಳಿಕೆ, ಹೊಗಳಿಕೆ ಮುಂತಾದುವನ್ನು ನೀಡರು, ಬಯಸರು. ಇದನ್ನು ಸರ್ವಶಾಂತ ಮನಸ್ಸಿನಿಂದಲೂ ಮತ್ತು ಸೌಮ್ಯವಾಗಿ ನೆರವೇರಿಸುವರು. ಇವರಲ್ಲಿ ಯಾವ ಬಗೆಯ ಸ್ವಯಂ ಸಾಧನೆಗಳೂ ಇರುವುದಿಲ್ಲ. ಹೀಗೆ ಇವರು ನೀಡುವ ಧರ್ಮದರ್ಶತ್ವಗಳ ಬಗ್ಗೆ ನೀವು ಹೆಚ್ಚಾಗಿ ಕೇಳಲಾರಿರಿ.

**ಪ್ರಶ್ನೆ** :— ಬೌದ್ಧೀಯ ಧರ್ಮಗಳಲ್ಲಿ ಬಗೆ ಬಗೆಯ ತಾರತಮ್ಯಗಳು ಏತಕ್ಕೆ ಇವೆ ?

—ಸಕ್ಕರೆಯಲ್ಲಿ ಬಗೆ ಬಗೆ ತಾರತಮ್ಯಗಳಿವೆ–ಕಂದು ಬಣ್ಣದ ಸಕ್ಕರೆ, ಬಿಳಿಸಕ್ಕರೆ, ಹರಳು ಸಕ್ಕರೆ, ಕಲ್ಲು ಸಕ್ಕರೆ, ಕಾಕಂಬಿ, ಮತ್ತು ಬರ್ಫಿ ಸಕ್ಕರೆ ಮುಂತಾದುವುಗಳಿವೆ. ಆದರೆ, ಇವೆಲ್ಲವೂ ಸಕ್ಕರೆಯೇ ಮತ್ತು ಅವುಗಳ ರುಚಿಯೂ ಸಹ ಸಿಹಿ. ಪ್ರತಿಯೊಂದು ಒಂದೊಂದು ವಿಧಾನದಿಂದ ತಯಾರಾಗಿದೆ. ಅಂತೆಯೇ ಅವುಗಳ ಉಪಯೋಗವೂ ಬೇರೆ ಬೇರೆ ಇದೆ. ಈ ಬೌದ್ಧ ಧರ್ಮಗಳೂ ಸಹ ಹಾಗೆಯೇ. ತೆರವಾಡ ಜೆನ್, ಶುದ್ಧಭೂಮಿ, ಯೋಗಾಚಾರ, ವಜ್ರಯಾನ ಬೌದ್ಧೀಯತೆಗಳಿವೆಯಾದರೂ ಇವೆಲ್ಲವೂ ಬೌದ್ಧ ಧರ್ಮಗಳೇ, ಇವೆಲ್ಲವೂ ಒಂದೇ ರುಚಿಯುಳ್ಳವು— ಅಂದರೆ ಸಂಪೂರ್ಣ ಬಂಧವಿಮೋಚನೆಯುಳ್ಳವುಗಳು. ಈ ಬೌದ್ಧ ಧರ್ಮಗಳ

ವಿವಿಧ ಭಾಗಗಳಾಗಿ ವಿಂಗಡನೆಗೊಂಡು ಆಯಾ ದೇಶದ ನಾಗರೀಕತೆ, ಸಂಸ್ಕೃತಿಗೆ ಹೊಂದಿಕೊಂಡು ಸಹ ಜೀವನ ನಡೆಸಲು ಸಹಾಯಕವಾಗಲೆಂದು ಈ ಬಗೆಯ ಸಾಮಾನ್ಯ ಭಿನ್ನತೆಗಳಿವೆ. ಇದು ಅಗಾಗ್ಗೆ ಪುರುವಾಚ್ಯವನ್ನು ಹೊಂದಿದೆ ಏಕೆಂದರೆ, ಶತ ಶತಮಾನಗಳಲ್ಲಿ ಉಗಮವಾಗುವ ಹೊಸ ಪೀಳಿಗೆಗಳಿಗೆ ಅನುಕೂಲವಾಗುವಂತೆಯೂ ಮಾರ್ಪಾಟು ಹೊಂದಿರಲಿಕ್ಕು ಸಾಧ್ಯ. ಹೊರ ವ್ಯವಹಾರಗಳಿಗೆ ವಿಭಿನ್ನತೆ ಗೋಚರಿಸಿದರೂ, ಇದರ ಪ್ರಮುಖ ಕೇಂದ್ರಗಳು ಚತುರಾರ್ಯ ಸೂತ್ರಗಳಲ್ಲಿ ಕೇಂದ್ರೀಕರಿಸಿದೆ ಮತ್ತು ಅಷ್ಟಾಂಗ ಸೂತ್ರಗಳಲ್ಲಿಯೂ ಇದೆ. ಎಲ್ಲಾ ಪ್ರಮುಖ ಧರ್ಮಗಳು. ಬೌದ್ಧೀಯ ಧರ್ಮವೂ ಸೇರಿದಂತೆ, ಮುಖ್ಯ ಶಾಖೆಗಳು ಮತ್ತು ಪಂಥಗಳಾಗಿ ವಿಂಗಡಣೆಗೊಂಡಿವೆ. ಹೀಗಿದ್ದರೂ ಈ ಬಗೆ ಬಗೆಯ ಶಾಖೆಗಳು ಎಂದು ಪರಸ್ಪರವಿರೋಧಾಭಾಸಗಳಿಗೆ ಕೈ ಹಾಕಿಲ್ಲ; ಅಲ್ಲದೆ ಯಾವೊಂದು ಆಶೆಯು ಮತ್ತೊಂದರ ವಿರುದ್ಧ ಯಾವ ಕಪಟ ಅಥವಾ ಮೋಸವೇಷಗಲು ತವಕಿಸಿಲ್ಲ; ಇದು ಇಲ್ಲಿಯವರೆಗೂ ನಡೆದುಕೊಂಡೇ ಬಂದಿದೆ. ಇವರು ಪರಸ್ಪರ ಸೌಹಾರ್ದತೆಯಿಂದ ಬೇರೆಯವರ ಗುಡಿ-ದೇವಾಲಯಗಳಿಗೂ ಹೋಗಿ ಒಂದಾಗಿ ಪೂಜಿಸುವರು. ಇಂತಹ ಸಹಿಷ್ಣುತೆ ಮತ್ತು ಪರಸ್ಪರ ಸ್ವಚ್ಛ ತಿಳುವಳಿಕೆ ಪಡೆದಿರುವ ಇತರ ಧರ್ಮಗಳು ನಿಜವಾಗಿಯೂ ಅತಿ ವಿರಳ.

ಪ್ರಶ್ನೆ :— ಬೌದ್ಧೀಯ ಧರ್ಮಗಳ ಬಗ್ಗೆ ನಿಮಗೆ ಅತಿಯಾದ ಗೌರವವಿದೆ ಆದುದರಿಂದ ಆ ಬಗೆಯ ನಿಮ್ಮ ಆಲೋಚನೆಗಳು ಅಪಾರ. ನಾನು ಬಹುಶಃ ನಿಮ್ಮ ಧರ್ಮಗಳು ಮಾತ್ರ ಸ್ವಚ್ಛ, ನ್ಯಾಯುವಾದುದು ಇತರ ಧರ್ಮಗಳೆಲ್ಲಾ ತಪ್ಪು ಭಾವನೆಯವು ಎಂಬುದು ನಿಮ್ಮ ಆಲೋಚನೆಯಲ್ಲವೇ ?

—ಇಲ್ಲ, ಭಗವಾನ್ ಬುದ್ಧರ ಬೋಧನೆಗಳನ್ನು ಸರಿಯಾಗಿ ತಿಳಿದುಕೊಂಡಿರುವ ಬೌದ್ಧೀಯರು, ಇತರೇ ಧರ್ಮಗಳು ತಪ್ಪೆಂದು ಭಾವಿಸಾರು. ಈ ದಿಸೆಯಲ್ಲಿ ನಿಷ್ಪಕ್ಷಪಾತ ವಿಮರ್ಶೆಯನ್ನು ಮಾಡಿ ಪರೀಕ್ಷಿಸಿದವರು ತಮ್ಮ ತೆರೆದ ಮನಸ್ಸಿನಿಂದ ಇತರ ಧರ್ಮಗಳ ಬಗ್ಗೆ ಈ ಆರೋಪಣೆಯನ್ನು ಮಾಡರು. ವಿವಿಧ ಧರ್ಮಗಳ ರೀತಿ ನೀತಿಗಳನ್ನು ವಿವೇಚಿಸಲು ಪ್ರಯತ್ನಿಸಿದಾಗ, ಪ್ರಪ್ರಥಮವಾಗಿ ನಾವು ಪರಿಗಣಿಸುವುದು ಅವೆಷ್ಟು ನಿಯಮಗಳಲ್ಲಿ ಏಕಸಾಮ್ಯತೆ ಹೊಂದಿವೆ ಎಂಬುದನ್ನು ಪರಿಗಣಿಸುವುದು. ಈ ಎಲ್ಲಾ ಧರ್ಮಗಳೂ ಸಹ ತಮ್ಮ ತಮ್ಮಲ್ಲೇ ವಿವೇಚಿಸಿದಾಗ ನಿರ್ಧರಿಸುವುದು ಇಂದು ಮಾನವನ ಅಂತಸ್ತು ಯಾವ ವಿಧದಲ್ಲೂ

ತೃಪ್ತಿಕರವಾಗಿಲ್ಲವೆಂಬುದನ್ನೂ ಒಪ್ಪುವುವು. ಇಂತಹ ಸನ್ನಿವೇಶಗಳಲ್ಲಿ, ಮಾನವ ಇಂದಿನ ಗುಣ-ನಡವಳಿಕೆಗಳು ಮತ್ತು ಅಂತರ್ಯ ಭಾವನೆಗಳು ನವೀಕರಣ ಹೊಂದದೆ, ಯಾವ ಔನ್ನತಿಯನ್ನೂ ನಿರೀಕ್ಷಿಸಲಾಗದು. ಇವೆಲ್ಲಾ ಧರ್ಮಗಳೂ ತತ್ವಶಾಸ್ತ್ರಗಳಂತೆ, ಪ್ರೀತಿ, ದಯೆ, ಸಹನೆ, ಉದಾರತ್ವ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಕುರಿತಾದ ಬೋಧನೆಗಳನ್ನು ಮಾಡುತ್ತವೆ ಮತ್ತು ನಿರ್ಬಂಧವಿಲ್ಲದ ಎಲ್ಲಾ ಭಾಗಗಳನ್ನೂ ಒಪ್ಪಿಕೊಳ್ಳವುವೂ ಸಹ.

ಇವರು ಬೇರೆ ಬೇರೆ ಭಾಷೆಗಳನ್ನು ಬಳಸುವರು, ಬೇರೆ ಬೇರೆ ಹೆಸರುಗಳನ್ನು ಮತ್ತು ವಿವಿಧ ಸಂಜ್ಞೆ ಸಂಕೇತಗಳನ್ನು ತಮ್ಮ ಸ್ವಭಾವಗಳನ್ನು ವಿವರಿಸಲು ಉಪಯೋಗಿಸುವರು. ಅಲ್ಲದೆ, ತಮ್ಮ ಕಿರಿದಾದ ಭಾವನೆಗಳಿಂದ ಕೂಡಿದವರಾದಾಗ ಅವರು ಸರ್ವ ವಸ್ತುಗಳನ್ನು ಒಂದೇ ಮಾರ್ಗದಲ್ಲಿ ದೃಷ್ಟಿಸುವರು. ಅವೆಂದರೆ, ಈ ಧರ್ಮಗಳ ಅಸಹಿಷ್ಣುತೆ, ಗರ್ವ ಮತ್ತು ಸ್ವಯಂ ಉತ್ತಮತೆ ಭಾವಗಳು ಉದ್ಭವಿಸಿಕೊಳ್ಳುವುವು

ಒಬ್ಬ ಆಂಗ್ಲೇಯ, ಪ್ರೆಂಚ್, ಚೀಣ ಮತ್ತು ಇಂಡೋನೇಷಿಯಾದವನು ಇವರೊಬ್ಬರು. ಒಂದು ಲೋಟವನ್ನು ನೋಡುತ್ತಿರುವಂತೆ ಊಹಿಸಿಕೊಳ್ಳಿ. ಆಂಗ್ಲೆಯನು ಅದೊಂದು 'ಕಪ್' ಎಂದು ಹೇಳಿದರೆ ಪ್ರೆಂಚ್‌ನವನು ಉತ್ತರಿಸುತ್ತ ಅದು ಕಪ್ ಅಲ್ಲ, ಅದು 'ಟಸ್ಸೆ' ಎನ್ನುವನು ಆಗ, ಚೀಣದವನು ಆ ಬಗ್ಗೆ ತರ್ಕಿಸುತ್ತಾ 'ನೀವಿಬ್ಬರೂ ತಪ್ಪು' ಆದೊಂದು 'ಪೆಯೋ' ಎಂದಾಗ, ಇಂಡೋನೇಷಿಯಾದವನು, ನಗುತ್ತಾ ಹೇಳುವನು 'ನೀವೆಂತಹ ಅವಿವೇಕಿಗಳು, ಅದೊಂದು ಕರ್ವ' ಅಲ್ಲವೇ ಎನ್ನುವನು. ತದನಂತರ ಪ್ರೆಂಚ್ ಭಾಷೆಯವನು ಹೇಳುವನು, 'ನಿಮ್ಮ ಭಾಷಾ ನಿಘಂಟೇ ತಪ್ಪು, ಏಕೆಂದರೆ ನನ್ನ ಭಾಷಾನಿಘಂಟು ನಿಸ್ಸಂದೇಹವಾಗಿ ಅದು 'ಟಸ್ಸೆ' ಎಂದೇ ಹೇಳುವುದು. ಆಗ ಚೀಣಾದವನು ಅವರನ್ನು ಹೀಯಾಳಿಸುತ್ತಾ ಹೇಳುವನು 'ನಮ್ಮ ಭಾಷಾನಿಘಂಟು ಅನೇಕ ಸಾವಿರ ವರ್ಷಗಳಷ್ಟು ಹಳೆಯದು. ಆದುದರಿಂದ ಅದೇ ಸರಿ ಇರುವುದು, ಅಲ್ಲದೆ ಚೀಣಾಭಾಷಿಗಳು ಇತರ ಭಾಷೆಗಳಿಗಿಂತ ಅತ್ಯಧಿಕ. ಆದುದರಿಂದ ಅವರ 'ಪೆಯೊ' ಎಂಬುದೇ ಸರಿ ಹೀಗೆ ಅವರು ಕ್ಷುಲ್ಲಕ್ ಕಾರಣಗಳಿಗಾಗಿ ಜಗಳವಾಡುತ್ತಿರುವಾಗ, ಒಬ್ಬ ಬೌದ್ಧೀಯನು ಅಲ್ಲಿಗೆ ಬಂದನು. ಆಲೋಟದಲ್ಲಿದ್ದುದನ್ನು ಕುಡಿದನು. ಹೀಗೆ ಕುಡಿದನಂತರ, ಇವನು ಇತರರಿಗೆ ಹೇಳುತ್ತಾನೆ. 'ನೀವು ಅದನ್ನು ಕಪ್, ಟಸ್ಸೆ, 'ಪೆಯೊ' ಅಥವಾ ಕರ್ವ ಓಗೆ

ಏನೆಂದು ಕರೆದರೂ ಅದು ಇರುವ ಉದ್ದೇಶ, ಅದನ್ನು ಬಳಸುವುದಕ್ಕೆ. ನಿಮ್ಮ ಈ ವಾಗ್ವಾದ ಮತ್ತು ಜಗಳವನ್ನು ನಿಲ್ಲಿಸಿರಿ, ನಿಮ್ಮ ದಾಹವನ್ನು ನಿವಾರಿಸಿಕೊಳ್ಳಿರಿ' ಎಂದನು. ಇದೇ ಬೌದ್ಧೀಯರ ಅಭಿಮತ ಇತರೇ ಧರ್ಮಗಳನ್ನು ಕುರಿತು.

**ಪ್ರಶ್ನೆ :—** ಬೌದ್ಧೀಯ ಧರ್ಮವು ವೈಜ್ಞಾನಿಕವಾಗಿದೆಯೇ ?

—ಈ ಪ್ರಶ್ನೆಗೆ ಉತ್ತರವೀಯುವ ಮೊದಲು, 'ವಿಜ್ಞಾನ'ವೆಂಬ ಶಬ್ದವನ್ನು ನಾವು ನಿರೂಪಿಸಬೇಕಾಗಿದೆ. "ವಿಜ್ಞಾನ" ಎಂಬುದು ಶಬ್ದನಿಘಂಟಿನ ಪ್ರಕಾರ ಕ್ರಮಬದ್ಧತೆಯ ಜ್ಞಾನವೇಬುದು, ಇದನ್ನು ವೀಕ್ಷಣತೆ, ಸತ್ಯಾಂಶಗಳನ್ನು ಪರೀಕ್ಷಿಸುವುದು, ಸಾಮಾನ್ಯ ನೀತಿ ನಿಯಮಗಳನ್ನು ಸೂತ್ರಗಳನ್ನು ನಿರೂಪಿಸುವುದು, ಯಾವ ವಿಷಯವನ್ನೇ ಆಗಲಿ ನಿಖರವಾಗಿ ಅರಿತುಕೊಳ್ಳಬಲ್ಲ ಜ್ಞಾನಪರಿಧಿ."

ಬೌದ್ಧ ಧರ್ಮಗಳಲ್ಲಿ ಈ ನಿಯಮಗಳಡಿಯಲ್ಲಿ ನಿರ್ಧಾರಗೊಳಿಸಲಾರದ ಸಂದರ್ಭಗಳು ಇವೆ. ಆದರೆ ಈ ಬೌದ್ಧೀಯ ಪ್ರಬೋಧನೆಗಳ ಪ್ರಮುಖ ತಿರುಳು ಚತುರಾರ್ಯ ಸೂತ್ರಗಳು ಹೆಚ್ಚು ಸಾಮರಸ್ಯದಿಂದ ಹೊಂದಿಕೊಳ್ಳಬಲ್ಲವು. ಪ್ರಥಮ ಸರ್ವೋತ್ತಮ ಸತ್ಯಸೂತ್ರವು ಸಂಕಟದ ಅನುಭವಗಳನ್ನು ಹೇಳುತ್ತದೆ, ಮತ್ತು ಅದನ್ನು ನಿರೂಪಿಸಿ ವಿವರಣೆ ನೀಡಿ, ಅದರ ಪ್ರಮಾಣದ ಅಳತೆಯನ್ನೂ ಮಾಡಬಲ್ಲದು. ಇದರ ಎರಡನೆಯ ಸೂತ್ರವು, ಸಂಕಟಾನುಭವಗಳಿಗೆ ಸ್ವಾಭಾವಿಕ ಕಾರಣಗಳನ್ನು, ಹಂಬಲವನ್ನೂ ಅದೇ ರೀತಿ ನಿರೂಪಿಸಬಲ್ಲದಾಗಿದೆ, ಅನುಭವಗಳನ್ನೊಡ್ಡಿ ಅವುಗಳ ಅಳತೆಯನ್ನು ನಿರ್ಧರಿಸಬಲ್ಲದು. ಸಂಕಟಗಳನ್ನು ಅಧ್ಯಾತ್ಮಿಕ ವಿದ್ಯೆಯ ಭಾವಸೂತ್ರಗಳಿಂದ ವಿವರಿಸುವ ಅಥವಾ ಯಾವ ಕಟ್ಟು ಕಥೆಗಳಿಂದ ವಿವರಿಸಲಾಗದು. ಈ ಸಂಕಟಗಳು ಮೂರನೆಯ ಸತ್ಯ ಸೂತ್ರದಾಧಾರದ ಮೇಲೆ ಅಂತ್ಯಗೊಳ್ಳುವುದು. ಆದರೆ, ಇದು ಯಾವುದೋ ಒಂದು ಪರಮ ಶ್ರೇಷ್ಠ ಪ್ರಾಣಿಯ ಮರೆ ಹೋಗುವುದರಿಂದಲ್ಲ, ಅಥವಾ ಮೂಢ ನಂಬಿಕೆ ಅಥವಾ ಪ್ರಾರ್ಥನೆಗಳಿಂದಲೂ ಅಲ್ಲ; ಆದರೆ ಈ ಸಂಕಟದ ಕಾರಣಗಳನ್ನು ಮೂಲೋತ್ಪಾದನೆ ಸಹಿತ ಹೊರ ಹಾಕುವುದರಿಂದ; ಇದೇ ಸ್ವಯಂ ಸಿದ್ಧತೆ. ನಾಲ್ಕನೆಯ ಸತ್ಯಸೂತ್ರವು, ಈ ಸಂಕಟವನ್ನು ಮತ್ತೊಮ್ಮೆ ತೊಡೆದು ಹಾಕುವ ಮಾರ್ಗವನ್ನಲ್ಲದೆ, ಯಾವ ಆಧ್ಯಾತ್ಮ ವಿದ್ಯೆಯ ಅವಶ್ಯಕತೆ ಹೊಂದದೆ, ಕೇವಲ ಒಂದು ನಿರ್ದಿಷ್ಟ ವಿಧಾನದ ನಡವಳಿಕೆಗಳಿಂದ ವರ್ತಿಸುವುದರ ಮೂಲಧಾರಿತವನ್ನು ಹೊಂದಿದೆ. ಮತ್ತೊಮ್ಮೆ ಈ

ನಡವಳಿಕೆಗಳನ್ನು ತೆರೆದು ಪರೀಕ್ಷೆಗೊಳಪಡಿಸುವುದರಿಂದ ಸಾಧ್ಯ. ಬೌದ್ಧ ಧರ್ಮವು, ವಿಜ್ಞಾನವು ಬೋಧಿಸುವಂತೆ, ಅತ್ಯಮೋಘ ಶಕ್ತಿಯ ಇರುವಿಕೆಯನ್ನು ತೋರೆದಿದೆ; ಮತ್ತು ವಿಶ್ವಾಂತರವನ್ನು ಪ್ರಕೃತಿ ನಿಯಮಾನುಸಾರದ ನಿಯಮಗಳಿಂದ, ಅದರ ಮೂಲಗಳನ್ನು ಮತ್ತು ಕ್ರಿಯಾತ್ಮತೆಯನ್ನೂ ವರ್ಣಿಸುತ್ತದೆ. ಇವೆಲ್ಲವೂ ಖಚಿತವಾಗಿ ವೈಜ್ಞಾನಿಕ ವಿಶ್ಲೇಷಣೆಗಳನ್ನೇ ನೀಡುತ್ತಿದೆ. ವೈಜ್ಞಾನಿಕ ಮನೋಭಾವವನ್ನು ಪ್ರತಿ ರೂಪಿಸುತ್ತಿವೆ. ಇದರ ಜೊತೆಗೆ, ಭಗವಾನ್ ಬುದ್ಧರು ತಮ್ಮ ಪ್ರಬೋಧನೆ ಗಳಲ್ಲಿ "ನಾವು ಯಾವುದನ್ನು ಅಂಧನಂಬಿಕೆಯಿಂದ ನಿರ್ಧರಿಸಬಾರದು, ಬದಲಾಗಿ ಸರ್ವವನ್ನೂ ಪ್ರಶ್ನಿಸಿ, ಪರೀಕ್ಷಿಸಿ, ವಿಮರ್ಶಿಸಿ ಮತ್ತು ಆ ಬಗೆಗೆ ನಮ್ಮ ಅನುಭವಗಳನ್ನೂ ರೂಢಿಸಿದ ನಂತರ ತೀರ್ಮಾನಿಸುವುದು" ಎಂದಿದ್ದಾರೆ ಅಂದಮೇಲೆ ಇದೆಂತಹ ತೀಕ್ಷ್ಣ ವಿಜ್ಞಾನ ಮೂಲಾಧಾರ ಹೊಂದಿದೆ ಎಂಬುದನ್ನು ಅರಿಯಬಹುದಲ್ಲವೇ ? ಅಲ್ಲದೆ, ಅವರು ಮತ್ತೂ ಹೇಳುವರು.

"ಯಾವ ಬಗೆಯ ಆ ವೇದ ಪ್ರಮೋದಗಳನ್ನು ಸಾಂಪ್ರದಾಯಿಕ ಪ್ರಭಾವದಿಂದ ನಿರ್ಧರಿಸಬೇಡ ; ಹಾಗೆಯೇ ಯಾವ ಊಹಾ ಪೋಹಗಳಿಗೂ ಮರುಹೋಗಬೇಡ ಅಥವಾ ಯಾವ ಪವಿತ್ರ ಗ್ರಂಥಗಳಿಂದಲೂ ಪ್ರಭಾವಿತ ನಾಗಬೇಡ. ಕಂತೆ-ಕಂತೆ ಕೇಳಿಕೆಗಳಿಗೆ ಓಗೊಡಬೇಡ ಅಥವಾ ಕೇವಲ ತರ್ಕ ವಿಭಾಗಕ್ಕೇ ಹೊಂದಿಕೊಳ್ಳಬೇಡ ; ಯಾವ ಒಲವು ಇಲ್ಲವೇ ಪಕ್ಷ ಪಾತಗಳ ಮರೆ ಹೊಕ್ಕು ಅದನ್ನು ರಾಷ್ಟ್ರಕ್ಕೆ ಅಳವಡಿಸಬೇಡ ಅಥವಾ ಯಾವ ಸಾಮರ್ಥ್ಯ ಪಡೆದವನ ದೃಷ್ಟಿ ಮರ್ಜಿಯನ್ನು ಪಡೆಯಬೇಡ. ಅಲ್ಲದೆ 'ಅವರು ನಮ್ಮ ಗುರು ಅಥವಾ ಮಾರ್ಗದರ್ಶಕರು' ಎಂಬ ಮುದ್ದ ಭಾವವನ್ನೂ ಹೊಂದಿ ಅವರ ಆಶೀರ್ವಚನಗಳನ್ನು ಪರಿಪಾಲಿಸಬೇಡ. ಆದರೆ ನೀವೇ ನಿಮ್ಮ ಸ್ವಂತ ಅನುಭವದಿಂದ ಒಂದು ವಸ್ತುವು ಒಳ್ಳೆಯದೆಂದು ಗುರುತಿಸಿದಾಗ, ಹಾಗೂ ಅದು ಅಪವಾದ ವಿಮುಕ್ತವೆಂದು ತಿಳಿದಾಗ ಅದು ತನ್ನ ಆ ಉತ್ತಮ ಗುಣ ಮಟ್ಟವನ್ನು ಅನೇಕ ಬುದ್ಧಿವಂತರಿಂದ ಪ್ರಶಸ್ತಿಗೊಳಗಾದಾಗ ಮತ್ತು ಅದನ್ನು ಪ್ರಯೋಗಿಕವಾಗಿ ಅನುಭವಿಸಿ ವಿಶ್ಲೇಷಣೆ ಪಡೆದು, ಅದು ಸಂತೋಷದೆಡೆಗೆ ಸಾಗಿಸುವುದೆಂದು ಖಚಿತ ಗೊಂಡಾಗ, ಅಂತಹ ವಸ್ತುವನ್ನು ನಂಬಿ ಬಳಸಿ ಪ್ರಯೋಜನ ಪಡೆ."

ಆದುದರಿಂದ, ಬೌದ್ಧ ಧರ್ಮಗಳು ಒಟ್ಟಾರೆ ವೈಜ್ಞಾನಿಕ ಭಾಗವಲ್ಲಿ ದಿದ್ದರೂ, ಅದು ಅತಿ ಪ್ರಬಲವಾದ ವೈಜ್ಞಾನಿಕ ಮೌಲ್ಯವನ್ನು ಖಂಡಿತ

ವಾಗಿಯೂ ಹೊಂದಿದೆ ಮತ್ತು ಇದು, ಇತರೆ ಬೇರಾವ ಧರ್ಮಗಳಿಗಿಂತಲೂ ಅತ್ಯುತ್ತಮ ವೈಜ್ಞಾನಿಕ ವಿಶ್ಲೇಷಣೆಗಳನ್ನೊಳಗೊಂಡಿದೆ. ಅಲ್ಬರ್ಟ್ ಐನ್‌ಸ್ಟೀನ್ ಇಪ್ಪತ್ತನೆಯ ಶತಮಾನದ ಒಬ್ಬ ವೈಜ್ಞಾನಿಕ ದುರೀಣರು. ಈ ಬೌದ್ಧ ಧರ್ಮದ ಬಗ್ಗೆ ಹೀಗೆ ತಮ್ಮ ಅಭಿಪ್ರಾಯ ನೀಡಿರುವರು.

"ಭವಿಷ್ಯ ಸಾರ್ವಜನಿಕ ಧರ್ಮಗಳು" ವಿಶ್ವಮಾನವ ಧರ್ಮಗಳಾಗುವುವು. ಅದು ಇಂದಿನ ವೈಯಕ್ತಿಕ ದೇವರನ್ನು ಅತಿಶಯಿಸುವುದು ಮತ್ತು ಅದು ಸಿದ್ಧಾಂತಗಳನ್ನು ಮತ್ತು ಪಾರಮಾರ್ಥ ಜ್ಞಾನವನ್ನು ತಪ್ಪಿಸುವುದು ಪ್ರಕೃತಿದತ್ತ ಮತ್ತು ಆಧ್ಯಾತ್ಮಿಕತೆಗಳ ಸಹಿತ, ಸರ್ವವಸ್ತುಗಳ ಅನುಭವದಿಂದಾಗಿರುವ ಹಾಗೂ ಅತಿ ಅರ್ಥಗರ್ಭಿತವಾದ ಒಕ್ಕೂಟವುಳ್ಳ ಧರ್ಮ ಭಾವಗಳಿಂದ ಉತ್ಪತ್ತಿಯಾಗುವುದು. ಇದಕ್ಕೆ ಬೌದ್ಧೀಯ ಧರ್ಮವೊಂದೇ ಉತ್ತರ ಹಾಗೂ ಉತ್ತಮವೂ ಆಗುವುದೆಂಬುದನ್ನು ವಿವರಿಸುವುದು. ಇಂದಿನ ನೂತನ ವೈಜ್ಞಾನಿಕ ಮನೋವೃತ್ತಿ ತಳೆದು ಬೆಳೆಯುತ್ತಿರುವ ಧರ್ಮ ನಡವಳಿಕೆಗಳ ಸಮೂಹಕ್ಕೆ ಕೇವಲ ಬೌದ್ಧ ಧರ್ಮಗಳು ಮಾತ್ರ ಈ ಅವಶ್ಯಕತೆಗಳನ್ನೊದಗಿಸಬಲ್ಲದು.

## 2 ಬೌದ್ಧೀಯತೆಯ ಮೂಲ ಭಾವನೆಗಳು

**ಪ್ರಶ್ನೆ** :— ಭಗವಾನ್ ಬುದ್ಧರ ಅತಿ ಪ್ರಮುಖ ಬೋಧನೆಗಳಾವುವು ?

— ಭಗವಾನ್ ಬುದ್ಧರ ಸರ್ವಬೋಧನೆಗಳು ಚತುರಾರ್ಯ ಸೂತ್ರಗಳ ಕೇಂದ್ರವನ್ನು ಹೊಂದಿದ್ದು, ಉಳಿದವುಗಳು ಚಕ್ರದ ಹೊರ ಅಂಕ ಪಟ್ಟಿಗಳು ಮತ್ತು ಅದರ ನಿಚ್ಚಣಿಕೆಯ ಕಡ್ಡಿ ವೊಳೆಗಳು ಸೇರಿಕೊಳ್ಳುವ ಗಾಲಿಯ ಮಧ್ಯ ಭಾಗಗಳಂತಿವೆ. ಇವುಗಳು ನಾಲ್ಕು ಎಂದು ಕರೆದಿರವರು ಏಕೆಂದರೆ, ಅವು ನಾಲ್ಕು ಭಾಗವಾಗಿವೆ. ಇವುಗಳನ್ನು 'ನೋಬಲ್' ಅಥವಾ ಸರ್ವಶ್ರೇಷ್ಠವಾದುವು ; ಏಕೆಂದರೆ, ಇವುಗಳನ್ನು ಸಂಪೂರ್ಣ ತಿಳಿದುಕೊಂಡವರನ್ನು ಉದಾತ್ತನಗೊಳಿಸುವುವು ಮತ್ತು ಅವುಗಳನ್ನು ಸತ್ಯಾರ್ಥಗಳೆನ್ನುವರು ಏಕೆಂದರೆ ವಾಸ್ತವಿಕತೆಯಲ್ಲಿ ಅವು ಸತ್ಯಗಳೇ.

**ಪ್ರಶ್ನೆ** :— ಪ್ರಥಮ ಸತ್ಯಾರ್ಥ ಸೂತ್ರವೇನು ?

—ಪ್ರಥಮ ಸತ್ಯಾರ್ಥ ಸೂತ್ರವು, ಜೀವನವು ಸಂಕಟಗಳನ್ನು ಅನುಭವಿಸುವುದರಿಂದ ಕೂಡಿದೆ ಎಂಬುದು. ಜೀವಂತವಾಗಿರಬೇಕೆಂದರೆ ನೀವು ಸಂಕಟಾನುಭವಿಗಳಾಗಬೇಕು. ಯಾವುದೆ ಬಗೆಯದಾದರೂ ಸರಿ,

ಸಂಕಟವನ್ನನುಭವಿಸದೆ ಜೀವಿಸಿರುವುದು ದುಸ್ಸಾಧ್ಯ. ನಾವು ಜೀವಿಸಿರುವ ತನಕ, ಭೌತಿಕ ಭವಣೆಗಳಾದ, ರೋಗ, ಘಾಯ, ಆಯಾಸ, ವೃದ್ಧಾಪ್ಯ ಮತ್ತು ಕಟ್ಟಕಡೆಗೆ ಸಾವು ಮತ್ತು ಇವುಗಳೊಡನೆ ಮಾನಸಿಕ ವೇದನೆಗಳು, ಏಕಾಂತತೆ, ನಿರಾಶಾಭಾವ, ಭಯ, ಸೂಕ್ಷ್ಮ ವೇದನೆ, ಹತಾಶ ವೇದನೆ, ಕೋಪ ಮುಂತಾದುವುಗಳನ್ನು ಅನುಭವಿಸಲೇಬೇಕು.

**ಪ್ರಶ್ನೆ :—** ಇದು, ನಿರಾಶಾವಾದವನ್ನು ಸ್ವಲ್ಪ ಮಟ್ಟಿಗೆ ಹೊಂದಿದೆ ಯಲ್ಲವೇ ?

—ಶಬ್ದಕೋಶವು ಈ ನಿರಾಶಾವಾದವನ್ನು "ಏನೇನು ಸಂಭವಿಸಬಹುದೋ ಅದು ಕೆಟ್ಟದ್ದಾಗಿಯೇ ಇರುವುವೆಂಬ ಆಲೋಚನೆಯುಳ್ಳದ್ದು" ಎಂದು ತಿಳಿಸುವುದು ಅಥವಾ "ದುಷ್ಟ ಸಂಭಾವನೀಯಗಳು, ಉತ್ತಮತೆಗಿಂತ ಪ್ರಬಲ ಶಕ್ತಿಯುತಗಳು" ಎಂದೇ ನಂಬಿರುವುದು. ಬೌದ್ಧೀಯ ಧರ್ಮ ಈ ಎರಡು ಸಂದರ್ಭಗಳನ್ನು ಬೋಧಿಸುವುದಿಲ್ಲ. ಅಥವಾ ಅದು ಸಂತೋಷ ಸನ್ನಿವೇಶಗಳು ಇಲ್ಲವೇ ಇಲ್ಲವೆಂದೂ ಬೋಧಿಸದು. ಇದು ಜೀವಿಸಿರುವಾಗ ಕೇವಲ ಆ ಜೀವಿಯು ಶಾರೀರಿಕ ಹಾಗೂ ಮಾನಸಿಕ ಸಂಕಟಗಳನ್ನು ಅನುಭವಿಸುವುದು ಅವಶ್ಯಕವಾಗುತ್ತದೆಂಬುದನ್ನು ಮಾತ್ರ ಹೇಳುತ್ತದೆ. ಇದನ್ನು, ಅಸತ್ಯವೆಂದು ತಿಳಿದು, ಬಿಟ್ಟು ಬಿಡುವಂತಹ ಬೋಧನೆಯಂತೂ ಅಲ್ಲ. ಅನೇಕ ಇತರ ಧರ್ಮಗಳ ಪ್ರಮುಖ ಕೇಂದ್ರಿಕೃತ ಭಾವನೆಗಳು, ಕಟ್ಟುಕಥೆ, ದಂತ ಕಥೆ ಅಥವಾ ಗಾಢವಾದ ನಂಬಿಕೆ, ಪೂರ್ಣನಂಬುವುದಾಗಲೀ ಅಥವಾ ಅದನ್ನು ಪರೀಕ್ಷಿಸುವ ಸಾಧ್ಯತೆಯನ್ನಾಗಲೀ ಹೊಂದಿರುವುದಿಲ್ಲ. ಆದರೆ ಬೌದ್ಧ ಧರ್ಮಗಳು, ಸಂಪೂರ್ಣ ಸ್ವಯಂ ಅನುಭವಗಳಿಂದ ಆರಂಭಿಸಿ, ಯಾವ ಖಂಡನೆಗೆ ಅನರ್ಹವಾದ ಅಥವಾ ಸುಳ್ಳೆಂದು ದೃಢಿಕರಿಸಲಾಗದ ಮತ್ತು ಅಂತಹ ವಿಷಯಗಳನ್ನು ಸರ್ವರೂ ತಿಳಿಯಬಹುದಾದುವು, ಅನುಭವ ಸಾಧ್ಯವಾದುವು, ಮೇಲಾಗಿ ಅವು ಕ್ಲಿಷ್ಟವಾದುವುಗಳಾದರೂ ಜಯಿಸಬಹುದಾಗಿರುವುವು. ಹೀಗೆ, ಬೌದ್ಧೀಯ ಧರ್ಮಗಳೇ ವಿಶ್ವಸಮ್ಮತ ಧರ್ಮವಾಗಿದೆ ಏಕೆಂದರೆ ಇದಕ್ಕೆ ಸಂಬಂಧಿಸಿದ ಪ್ರತಿ ವ್ಯಕ್ತಿಯ ಪೂರ್ಣ ವಿಮರ್ಶೆ ಮತ್ತು ವಿಮೋಚನೆಗೆ ನೆರವೇರುವ ಒಂದು ಅವಶ್ಯಕ ಸಾಧನ—ಜೊತೆಗೆ, ಸಂಕಟಗಳನಿವಾರಣೆ ಮಾರ್ಗ ಇಲ್ಲವೇ ಅವುಗಳನ್ನು ತೊರೆಯುವ ಸಾಧನೆಗೆ ಕರೆದೊಯ್ಯುವುದು.

**ಪ್ರಶ್ನೆ :** ಎರಡನೆಯ ಸತ್ಯಾರ್ಥ ಸೂತ್ರವೆಂಬುದೇನು ?

—ಎರಡನೆಯ ಸತ್ಯಾರ್ಥ ಸೂತ್ರವು, ಮಾನವನ ಸರ್ವಸಂಕಟಗಳು ಕೇವಲ ಅವನಲ್ಲುಂಟಾಗುವ ಹಂಬಲ ಅಥವಾ ತೃಷ್ಣೆಯಿಂದಲೇ

ಉದ್ಭವವಾಗುತ್ತವೆ, ಇದೇ ಈ ಸಂಕಟಗಳ ಮೂಲ ಕಾರಣವೆಂದು ತಿಳಿಸುವುದು. ನಾವು ಮಾನಸಿಕ ಕ್ಲೇಶಗಳನ್ನು ದೃಷ್ಟಿಸಿದರೆ, ಇದು ಹೇಗೆ ಕೇವಲ ಹಂಬಲಭಾವನೆಯಿಂದಲೇ ಉಗಮವಾಗಿದೆ ಎಂಬುದನ್ನು ಅತಿ ಸುಲಭವಾಗಿ ಗಮನಿಸಬಹುದು. ನಾವೊಂದನ್ನು ಬಯಸಿ, ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ನಾವು ಹತಾಶ ಮನೋಭಾವ ಹೊಂದುವೆವು. ನಮ್ಮ ನಿರೀಕ್ಷಣೆಗೆ ಸರಿದೂಗುವಂತೆ ಕೆಲವರು ತಮ್ಮ ಜೀವನ ಮಟ್ಟವನ್ನು ಪಡೆದು ಜೀವಿಸಲು ಸಾಧ್ಯವಾಗದಿದ್ದಾಗ, ಆಗ ಅವರು ನಮ್ಮ ನಿರೀಕ್ಷಣೆಯ ಮಟ್ಟಕ್ಕೇರಲಿಲ್ಲವೆಂದು ಸಂಕಟ ಪ್ರವೃತ್ತಿಗೆ ಒಡ್ಡಿಕೊಳ್ಳುವರು ಮತ್ತು ಆಮೂಲಕ ನಾವು ನಿರಾಶರಾಗುತ್ತೇವೆ. ನಮ್ಮನ್ನು ಮತ್ತೊಬ್ಬರು ಆದರಿಸಬೇಕೆಂಬ ಅಪೇಕ್ಷೆಯನ್ನು ಹೊಂದುವೆವು ಆದರೆ ಅವರು ಹಾಗೆ ಮಾಡರು, ಅದರಿಂದ ನಾವು ತೊಂದರೆಗೀಡಾದೆವೆಂದು ಭಾವಿಸುತ್ತೇವೆ. ಹಲವೊಮ್ಮೆ ನಾವು ಬಯಸಿದುದು ದೊರೆಕಿದರೂ ಆಲೂ ಸಂತೋಷವನ್ನು ಹೊಂದುವುದಿಲ್ಲ. ಏಕೆಂದರೆ, ಅದು ದೊರೆತ ಸ್ವಲ್ಪ ಕಾಲದಲ್ಲಿಯೇ ಅದೇ ವಸ್ತುವು ಅಹಿತಕರವಾಗುತ್ತೆ; ಅದರಲ್ಲಿಟ್ಟಿದ್ದ ಉತ್ಸಾಹ ಕುಗ್ಗುತ್ತದೆ ಆಗ ಮತ್ತೊಂದರ ಅಪೇಕ್ಷೆ ತಳೆಯುತ್ತೇವೆ. ಹೀಗೆ ನಡೆಯುವುದರಿಂದ, ಈಗ ಎಡರನೆಯ ಸತ್ಯಾರ್ಥ ಸೂತ್ರವು ಸರಳವಾಗಿ ಹೀಗೆ ಹೇಳುತ್ತದೆ. ನಿಮಗೆ ಬೇಕಾದುದನ್ನು ನೀವು ಪಡೆದರೂ ಅಥವಾ ಅಪೇಕ್ಷಿತ ವಸ್ತುಗಳು ದೊರೆತರೂ ಸಂತೋಷವು ದೊರೆಯುತ್ತದೆ ಎಂಬ ಭರವಸೆ ಇರದು. ಅಂದರೆ, ಸತತನಾಗಿ, ನಮಗೆ ಬೇಕಾದುದನ್ನು ಪಡೆಯಲು ಹೋರಾಟ ನಡೆಸುವುದು ಮತ್ತು ಈ ಬಯಕೆಗಳನ್ನು ನವೀಕರಿಸಿಕೊಳ್ಳುವುದು. ಆದುದರಿಂದ ಈ ಬಯಕೆಯು ನಮ್ಮನ್ನು ಸಂತೃಪ್ತಿ ಮತ್ತು ಸಂತೋಷಗಳಿಂದ ವಂಚಿಸುತ್ತದೆ.

**ಪ್ರಶ್ನೆ :— ಈ ಬಯಕೆ ಮತ್ತು ಹಂಬಲಗಳು ಹೇಗೆ ಶಾರೀರಿಕ ಸಂಕಟಗಳಿಗೆ ದಾರಿ ಮಾಡುವುವು ?**

—ಜೀವನದುದ್ದಕ್ಕೂ ಇದು ಬೇಕು ಅದೂ ಬೇಕು ಎಂಬ ಬಯಸುವ ಈ ಹಂಬಲವು ಮುಂದುವರಿದಂತೆಲ್ಲಾ ಅಥವಾ ಇರುವಾಗಲೆಲ್ಲಾ ಇದೊಂದು ಶಕ್ತಿಯುತ ಪ್ರಚೋದನೆಯನ್ನು ವೈಯಕ್ತಿಕವಾಗಿ ಸೃಷ್ಟಿಸುತ್ತದೆ; ಅದು ಅಂತ್ಯದಲ್ಲಿ ಮರು ಜನ್ಮಕ್ಕೂ ಕಾರಣೀಭೂತವಾಗುವುದು. ಹೀಗೆ, ನಾವು ಮರುಜನ್ಮ ಪಡೆದಾಗ, ನಮಗೊಂದು ಶರೀರವಿರುವುದು ಮತ್ತು ನಾವು ಹಿಂದೆ ತಿಳಿಸಿದಂತೆ, ಈ ಶರೀರವು, ಗಾಯ ಅಥವಾ

ರೋಗ ರುಜಿನಗಳಿಗೆ ಒಡ್ಡಿಕೊಳ್ಳುವ ಸಾಧ್ಯತೆ ಇದ್ದೇ ಇರುವುದು; ಇಲ್ಲವೇ ಶಾರೀರಿಕ ಶ್ರಮದ ಕಾರ್ಯಚಟುವಟಿಕೆಗಳಿಂದ ಆಯಾಸಗೊಳ್ಳಲೂ ಬಹುದು; ಇದರಿಂದ ಕಾಲವು ಹೆಚ್ಚಾಗಿ, ವಯಸ್ಸಾಗಿ, ಅಂತ್ಯದಲ್ಲಿ ನಾವು ಸಾಯುತ್ತೇವೆ. ಹೀಗೆ ಈ ಹಂಬಲವು ನಮ್ಮನ್ನು ಶಾರೀರಿಕ ಸಂಕಟಗಳಿಗೂ ಒಡ್ಡುತ್ತದೆ ಏಕೆಂದರೆ ಅದು ಮರುಜನ್ಮಕ್ಕೆ ಕಾರಣವಾಗುತ್ತದೆ.

ಪ್ರಶ್ನೆ : – ಇದೆಲ್ಲವೂ ಸರಿಯೇ, ಈ ನಮ್ಮ ಬಯಕೆಗಳೆಲ್ಲವನ್ನೂ ನಾವು ನಿಲ್ಲಿಸಿದರೆ, ಆ ಮೂಲಕ ಯಾವ ಸಾಧನೆಯನ್ನಾಗಲೀ ಸಾಧಿಸುವ ಅವಕಾಶವೇ ಇಲ್ಲವಾಗುತ್ತದೆಯಲ್ಲವೇ ?

—ಹೌದು, ಆದರೆ ಭಗವಾನ್ ಬುದ್ಧರು ಹೇಳಿರುವುದಾದರೂ ಇಷ್ಟೇ, 'ನಮ್ಮ ಅಪೇಕ್ಷೆಗಳು, ನಮ್ಮ ಹಂಬಲಗಳೂ, ನಮ್ಮ ಸತತ ಅಸಂತೃಪ್ತಿಯು ನಮ್ಮಲ್ಲಿರುವ ವಸ್ತುಗಳಲ್ಲಿ ಮತ್ತು ನಮ್ಮ ಮುಂದುವರಿದ ಅಪೇಕ್ಷೆಗಳು ಒಂದಾದನಂತರ ಮತ್ತೊಂದಕ್ಕೆ ಹಮ್ಮಿಕೊಳ್ಳುವುದು, ನಮ್ಮ ಸಂಕಟಗಳಿಗೆ ಸಕಾರಣವಾಗುತ್ತದೆ. ಆದುದರಿಂದ ಅದನ್ನು ಅಭ್ಯಾಸಿಸಕೂಡದು. ಭಗವಾನ್ ಬುದ್ಧರು ನಮ್ಮ ಅವಶ್ಯಕತೆಗಳಿಗೂ ಮತ್ತು ನಮ್ಮ ಅಪೇಕ್ಷೆಗಳಿಗೂ ಇರುವ ವ್ಯತ್ಯಾಸವನ್ನು ಕೂಲಂಕಷವಾಗಿ ತಿಳಿದುಕೊಂಡು, ನಮ್ಮ ಅವಶ್ಯಕತೆಗಳನ್ನು ಸರಿದೂಗಿಸಲು ನಮ್ಮ ಅಪೇಕ್ಷೆಗಳನ್ನು ನವೀಕರಿಸಿಕೊಳ್ಳಬೇಕು. ಅವರು ಮುಂದುವರಿದು ಹೇಳುವರು, ನಮ್ಮ ಅವಶ್ಯಕತೆಗಳನ್ನು ನಾವು ಪೂರೈಸಿಕೊಳ್ಳಬಹುದು, ಆದರೆ ನಮ್ಮ ಅಪೇಕ್ಷೆಗಳು ಅತ್ಯಂವರಿಯದವೂ ಅವು ತಳವಿಲ್ಲದಿರುವ ಗುಳಿಗಳು. ಅತಿ ಮುಖ್ಯವಾದ ಅವಶ್ಯಕತೆಗಳು ಹಾಗೂ ಮೂಲ ಅವಶ್ಯಕತೆಗಳ ಅವಶ್ಯಕತೆಗಳೂ ಇವೆ. ಅವನ್ನು ನಾವು ಪಡೆಯಬಹುದು ಮತ್ತು ಅದಕ್ಕಾಗಿ ಸಶ್ರಮ ದುಡಿಮೆಯೂ ಅಗತ್ಯ. ಇದಕ್ಕಿಂತ ಮಿಗಿಲಾದುವನ್ನು ಕ್ರಮೇಣ ಕಡಿಮೆ ಮಾಡಬೇಕು. ಅಂದಹಾಗೆ, ಜೀವನದ ಉದ್ದೇಶವೇನು ? ಬೇಕಾದುದನ್ನು ಪಡೆಯುವುದು ಅಥವಾ ಇದ್ದುದ್ದರಲ್ಲಿಯೇ ತೃಪ್ತಿ ಮತ್ತು ಸುಖ ಕಂಡುಕೊಳ್ಳುವುದು.

ಪ್ರಶ್ನೆ : — ಮರುಜನ್ಮದ ಬಗ್ಗೆ ನೀವು ಹೇಳಿರುವಿರಿ, ಆದರೆ ಇದನ್ನು ಸ್ಪಷ್ಟೀಕರಿಸಲೂ ಯಾವುದಾದರೂ ನಿದರ್ಶನಗಳಿವೆಯೇ ?

—ಇದಕ್ಕೆ ಸಾಕಷ್ಟು ನಿದರ್ಶನಗಳಿವೆ, ಹಾಗೂ ಅದು ಸಂಭವಿಸುತ್ತಲೂ ಇದೆ, ಇದರ ವಿವರಣೆಯನ್ನು ಮುಂದೆ ನೀಡುವೆವು.

ಪ್ರಶ್ನೆ :— ಮೂರನೆಯ ಸತ್ಯಾರ್ಥ ಸೂತ್ರ ಯಾವುದು ?

—ಮೂರನೆಯ ಸತ್ಯಾರ್ಥ ಸೂತ್ರವೆಂದರೆ "ಸಂಕಟಗಳನ್ನು ನಿವಾರಿಸಿಕೊಳ್ಳಬಹುದು ಮತ್ತು ಸಂತೋಷವನ್ನು ಪಡೆಯಬಹುದು ; ಎಂದು. ಚತುರಾರ್ಯ ಸತ್ಯಾರ್ಥ ಸೂತ್ರಗಳಲ್ಲಿ ಇದು ಅತ್ಯಂತ ಪ್ರಮುಖವಾದುದು ಏಕೆಂದರೆ, ಭಗವಾನ್ ಬುದ್ಧರು ಈ ಸೂತ್ರದಲ್ಲಿ ನೈಜಸುಖ ಸಂತೋಷಗಳನ್ನು ಮತ್ತು ಸಂತೃಪ್ತತೆಯನ್ನು ಸಾಧಿಸಿಕೊಳ್ಳಬಹುದೆಂದು ದೃಢ ನಿರ್ಧಾರದ ಆಶ್ವಾಸನೆಯನ್ನಿತ್ತಿರುವರು. ನಾವು ನಮ್ಮಲ್ಲಿ ಗೋಚರಿಸುವ ಅಪ್ರಯೋಜಕ ಹಂಬಲಗಳನ್ನು ತೊಡೆದುಹಾಕಿ ಮತ್ತು ದಿನಚರಿಯಲ್ಲಿಯೂ ಉತ್ತಮ ಜೀವನದ ದಾರಿಯಲ್ಲಿರುವುದನ್ನು ಬೆಳೆಸಿಕೊಂಡರೆ, ಅವಿಶ್ರಾಂತದ ಅವಶ್ಯಕತೆಗಳಿಂದಾಗುವ ಅನುಭವನ್ನು ವಿಮುಕ್ತಿಸಿ ಅನಂತರ ಸಂತೋಷಿಸುವುದು, ಹಾಗೂ ಈ ಜೀವನದಲ್ಲಿ ಹೀಗೆ ದೊರೆಯುವುದನ್ನು ಅನುಭವಿಸುವುದು, ಯಾವ ಭಯವಿಲ್ಲದೆ, ಜೀವನದಲ್ಲುಂಟಾಗುವ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಿ ಸಹಿಸುವುದು, ಅದರಲ್ಲೂ ಯಾವ ಕೋಪ ಮತ್ತು ತುಚ್ಛ ಭಾವನೆ ತಳೆಯದೆ, ಆಗ ನಾವು ಸಂತಸವನ್ನು ಹೊಂದುವುದಲ್ಲದೆ, ಅವುಗಳಿಂದ ವಿಮುಕ್ತರೂ ಆಗುತ್ತೇವೆ, ಇದಾದ ನಂತರವೇ ಮತ್ತು ಆಗ ಮಾತ್ರವೇ ನಾವು ಉತ್ತಮ ಜೀವಿಗಳಾಗಿ ಜೀವಿಸುವೆವು. ಏಕೆಂದರೆ ನಾವು ಇನ್ನು ಮೇಲೆ ಯಾವಾಗಲೂ ಆ ನಮ್ಮ ಸ್ವಾರ್ಥ ಅಪೇಕ್ಷೆಗಳನ್ನು ಸಂತೃಪ್ತಿಪಡಿಸುವ ಪೀಡೆಯಿಂದ ವಿಮುಕ್ತಿ ಪಡೆದಿದ್ದೇವೆ, ಈಗ ಇತರರಿಗೆ ಸಹಾಯ ಮಾಡಲು ಸಾಕಷ್ಟು ಸಮಯವೂ ದೊರೆಯುವುದು, ಜೊತೆಗೆ ಅಪರ ಅಗತ್ಯಗಳನ್ನು ಸರಿದೂಗಿಸಲೂ ಬಹುದು. ಇದೇ ನಿರ್ವಾಣದ ಹಂತ. ಇದರಿಂದ ನಾವು ಸರ್ವಬಗೆಯ ಮಾನಸಿಕ ಸಂಕಟಗಳಿಂದಲೂ ಸಹ ವಿಮುಕ್ತರಾಗುವೆವು. ಇದೇ ಅಂತ್ಯದ ನಿರ್ವಾಣ.

ಪ್ರಶ್ನೆ :— ನಿರ್ವಾಣವೆಂಬುದು ಏನು ಅಥವಾ ಎಲ್ಲಿದೆ ?

—ಇದು ಕಾಲ ಮತ್ತು ಜಾಗವನ್ನು ಅತಿಶಯಿಸುವ ಪ್ರಮಾಣ ಹೊಂದಿದೆ, ಆದುದರಿಂದ ಇದರ ಬಗೆಗೆ ವಾಚ-ವಾದಗಳೂ ಅಥವಾ ಅದರ ಆಲೋಚನೆಯೇ ದುಸ್ತರ. ಆಲೋಚನೆ ಮತ್ತು ಶಬ್ದಗಳು ಕೇವಲ ಕಾಲ ಮತ್ತು ಸ್ಥಳ ವಿಸ್ತಾರಗಳನ್ನು ಅಳೆಯಲು ಮಾತ್ರ ಸಹಕಾರಿಯಾಗಿವೆ. ಈ ನಿರ್ವಾಣವು ಕಾಲದಾಚೆಗಿನದು, ಅಲ್ಲಿ ಯಾವ ಚಲನೆಯಿಲ್ಲ ಆದುದರಿಂದ ಈ 'ನಿರ್ವಾಣ'ವು ಅನಂತವಾದುದು. ಇದು ಸ್ಥಳ ವಿಸ್ತರಣೆಯ ಆಚೆಗೂ ವಿಸ್ತರಿಸಿರುವುದಾದುದರಿಂದ, ಇದಕ್ಕೆ ಮೇರೆಯೇ ಇಲ್ಲ, ಸ್ವಯಂ

ಎಂಬುದರ ಗಣನೆ ಇಲ್ಲ ಮತ್ತು ಸ್ವಯಂ ಅಲ್ಲದ್ದೂ ಸಹ ಇಲ್ಲ; ಆದುದರಿಂದ ಇದು ಅನಿಯಮಿತ. ಭಗವಾನ್ ಬುದ್ಧರೂ ಸಹ ಈ ನಿರ್ವಾಣವನ್ನು ಅಸಮಾನ್ಯ ಸಂತೋಷಾನುಭವವೆಂದು ವರ್ಣಿಸಿ, ಆ ಬಗ್ಗೆ ಭರವಸೆಯನ್ನೂ ಇತ್ತಿದ್ದಾರೆ. ಭಗವಾನ್ ಬುದ್ಧರು ಹೇಳಿರುವರು.

'ನಿರ್ವಾಣ ವೆಂಬುದು ಸರ್ವೋನ್ನತ ಸುಖದಾಯಕ'

D·P 204

ಪ್ರಶ್ನೆ :— ಇಂತಹ ಅನಿಯಮಿತ ಪ್ರಮಾಣ ಭಾವನೆಯು ಇರುವುದಕ್ಕೆ ಯಾವುದಾದರೂ ನಿರ್ದಿಷ್ಟ ದೃಷ್ಟಾಂತಗಳಿವೆಯಾ ?

—ಇಲ್ಲ, ಹಾಗೆ ವಿವರಿಸುವ ಸಂದರ್ಭಗಳಿಲ್ಲ. ಆದರೆ, ಆ ತೆರನಾದ ವರ್ಣಿಸಲಸದಳವಲ್ಲದ ಸ್ಥಿತಿಗತಿಗಳನ್ನು ಊಹಿಸಿ ತೀರ್ಮಾನಿಸಿಕೊಳ್ಳಬಹುದಾದರೆ ಅಪಾರ ವಿಸ್ತರಣೆಯು ಕಾರ್ಯನಿರ್ವಹಿಸುವ ಪ್ರಮಾಣವು-ಅಂದರೆ ನಾವು ಪ್ರಪಂಚದ ಬಗ್ಗೆ ಅನುಭವಿಸುವ ಭಾವನೆಗಳು, ಈ ಮುಂತಾದುವುಗಳನ್ನು ಪರಿಗಣಿಸಿದರೆ, ಅಂತೆಯೇ ನಾವು ಕಾಲಮಾನ ಮತ್ತು ಸ್ಥಳವಿಸ್ತರಣೆಗಳು ಕಾರ್ಯ ನಿರ್ವಹಿಸಲಾರದ ಸನ್ನಿವೇಶವನ್ನೂ ನಾವು ಊಹಿಸಬಹುದು. ಈ ನಿರ್ವಾಣದ ಇರುವಿಕೆಯನ್ನು ಸಾಕ್ಷೀಕರಿಸಲಾಗದಾದರೂ, ನಾವು ಭಗವಾನ್ ಬುದ್ಧರ ಅಮೃತ ವಾಣಿಯು ಈ ನಿರ್ವಾಣ ಸಿಗುವ ಬಗ್ಗೆ ಸತ್ಯವನ್ನೇ ನುಡಿದಿರುವರು, ಇವರು ಹೇಳುವರು :

"ಹುಟ್ಟದೇ ಇರದಿರುವುದು, ಸಂಭವಿಸದೇ ಇರುವುದು, ಇದುವರೆಗೂ ಸಾಧಿಸದಿರುವುದು, ಸಂಯೋಜಿಸದೇ ಇರುವುದು, ಇವೆಲ್ಲವೂ ಇವೆ. ಒಂದು ವೇಳೆ ಈ ಹುಟ್ಟದೇ ಇರುವುದು (ಜನ್ಮ ತಳೆಯದಿರುವುದು) ಸಂಭವಿಸದೇ ಇರುವುದು, ಸಾಧಿಸಲಾಗದುದು ಮತ್ತು ಸಂಯೋಜಿಸಲಾಗದು. ಇವೆಲ್ಲವೂ ಅಸ್ತಿತ್ವದಲ್ಲಿರದಿದ್ದರೆ, ಈಗ ಜನ್ಮ ತಾಳಿರುವುದು, ಸಂಭವಿಸಿರುವುದು, ಸಾಧಿಸಿರುವುದು ಮತ್ತು ಸಂಯೋಜಿಸಿರುವುದು ಇವುಗಳಿಂದ ವಿಮೋಚನೆ ಪಡೆಯುವುದು ಸಾಧ್ಯವಿಲ್ಲ ಆದರೆ, ಜನ್ಮತಾಳದಿರುವುದು, ಸಂಭವಿಸಿರುವುದು, ಸಾಧಿಸದಿರುವುದು, ಮತ್ತು ಸಂಯೋಜಿಸದಿರುವುದು ಇವೆಲ್ಲವೂ ಇರುವುದಾದ್ದರಿಂದ, ಈಗ ತಾಳಿರುವ ಸಂಭವಿಸಿರುವ, ಸಾಧಿಸಿರುವ ಮತ್ತು ಸಂಯೋಜಿಸಿರುವುದರಿಂದ ವಿಮೋಚನೆ ಪಡೆಯುವ ಮಾರ್ಗವು ತಿಳಿಯುವಂತೆಯೇ ಇದೆ".

Ud 80

ಇದನ್ನು ನಾವು ಪಡೆದಾಗ, ನಾವು ಅದನ್ನು ಅರಿಯಬಹುದು. ಅಲ್ಲಿಯವರೆಗೂ ನಾವು ಅಭ್ಯಸಿಸುತ್ತಿರೋಣ.

—00—

## 3. ಬೌದ್ಧಧರ್ಮ ಮತ್ತು ದೈವತ್ವ

ಪ್ರಶ್ನೆ :— ಬೌದ್ಧ ಧರ್ಮಗಳು ದೇವತ್ವವನ್ನು ನಂಬುವುದೆ ?

—ಇಲ್ಲ ; ಹಾಗೆ ನಾವು ನಂಬುವುದಿಲ್ಲ. ಇದಕ್ಕೆ ಅನೇಕ ಕಾರಣಗಳೂ ಇವೆ. ಭಗವಾನ್ ಬುದ್ಧರು ನೂತನ ಸಮಾಜಶಾಸ್ತ್ರಕಾರನಂತೆ ಮತ್ತು ಮಾನವಿಕ ಶಾಸ್ತ್ರಜ್ಞನಂತೆ, ವಿವಿಧಜಾತಿ ಭಾವನೆಗಳು ಮತ್ತು ಅದರಲ್ಲೂ ದೈವತ್ವಭಾವನೆಗಳು ತಮ್ಮ ಮೂಲಭೂತ ಸೃಷ್ಟಿಯನ್ನು ಕೇವಲ ಭಯದಿಂದಲೇ ಸೃಷ್ಟಿಸಿಕೊಂಡಿವೆ. ಭಗವಾನ್ ಬುದ್ಧರು ಹೀಗೆ ಹೇಳಿದ್ದಾರೆ.

"ಭಯವೆಂಬ ಪೀಡೆಯ ದವಡೆಯಲ್ಲಿ ಸಿಕ್ಕಿದ ಮಾನವರು ಪವಿತ್ರ ಪರ್ವತಸ್ತೋಮಗಳಿಗೂ, ಪವಿತ್ರ ಅರಣ್ಯವನಗಳಿಗೂ, ಪವಿತ್ರ ವೃಕ್ಷಗಳಡೆಗೂ ಮತ್ತು ಪವಿತ್ರ ದೇವಾಲಯಗಳಿಗೂ ತೆರಳುವರು.

ಆದಿಮಾನವನು, ಅಪಾಯ ಮತ್ತು ವಿರುದ್ಧವಾದ ಪ್ರಪಂಚದ ವ್ಯವಹಾರಗಳ ಬಂಧನದಲ್ಲಿ ಸಿಕ್ಕಿ ಹಾಕಿಕೊಂಡಿದ್ದನು-ಕ್ರೂರ ಹಾಗೂ ದುಷ್ಟ ಪ್ರಾಣಿಗಳೊಡನೆ, ಸಾಕಷ್ಟು ಭುಂಜಿಸುವ ಆಹಾರವಿಲ್ಲದೆ, ಅನೇಕ ಗಾಯಗಳು ಮತ್ತು ರೋಗಗಳಿಂದಲೂ, ಜೊತೆಗೆ ಪ್ರಕೃತಿಯ ವಿಕೋಪಗಳಾದ ಗುಡುಗು ಮಿಂಚುಗಳ ಹಾವಳಿಗಳಿಂದಲೂ, ಮತ್ತು ಜ್ವಾಲಾಮುಖಿ ಮತ್ತು ಭೂಕಂಪನಗಳಿಂದಲೂ ಸತತ ಭವಣೆಯನ್ನು ಹೊಂದುತ್ತಿದ್ದನು. ಇವನಿಗೆ ಯಾವ ರಕ್ಷಣೆಯೂ ಅಭಾವವಾಗಿತ್ತು. ಆದುದರಿಂದ, ಇಂತಹ ಮಾನವ ಸಮೂಹವು ದೈವತ್ವವನ್ನು ಸೃಷ್ಟಿಸಿಕೊಂಡಿತು. ಇದರಿಂದ ಅವನ ಉತ್ತಮ ಕಾಲದಲ್ಲಾದರೂ ಸ್ವಲ್ಪ ರಕ್ಷಣೆಯಿಂದ ಸಂತಸಪಡಲೋಸುಗ, ಅಪಾಯದ ಸಮಯದಲ್ಲಿ ಧೈರ್ಯತಳೆಯಲೋಸುಗ ಮತ್ತು ಸನ್ನಿವೇಶಗಳು ಹದಗೆಟ್ಟಾಗ ಸಮಾಧಾನದ ನಿಟ್ಟುಸಿರು ಬಿಡಲೋಸುಗ ಈ ದೇವರ ಸೃಷ್ಟಿಮಾಡಿಕೊಂಡನು. ಇಂದಿಗೂ ಸಹ ಮಾನವರು ಅತಿಕ್ಲಿಷ್ಟ ಸನ್ನಿವೇಶಗಳಿಗೆ ಸಿಲುಕಿದಾಗ, ತಾನಾಗಿಯೇ

ಧರ್ಮಗಳ ಅಥವಾ ಪಂಥಗಳ ಅನುಯಾಯಿಗಳಾಗುವರು. ಅವುಗಳ ಮರೆ ಹೋಗುವರು, ಮತ್ತು ಆಗ ಅವರು ಹೇಳುವರು, ''ದೇವರ ಅಥವಾ ದೇವರುಗಳಲ್ಲಿ ನಂಬಿಕೆ ಮೂಡಿಸಿಕೊಂಡಾಗ, ಆ ಶಕ್ತಿಯ ಜೀವನದ ಅನೇಕ ಏರಿಳಿತಗಳನ್ನು ಎದುರಿಸುವ ಎದೆಗಾರಿಕೆಯನ್ನೀಯುವುದು''. ಎನ್ನುವುದನ್ನು ಕೇಳುತ್ತೇನೆ. ಇವರು ತಮ್ಮ ಕಷ್ಟಕರ ಸನ್ನಿವೇಶಗಳಲ್ಲಿನ ಸೂಕ್ತ ಕಾಲದಲ್ಲಿ, ಯಾವುದೋ ಒಂದು ನಿರ್ದಿಷ್ಟ ದೇವರನ್ನು ಕುರಿತು ಪೂಜಿಸಿದರು. ಈ ಪೂಜೆಗೆ ಆ ದೇವರು ಓಗೊಟ್ಟು ಇವರ ಕಷ್ಟ ಪರಿಹರಿಸುವ ಉತ್ತರವನ್ನಿತ್ತಿರುವ ಅನೇಕ ಸನ್ನಿವೇಶಗಳನ್ನು ಇಂದಿಗೂ ವರ್ಣಿಸುವರು. ಇವೆಲ್ಲಾ ಸನ್ನಿವೇಶಗಳು ಭಗವಾನ್ ಬುದ್ಧರ ಪ್ರಚೋದನೆಗಳಿಗೆ ಬೆಂಬಲನೀಯುತ್ತಾ, ಈ ದೈವತ್ವದ ಭಾವನೆಯು, ಭಯ ಮತ್ತು ಹತಾಶ ಸನ್ನಿವೇಶಗಳಿಂದ ಪ್ರೇರಿತವಾದುದೆಂದು ಸಿದ್ಧಾಂತಿಸುವುದು. ಭಗವಾನ್ ಬುದ್ಧರು ನಮಗೆ ಬೋಧಿಸಿದ್ದಾರೆ–"ನಮ್ಮಲ್ಲುಂಟಾಗುವ ಭಯವು ಏತರಿಂದ ಮತ್ತು ಏತಕ್ಕಾಗಿ ಮೈಗೂಡುತ್ತದೆಂಬುದನ್ನು ಪೂರ್ಣವಾಗಿ ಅರಿತುಕೊಳ್ಳಿರಿ, ಇದರಿಂದ ನಮ್ಮ ಅನಗತ್ಯ ಅಪೇಕ್ಷೆಗಳು ತಗ್ಗುವುವು ಮತ್ತು ನಮ್ಮಿಂದ ಬದಲಾಯಿಸಿಕೊಳ್ಳಲಾರದ ಸನ್ನಿವೇಶಗಳನ್ನು ಶಾಂತತೆ ಮತ್ತು ಸೌಹಾರ್ದತೆಯ ಧೈರ್ಯ ಸಾಹಸಗಳಿಂದ ಒಪ್ಪಿ ಅನುಭವಿಸುವ ಮಾರ್ಗವನ್ನು ತಿಳಿದುಕೊಳ್ಳಿರಿ" ಎಂದಿದ್ದಾರೆ. ಮಾನವನಲ್ಲುಂಟಾಗುವ ಭಯದ ಭಾವನೆಗಳನ್ನು, ಅಕಾರಣವಲ್ಲದ ನಂಬಿಕೆಯಿಂದಲ್ಲ ಸಕಾರಣವಾದ ತಿಳಿವಳಿಕೆಯಿಂದ ಪ್ರತಿಕ್ಷೇಪಿಸಿರುವರು.

ಎರಡನೆಯ ಕಾರಣವಾಗಿ ಭಗವಾನ್ ಬುದ್ಧರು ಈ ದೈವತ್ವದ ಬಗ್ಗೆ ನಂಬಿಕೆಯನ್ನು ತಳೆಯಲಿಲ್ಲ, ಏಕೆಂದರೆ, ಈ ದೈವತ್ವದ ಅಸ್ತಿತ್ವವನ್ನು ಪುಷ್ಟೀಕರಿಸುವ ಯಾವ ಸಾಕ್ಷ್ಯಾಧಾರಗಳನ್ನು ಅವರು ಪಡೆಯಲಿಲ್ಲ. ಈಗ ಅನೇಕ ಜಾತಿ-ಧರ್ಮಗಳು ಚಾಲ್ತಿಯಲ್ಲಿವೆ. ಇವುಗಳಲ್ಲಿನ ಪ್ರತಿಯೊಂದು ಜಾತಿಯವರೂ, 'ತಮ್ಮ ಜಾತಿಯ ಧರ್ಮಗಳು ಮಾತ್ರ ಆ ಪವಿತ್ರ ದೇವರ ಶಬ್ದಾರ್ಥಗಳಲ್ಲಿಯೇ ಉದ್ಯುಕ್ತವಾಗಿ, ಅವರ ಧರ್ಮ ಗ್ರಂಥಗಳಲ್ಲಿ ಸಂಗ್ರಹಿಸಲ್ಪಟ್ಟಿವೆ, ಮತ್ತು ಅವರು ಮಾತ್ರವೇ ದೇವರ ಸ್ವಭಾವವನ್ನು ಅರಿತವರು ಅವರ ದೇವರು ಮಾತ್ರವೇ ಅಸ್ತಿತ್ವದಲ್ಲಿರುವುದು ಮತ್ತು ಇತರ ಧರ್ಮಗಳ, ಜಾತಿಗಳ ದೇವರುಗಳು ಅಸ್ತಿತ್ವವೇ ಇಲ್ಲವೆಂದು ಸಾರುವರು.' ಕೆಲವು ಪಂಥಗಳವರ ದೇವರು, ಪುರುಷಲಿಂಗ, ಹಲವರ ಜಾತಿಗಳ ದೇವರು ಸ್ತ್ರೀಲಿಂಗದವುಗಳು ಮತ್ತೆ ಹಲವರ ದೇವರುಗಳ ನಪುಂಸಕ ಅಥವಾ ತಟಸ್ಥಲಿಂಗ ದೇವರುಗಳು ಇಂತಹ ಪ್ರತಿಯೊ…

ಜಾತಿಯವರೂ, ತಮ್ಮ ದೇವರು ಖಂಡಿತವಾಗಿಯೂ ಅಸ್ತಿತ್ವದಲ್ಲಿರುವುದೆಂಬ ತಾರ್ಕಿಕ ನಿದರ್ಶನಗಳಿಲ್ಲ ಅಸ್ತಿತ್ವವನ್ನು ನಂಬಿ ಪೂಜಿಸುವರು, ಹೀಗಿದ್ದು ಅವರು, ಇತರ ಜಾತಿಯವರ ದೇವರುಗಳ ಬಗ್ಗೆ ಯಾವ ನಂಬಿಕೆಯನ್ನು ತಳೆಯದೆ, ಅಂತಹ ದೇವರುಗಳ ಅಸ್ತಿತ್ವವನ್ನೇ ಶಂಕಿಸಿ, ಅಪನಂಬಿಕೆಯಿಂದ ನಗುವರ . ಅಲ್ಲದೆ, ಅಂತಹ ದೇವರುಗಳ ಅಸ್ತಿತ್ವವನ್ನು ಸಾಕ್ಷ್ಯಾಧಾರದಿಂದ ರುಜುವಾತುಪಡಿಸಲು ಆಗ್ರಹಿಸುವರು ಹೀಗೆ ಅನೇಕ ಜಾತಿ ಪಂಥಗಳವರು, ಅವರವರ ವಿವಿಧ ದೇವರುಗಳ ಅಸ್ತಿತ್ವವನ್ನು ರುಜುವಾತುಪಡಿಸಲು ಅನೇಕ ಶತಮಾನಗಳ ಅಪಾರ ಸಶ್ರಮ ಪ್ರಯತ್ನಗಳಿಂದ ತಳೆದಿದ್ದಾರೆ. ಆದರೆ, ಈ ದಿಶೆಯಲ್ಲಿನ ಸಾಧನೆ, ಇನ್ನೂ ಸ್ಪಷ್ಟವಾಗಿಲ್ಲ, ಸಮರ್ಥನೆ ಪಡೆದಿಲ್ಲ, ಆಶಾದಾಯಕ ರುಜುವಾತುಗಳಾಗಲೀ, ಅದು ಸತ್ಯ ಸಂಗತಿ ಎಂದು ತೀರ್ಮಾನಿಸುವ ಸಂದರ್ಭಗಳಾಗಲೀ ಇದುವರೆಗೂ ಕರಗತವಾಗಿಲ್ಲ. ಇದನ್ನು ಯಾವೊಂದು ಜಾತಿ ಪಂಥಗಳೂ ವೈಯಕ್ತಿಕವಾಗಿ ಇಲ್ಲವೇ ಸಾಮೂಹಿಕವಾಗಿ ಸಾಧಿಸಿಲ್ಲ-ಜಯಗಳಿಸಿಲ್ಲ. ಆದುದರಿಂದ ಈ ಬಗೆಯ ಅಂತಿಮ ತೀರ್ಮಾನವನ್ನು ಬೌದ್ಧೀಯ ಧರ್ಮಗಳು ಕೈಗೆತ್ತಿಕೊಳ್ಳದೆ ಮುಂದುವರಿಸುತ್ತಿರುವರು ಸೂಕ್ತ ಕಾರಣಗಳು ಪ್ರಾಪ್ತವಾಗುವತನಕ.

ಭಗವಾನ್ ಬುದ್ಧರು ಯಾವೊಂದು ದೇವರನ್ನು ನಂಬದಿರುವುದಕ್ಕೆ ಮೂರನೆ ಕಾರಣವೆಂದರೆ 'ಅಂತಹ ನಂಬಿಗೆಯೇ ಅನಾವಶ್ಯಕ' ಎಂಬ ಭಾವ. ಹಲ ಕೆಲವರು ಈ ವಿಶ್ವ ಮತ್ತು ವಿಶ್ವಾಂಬರದ ಮೂಲವನ್ನೂ ಹಾಗೂ ಅದರ ರೂಪರೇಷೆಗಳನ್ನೂ ವಿವರಿಸಲು, ಯಾವುದಾದರೊಂದು ದೇವರಲ್ಲಿ ನಂಬಿಕೆ ತಳೆಯುವುದು ಸೂಕ್ತವೆಂದು ವಿವರಿಸುವರು. ಆದರೆ, ಅದು ಹಾಗಿಲ್ಲ. ವಿಜ್ಞಾನವು, ಈ ವಿಶ್ವದ ಉಗಮ ಮತ್ತು ಅದರ ಸಮೂಹಗಳ ವಿವರಣೆಯನ್ನು ಸರ್ವರೂ ಒಪ್ಪುವ ಹಾಗೂ ಸತ್ಯಾಂಶವನ್ನು ಸಾರುತ್ತಿರುವುದು ಈ ವಿವರಣೆಗೆ ಆ ವಿಜ್ಞಾನವು ಯಾವ ದೇವರ ನೆರವನ್ನೂ ಪಡೆದಿಲ್ಲ. ಹೀಗಿದ್ದರೂ ಇನ್ನೂ ಹಲವರು, ಅರ್ಥಪೂರ್ಣ ಸುಖಮಯ ಜೀವನವನ್ನು ಸಾಧಿಸಲು ದೇವರಲ್ಲಿನ ನಂಬಿಕೆಯು ಅತ್ಯಗತ್ಯವೆಂದು ಉದ್ಗಾರ ತೆಗೆಯುವವರೂ ಇರುವರು. ಆದರೆ ಸತ್ಯಾಂಶಗಳ ದೃಷ್ಟಿಯಲ್ಲಿ ಇದು ಹಾಗಲ್ಲವೆಂಬುದನ್ನು ಮನಗಂಡಿದ್ದೇವೆ. ಈ ಬೌದ್ಧೀಯತೆಯ ಧರ್ಮದಡಿಯಲ್ಲಿದ್ದ ಅನೇಕ ಮಿಲಿಯನ್ ಬೌದ್ಧೀಯರು, ತತ್ವಸಿದ್ಧಾಂತಿಗಳೂ ಮತ್ತು ಮುಕ್ತ ಸದಾಲೋಚನಾಕಾರರಾಗಿದ್ದವರು ಅವರ ಹೆಸರುಗಳನ್ನು ಪಟ್ಟಿಮಾಡುವ ಅವಶ್ಯಕತೆಯಿಲ್ಲ, ಇವರು ಉಪಯುಕ್ತ ಜೀವಿಗ

ಳಾಗಿ, ಸುಖಸಂತೋಷಗಳಿಂದ ಯಾವ ದೇವರಲ್ಲೂ ನಂಬಿಕೆ ತಳೆಯದ. ಅರ್ಥಪೂರ್ಣ ಜೀವನವನ್ನು ಸಾಗಿಸಿರುವರು. ಮತ್ತೆ ಕೆಲವು ಮಾನವರು, ದೇವರ ಅಪಾರ ಶಕ್ತಿಯು ಅತ್ಯವಶ್ಯಕವಾಗಿ ಬೇಕಾಗಿರುತ್ತೆ, ಏಕೆಂದರೆ ಮಾನವರು ದುರ್ಬಲರು ಮತ್ತು ತಮ್ಮಷ್ಟಕ್ಕೆ ತಾವೇ ಬಲಿಷ್ಟರಾಗಿರುವುದು ಸಾಧ್ಯವಿಲ್ಲವೆಂಬುದನ್ನೂ ಮುಂದಿಡುವರು. ಮತ್ತೊಮ್ಮೆ ಈ ದೃಷ್ಟಾಂತರಗಳು ವಿರುದ್ಧಾಭ್ಯಾಸಗಳನ್ನೇ ಸೂಚಿಸುವುವು. ಮತ್ತು ಕೆಲವರು ತಮ್ಮ ಮಹತ್ವದ ದುರ್ದೆಶೆಗಳನ್ನು ಮತ್ತು ಅಂಗವಿಕಲತೆಗಳನ್ನು ಅಪಾರ ಕಷ್ಟ ಕಾರ್ಪಣ್ಯತೆಗಳನ್ನು ಮತ್ತು ದುರಂತರಗಳನ್ನು ಕೇವಲ ತಮ್ಮ ಸ್ವಯಂ ಅಂತರ್ಯಶಕ್ತಿಯಿಂದ ಅವರ ಸ್ವಯಂ ಸ್ವಪ್ರಯತ್ನದಿಂದಲೂ, ಹಾಗೂ ಯಾವ ದೇವರಲ್ಲಿ ನಂಬಿಕೆ ಇಡದೆ ನಿವಾರಿಸಿಕೊಂಡಿರುವರೆಂದು ಹಲವರು ಕೇಳಿ ತಿಳಿದಿರುತ್ತಾರೆ. ಮತ್ತೆ ಕೆಲವರು, ಮಾನವನ ಸರ್ವವಿಮೋಚನೆಗೆ ದೇವರ ಅತ್ಯವಶ್ಯಕತೆ ಇದೆ ಎಂದು ತಮ್ಮ ದೃಢಹಕ್ಕನ್ನೇ ಮುಂದಿಡುವರು. ಆದರೆ, ಈ ವಾಗ್ವಾದವು, ಪಾರಮಾರ್ಥಿಕ ಜ್ಞಾನದ ಸೂತ್ರದಲ್ಲಿ ನೀಡಿರುವ ಮೋಕ್ಷಸಾಧನೆಗೆ ಅನ್ವಯಿಸಿದಾಗ ಮಾತ್ರ, ಒಪ್ಪಬಹುದು ; ಆದರೆ ಬೌದ್ಧೀಯರು ಮತ್ತು ಅಪರ ಧರ್ಮಗಳು ಪಾರಮಾರ್ಥ ಜ್ಞಾನದ ಸೂತ್ರವನ್ನು ಒಪ್ಪುವುದಿಲ್ಲ ಅಥವಾ ಅನುಮೋದಿಸದು. ಭಗವಾನ್ ಬುದ್ಧರು ತಮ್ಮ ಸ್ವಂತ ಅನುಭವದಿಂದಲೇ ಪಡೆದಿರುವ ಜ್ಞಾನವೆಂದ, ಅವರು ಪ್ರತಿಯೊಬ್ಬ ಮಾನವನೂ ಅವನ ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳುವ ಶಕ್ತಿ ಸಾಮರ್ಥ್ಯವನ್ನು ಹೊಂದಿದ್ದಾನೆಂದು ಕಂಡುಕೊಂಡಿರುವರು, ಜೊತೆಗೆ ಅವನು (ಮಾನವನು) ಅನಂತವಾದ ಪ್ರೀತಿಯನ್ನು ಮತ್ತು ಕನಿಕರವನ್ನು ವೃದ್ಧಿಸಿಕೊಳ್ಳುವ ಸಾಮರ್ಥ್ಯವನ್ನೂ ಹೊಂದಿರುವನೆಂದು ಹೇಳುವರು. ಹೀಗೆ ಭಗವಾನ್ ಬುದ್ಧರು ಸ್ವರ್ಗದಲ್ಲಿರುವುದನ್ನು ಮಾನವನ ಹೃದಯದಲ್ಲಿರುವುದನ್ನು ಶೋಧಿಸಿ. ತೋರಿಸಿಕೊಟ್ಟರು. ಹೀಗೆ ಮಾನವರಿಗೆ ಅವರವರ ಸಮಸ್ಯೆಗಳಿಗೆ ಅವರವರೇ ಪರಿಹಾರ ಮಾರ್ಗಗಳನ್ನು ತಮ್ಮ ಸ್ವಯಂ ಸದ್ಬುದ್ಧಿಯಿಂದಲೇ ಪಡೆಯಬಹುದೆಂಬುದನ್ನು ಸರ್ವ ಉತ್ತೇಜನ ಭಾವದಿಂದ ತೋರಿಸಿರುವರು.

**ಪ್ರಶ್ನೆ :—** ದೇವರುಗಳೇ ಇಲ್ಲದಿದ್ದಲ್ಲಿ ಈ ವಿಶ್ವವು ಇಲ್ಲಿಗೆ ಹೇಗೆ ಬಂದಿತು ?

—ಎಲ್ಲಾ ಮತದವರು, ಈ ಪ್ರಶ್ನೆಗೆ ಉತ್ತರವಾಗಿ ಅನೇಕ ದಂತ ಕಥೆಗಳು ಕಟ್ಟುಕಥೆಗಳು ಮತ್ತು ಸಾಧಾರಣ ಕಥೆಗಳನ್ನು ಹೊಂದಿದ್ದಾರೆ.

ಅತಿಪುರಾತನ ಕಾಲದಲ್ಲಿ ಮಾನವನು ಸಾಧಾರಣವಾಗಿ, ಇಂತಹ ವಿಷಯಗಳನ್ನು ತಿಳಿದುಕೊಳ್ಳಲು ಅನಾಸಕ್ತನೂ, ಸರಳಾಲೋಚನಾ ಪರನಾಗಿದ್ದನು. ಇವನಿಗೆ ಅಂತಹ ದಂತಕಥೆಗಳು ಸಾಕಾಗಿದ್ದವು. ಆದರೆ ಇಪ್ಪತ್ತನೆಯ ಶತಮಾನದಲ್ಲಿ, ಅದರಲ್ಲೂ ವಿಜ್ಞಾನದ ಭಾಗಗಳಾಗಿ, ಭೌತಶಾಸ್ತ್ರ, ಆಕಾಶಶಾಸ್ತ್ರ ಮತ್ತು ಭೂಗರ್ಭ ಶಾಸ್ತ್ರಗಳ ಕಾಲವಾಗಿರುವಾಗ, ಇಂತಹ ದಂತಕಥೆಗಳು, ಇಂದು ಮೇಲಿನ ಹಲವಾರು ವಿಜ್ಞಾನ ಶಾಸ್ತ್ರಗಳ ಹೊಂಬೆಳಕು ಕಂಡು ಅವು ಮಂಕಾಗಿರುವುವು. ಈ ವಿಜ್ಞಾನಗಳು, ಇಡೀ ವಿಶ್ವದ ಮೂಲವನ್ನು, ದೇವರ ಅಥವಾ ಸೃಷ್ಟಿಕರ್ತರ ಯಾವ ಆಧಾರಾಶ್ರಯಗಳನ್ನು ಬಯಸದೆ. ಬಳಸದೆ, ಯಾವ ಸಂಶಯವನ್ನೂ ಬಿಡದೆ ವಿವರಿಸಿರುವುವು.

**ಪ್ರಶ್ನೆ :—** ವಿಶ್ವ ಮೂಲದ ಬಗ್ಗೆ ಭಗವಾನ್ ಬುದ್ಧರು ಏನು ಹೇಳಿರುವರು?

—ಭಗವಾನ್ ಬುದ್ಧರು ವಿಶ್ವಮೂಲದ ಬಗ್ಗೆ ನೀಡಿರುವ ವಿವರಣೆಯು, ಇಂದಿನ ವೈಜ್ಞಾನಿಕ ತೀರ್ಮಾನದ ಹಾಗೂ ವಿವರಣೆಗೆ ಅತಿ ಸಾಮೀಪ್ಯ ಬಾಂಧವ್ಯವನ್ನೇ ಸೂಚಿಸುತ್ತಿರುವುದನ್ನು ಗಮನಿಸುವುದೊಂದು ಅತ್ಯಾಶ್ಚರ್ಯವೂ ಹಾಗೂ ಹಿತವಾಗಿಯೂ ಇದೆ. 'ಅಗನ್ನ' ಸೂತ್ರದಲ್ಲಿ, ಭಗವಾನ್ ಬುದ್ಧರು, ಅಂದಿನ ವಿಶ್ವವು ನಾಶವಾಗಿ, ತದನಂತರದಲ್ಲಿ ಇಂದು ನಾವಿರುವ ವಿಶ್ವಾಂಬರವು ಅಸಂಖ್ಯಾತ ಮಿಲಿಯನ್ ವರ್ಷಗಳ ಹಿಂದೆಯೇ ಉಗಮವಾಗಿದೆ ಎಂಬುದನ್ನು ಸೂಚಿಸಿರುವರು. ಪ್ರಪ್ರಥಮವಾಗಿ, ಜೀವಿಯು ಅಸ್ತಿತ್ವಕ್ಕೆ ಬಂದಿದ್ದುದು ನೀರಿನ ಮೇಲ್ಭಾಗದಲ್ಲಿಯೇ, ಅನಂತರದಲ್ಲಿ ಮತ್ತು ಅಸಂಖ್ಯಾತ ಮಿಲಿಯನ್ ವರ್ಷಗಳು ಕಳೆದನಂತರ, ಈ ಸರಳ ಜೀವಿಯು ಅತಿ ಕ್ಲಿಷ್ಟತೆಯ ಸಂಯುಕ್ತ ಜೀವರಾಶಿಯಾಗಿ ಮಾರ್ಪಾಟಾಯಿತು. ಈ ಎಲ್ಲಾ ಮಾರ್ಪಾಟುಗಳು ಆದ್ಯಂತರಹಿತವಾಗಿಯೇ ನಡೆದುಕೊಂಡು ಬಂದಿರುವುವು ಮತ್ತು ಅವುಗಳು ಪ್ರಕೃತಿದತ್ತ ಕಾರಣಗಳಿಂದಲೇ ತಮ್ಮ ಚಲನೆಯನ್ನು ರೂಢಿಸಿಕೊಂಡವು.

**ಪ್ರಶ್ನೆ :** - ನೀವೇನೋ, ದೇವರ ಅಸ್ತಿತ್ವಕ್ಕೆ ಆಧಾರವಿಲ್ಲವೆಂದು ಹೇಳುವಿರಿ. ಆದರೆ, ಈ ಪವಾಡಗಳು, ಬಾನಾಮತಿಗಳ ಬಗೆಗೆ ಏನು ಹೇಳುವಿರಿ ?

— ಈ ಪವಾಡಗಳೇ ದೇವರ ಅಸ್ತಿತ್ವಕ್ಕೆ ಸಾಕ್ಷ್ಯಾಧಾರಗಳು ಎಂದು ನಂಬುವ ಜನಸಮೂಹವಿದೆ. ಗಾಯ ವಾಸಿಯಾಗಿದೆ ಎಂದೇನೋ ಬಹು

ಜನರಿಂದ ಕೇಳುತ್ತೇವೆ, ಆದರೆ, ಆ ಬಗೆಗೆ ನಿರ್ಧರಿತ ಹಾಗೂ ಮುಕ್ತ ವೈದ್ಯಕೀಯ ಅಧಿಕಾರಿಯಿಂದ ಅಥವಾ ಶಸ್ತ್ರಚಿಕಿತ್ಸೆಯ ವೈದ್ಯರಿಂದ ಯಾವ ಪರವಾನಗಿಯನ್ನು ಪಡೆಯಲಾರೆವು. ಒಂದು ಮಹಾಪಘಾತದಿಂದ ಆಶ್ಚರ್ಯಕರವಾಗಿ ಒಬ್ಬನು ಸಂರಕ್ಷಿಸಲ್ಪಟ್ಟನೆಂಬ ವರದಿಯನ್ನು ಎರಡನೆಯವರಿಂದ ಕೇಳುವೆವು, ಆದರೆ ಅದರ ಪ್ರತ್ಯಕ್ಷದರ್ಶಿಯಾಗಿ, ಏನೇನು, ಹೇಗೆ ಸಂಭವಿಸಿದೆ ಎಂಬ ಸಂಪೂರ್ಣ ವಿವರ ನೀಡುವವರನ್ನು ನಾವು ಪಡೆಯಲಾರೆವು. ಪ್ರಾರ್ಥನೆಯು ಒಬ್ಬ ರೋಗಗ್ರಸ್ತನ ಶರೀರವನ್ನು ಉತ್ತಮ ಸ್ಥಿತಿಗೆ ತಂದಿತು, ವಿಕಾರವಾಗಿ ಬಗ್ಗಿದ ಕಾಲನ್ನು ನೆಟ್ಟಗೆ ಮಾಡಿತು ಎಂಬ ಸಂಗ್ರಹ ವಾರ್ತೆಯನ್ನೇನೋ ಕೇಳಬಲ್ಲೆವು, ಆದರೆ, ಆ ಬಗೆಗೆ ಯಾವ ವೈದ್ಯಕೀಯ ವಿವರಣೆಯು ಕ್ಷ-ಕಿರಣ ಚಿತ್ರಪಟಗಳನ್ನಾಗಲೀ ವೈದ್ಯಕೀಯ ತಪಾಸಣೆಗಳಾಗಲೀ ದೊರೆಯುವುದಿಲ್ಲ. ದಟ್ಟವಾಗಿ ಹರಡಿರುವ ಸುದ್ದಿ, ಎರಡನೆಯವರ ವಾಸ್ತುವಿವರಣೆ ಮತ್ತು ವದಂತಿಗಳ ಸಮೂಹಗಳು ನಿಶ್ಚಿತ ಸಾಕ್ಷ್ಯಾಧಾರಗಳನ್ನು ಪ್ರತಿಕ್ಷೇಪಿಸಲಾರವು ಮತ್ತು ಈ ಪವಾಡಗಳನ್ನು ವಿವರಿಸುವ ಹಾಗೂ ಪುಷ್ಟೀಕರಿಸಬಲ್ಲ ನಿದರ್ಶನಗಳು ಅತಿ ವಿರಳ. ಹೀಗಿದ್ದರೂ, ವಿವರಣೆ ನೀಡಲಾಗದ ಹಲವು ಸನ್ನಿವೇಶಗಳು ಸಂಭವಿಸುವುದೆಂಬುದೂ ನಿಜ. ಅಂತೆಯೇ ಆ ನಿರೀಕ್ಷಿತ ಘಟನೆಗಳು ನಡೆಯುವುದು ನಿಜ. ಆದರೆ, ಇಂತಹ ಸಂಘಟನೆಗಳನ್ನು ಸಕಾರಣ ವಿವರಣೆಯಿಂದ ವರ್ಣಿಸುವ ಚಾಕಚಕ್ಯತೆಯು, ಸಾಮರ್ಥ್ಯವು, ದೇವರ ಇರುವಿಕೆಯನ್ನು ಧೃತಪಡಿಸಲು ಅಸಮರ್ಥನೀಯ. ಈ ದಿಶೆಯಲ್ಲಿನ ನಮ್ಮ ಜ್ಞಾನವು ಇನ್ನೂ ಅಪೂರ್ಣವೆಂಬುದನ್ನು ಮಾತ್ರ ಸಾಧಿಸುತ್ತದೆ. ಇಂದಿನ ನೂತನ ವೈದ್ಯಕೀಯ ತಾಂತ್ರಿಕತೆಯು ಅಭಿವೃದ್ಧಿಯಾಗುವ ಮುನ್ನ, ಅದರಲ್ಲೂ ಮಾನವರು, ಯಾವ ಕಾರಣದಿಂದ ಒಂದು ರೋಗವು ಉತ್ಪತ್ತಿಯಾಗುತ್ತದೆ ಎಂಬುದನ್ನು ಅರಿಯಲಾಗದಿರುವ ಕಾಲದಲ್ಲಿ, ಜನರು, ಇಂತಹ ರೋಗಗಳನ್ನು ದೇವರು ಇಲ್ಲವೇ ದೇವತೆಗಳು ಅವರಿಗೆ ಶಿಕ್ಷೆ ಕೊಡಲು ಈ ಬಗೆಯ ರೋಗಗಳನ್ನು ಕಳುಹಿಸಿರುವನೆಂದೇ ನಂಬುತ್ತಿದ್ದರು ಆದರೆ, ಇಂದು ಯಾವ ರೋಗವು ಯಾವ ಕಾರಣದಿಂದ ಬರುತ್ತದೆಂಬುದನ್ನು ನಾವು ತಿಳಿದಿರುವೆವು ಮತ್ತು ಅಂತಹ ರೋಗಗಳಿಗೆ ತಕ್ಕಂತೆಯೇ ಔಷಧವನ್ನು ಚಿಕಿತ್ಸೆಯನ್ನೂ ತೆಗೆದುಕೊಂಡು ಗುಣ ಹೊಂದುವೆವು. ಹೀಗೆಯೇ ನಮ್ಮ ಈ ಜ್ಞಾನಮಟ್ಟವು ಪ್ರಪಂಚದಲ್ಲಿ ಸರ್ವ ಜ್ಞಾನವನ್ನು ಕ್ರಮೇಣ ಅರಿತು ಪೂರ್ಣತೆ ಪಡೆದ ನಂತರದ ಸಮಯದಲ್ಲಿ, ಇಂದಿನ ಯಾವ ಜ್ಞಾನವನ್ನು ವಿವರಿಸಲು ಸಾಧ್ಯವೋ ಅವನ್ನು ಅರಿತು ವಿವರಿ-

ಬಹುದು—'ಇಂದು ನಾವು ರೋಗಗಳು ಮತ್ತು ಅವಕ್ಕೆ ಕಾರಣಗಳನ್ನು ಕಂಡುಕೊಂಡು ಸೂಕ್ತ ಚಿಕಿತ್ಸೆಯನ್ನು ಪಡೆಯುವಂತೆ.

ಪ್ರಶ್ನೆ :— ಆದರೆ ಅಪಾರ ಜನರು, ಯಾವುದೋ ಒಂದು ಬಗೆಯಲ್ಲಿ ನಂಬುತ್ತಿರುವರು, ಬಹುಶಃ ಇದು ನಿಜವಲ್ಲವೇ ?

—ಹಾಗೇನಿಲ್ಲ, ಒಂದಾನೊಂದು ಕಾಲದಲ್ಲಿ ಪ್ರತಿಯೊಬ್ಬರೂ, ಭೂಮಿ ಚಪ್ಪಟೆಯಾಗಿದೆ ಎಂದು ನಂಬಿದ್ದರು, ಆದರೆ, ಅವರೆಲ್ಲರೂ ತಪ್ಪು ಗ್ರಹಿಸಿದ್ದರು. ಹಾಗೆಯೇ ಹೆಚ್ಚು ಜನರು ಸಂಪೂರ್ಣ ನಂಬಿಕೆಯನ್ನು ಒಂದು ವಸ್ತುವಿನ ಬಗ್ಗೆ ತಳೆದಿದ್ದಾರೆ ಎಂದಮಾತ್ರಕ್ಕೆ, ಅದು ಆ ವಸ್ತುವಿನ ಸತ್ಯಾರ್ಥತೆಯನ್ನಾಗಲೀ ಅಥವಾ ಮಿಥ್ಯವನ್ನಾಗಲೀ ಸಾಧಿಸಲಾರದು. ನಾವು, ಯಾವ ವಸ್ತು ಅಥವಾ ಸತ್ಯಾಸತ್ಯತೆಗಳ ಬಗೆಗೆ ನಿರ್ದಿಷ್ಟವಾಗಿ ನುಡಿಯಬೇಕಾದರೆ, ಆ ವಸ್ತುವನ್ನು ಸರ್ವವಿಧದಲ್ಲಿ ದೃಷ್ಟಿಸಿ ನೋಡಿ, ಅವುಗಳಲ್ಲಿನ ನಿಜಾಂಶಗಳನ್ನು ಪರೀಕ್ಷಿಸಿ, ಅವಕ್ಕೆ ಸಾಕಷ್ಟು ನಿದರ್ಶನಗಳನ್ನು ಪಡೆದು ಅನಂತರ ಅದರ ಸತ್ಯಾತೆಗಳ ಬಗ್ಗೆ ನಿರ್ಧರಿಸಬಹುದು.

ಪ್ರಶ್ನೆ :— ಹಾಗಾದರೆ, ಭಗವಾನ್ ಬುದ್ಧರು ದೇವರನ್ನು ನಂಬಿದ್ದರೆ, ನೀವು ಏನನ್ನು ನಂಬುವಿರಿ ?

—ನಾವು ಮಾನವರಲ್ಲಿ ನಂಬಿಕೆಯನ್ನು ಇಟ್ಟಿರುವೆವಾದ್ದರಿಂದ ದೇವರನ್ನು ನಂಬುವುದಿಲ್ಲ. ಪ್ರತಿ ಮಾನವನೂ ಸಹ ಉತ್ಕೃಷ್ಟ ಮತ್ತು ಅತಿ ಮುಖ್ಯವಾದವನೆಂದೂ, ಇಂತಹ ಪ್ರತಿಯೊಬ್ಬನೂ ಒಬ್ಬ ಬುದ್ಧನಾಗಬಲ್ಲ ಶಕ್ತಿಸಾಮರ್ಥ್ಯವನ್ನು ಮತ್ತು ಹಕ್ಕನ್ನೂ ಪಡೆದಿರುವನೆಂಬುದನ್ನು ಆ ಮೂಲಕ ಪ್ರತಿಯೊಬ್ಬನೂ ಪರಿಪೂರ್ಣ ನಂಬಿಕೆಯನ್ನು ನಾವು ತಳೆದಿರುವೆವು. ಜೊತೆಗೆ ಪ್ರತಿಮಾನವನೂ, ತನ್ನಲ್ಲಿರಬಹುದಾದ ಅಜ್ಞಾನವನ್ನು ಅವಿವೇಕತ್ವವನ್ನು ಮತ್ತು ಅವಾಸ್ತವಾಂಶತೆಯ ಆಲೋಚನೆಗಳನ್ನು ದೂರಮಾಡಿ ಪ್ರತಿ ವಸ್ತುವನ್ನೂ ಅವು ಗೋಚರಿಸುವಂತೆಯೇ ವೀಕ್ಷಿಸಿ, ವಿಮರ್ಶೆ ನೀಡುವ ಸಾಮರ್ಥ್ಯವನ್ನು ಪಡೆಯಬಲ್ಲನೆಂದೂ ನಂಬುವೆವು. ಹಾಗೆಯೆ, ತುಚ್ಛಾ ಭಾವನೆ, ಕೋಪ, ಹಗೆತನ ಮತ್ತು ಅಸೂಯೆಗಳಿಗೆ ಬದಲಾಗಿ, ಪ್ರೀತಿ, ಸಹನೆ, ಉದಾರತ್ವ ಮತ್ತು ಕನಿಕರಗಳನ್ನು ಪಾಲಿಸಲು ಶ್ರಮಿಸುವ ನಂಬಿಕೆ ಇಟ್ಟಿದ್ದೇವೆ. ಈ ಸನ್ನಿವೇಶ ಭಾವನೆಗಳೆಲ್ಲವೂ ಪ್ರಯತ್ನಪಡುವ ಪ್ರತಿ ಮಾನವ ಗ್ರಾಹ್ಯ ಪರಿಮಿತಿಯೊಳಗಿದೆ ಎಂಬುದನ್ನು ಮತ್ತು ಅವನಿಗೆ ಈ ಬಗೆಗೆ ಸಾಕಷ್ಟು ಮಾರ್ಗದರ್ಶನ ಮತ್ತು ಉತ್ತೇಜನವನ್ನು ಇತರೆ ಬೌದ್ಧೀಯರು ನೀಡುವುದಾದರೆ,

ಮತ್ತು ಈ ಸಂದರ್ಭಕ್ಕೆ ಉತ್ತೇಜಕವಾದ ಭಗವಾನ್ ಬುದ್ಧರ ಆದರ್ಶ ಜೀವನದ ಹಲವಾರು ಉದಾಹರಣೆಗಳನ್ನು ನೀಡುವುದಾದರೆ ಅದರಿಂದ ಸರ್ವೋತ್ಸಾಹಗೊಂಡು ಬೌದ್ಧೀಯರಾಗಿ ವರ್ತಿಸುವರೆಂಬುದರಲ್ಲಿನ ನಂಬಿಕೆಯನ್ನು ಹೊಂದಿದ್ದೇವೆ. ಭಗವಾನ್ ಬುದ್ಧರು ಹೇಳಿರುವಂತೆ,

> "ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕೇ ವಿನಃ ಬೇರೆಯಾರಿಂದಲೂ ಅಲ್ಲ. ಮತ್ತು ಯಾರೊಬ್ಬರಿಂದಲ್ಲೂ ಬಹುಶಃ ಅಲ್ಲ ಆ ದಾರಿಯಲ್ಲಿ ನಮ್ಮಷ್ಟಕ್ಕೆ ನಾವೇ ನಡೆಯಬೇಕು". ಆದರೆ ಬುದ್ಧರು ಮಾತ್ರ ಈ ದಾರಿಯನ್ನು ನಿಚ್ಚಳವಾಗಿ ತೋರುವರು.

DP 165

—0—

## 4. ಪಂಚೇಂದ್ರಿಯ ಗ್ರಾಹ್ಯಗಳು

ಪ್ರಶ್ನೆ :— ಇತರ ಜಾತಿಯವರು, ಸರಿ-ತಪ್ಪುಗಳ ಭಾವನೆಗಳನ್ನು ಅವರ ದೇವರ ಅಥವಾ ದೇವರುಗಳ ಆಣತಿಯಂತೆ ಪಡೆದುಕೊಳ್ಳುವರು. ಬೌದ್ಧೀಯರಾದ ನೀವು ದೇವರುಗಳನ್ನು ನಂಬುವುದಿಲ್ಲ ಹಾಗಿದ್ದಲ್ಲಿ, **ಸರಿ**-ತಪ್ಪುಗಳನ್ನು ನೀವು ಹೇಗೆ ತಿಳಿದುಕೊಳ್ಳುವಿರಿ ?

—ಯಾವ ಆಲೋಚನೆಗಳು, ಭಾಷಣಗಳು ಮತ್ತು ಕಾರ್ಯಚಟುವಟಿಕೆಗಳು ಲೋಭತ್ವ, ತುಚ್ಛಾ ಭಾವನೆ ಮತ್ತು ವಂಚನೆಗಳ ಮೂಲವನ್ನು ಹೊಂದಿವೆಯೋ, ಮತ್ತು ನಿರ್ವಾಣದಿಂದ ದೂರ ಕರೆದೊಯ್ಯುವುವೋ ಇವೆಲ್ಲವೂ ತಪ್ಪು ಭಾವನೆಗಳು. ಅಂತೆಯೇ ಯಾವ ಆಲೋಚನೆಗಳು, ಭಾಷಣಗಳು ಅಥವಾ ಕಾರ್ಯಚಟುವಟಿಕೆಗಳು, ಪ್ರೀತಿ, ಮತ್ತು ಬುದ್ಧಿವಂತಿಕೆಗಳೊಡಗೂಡಿ, ನಿರ್ವಾಣದೆಡೆಗೆ ಹೋಗುವ ನಿಶ್ಚಲ ಮಾರ್ಗಕ್ಕೆ ನೆರವು ನೀಡುವುವೋ ಅವೆಲ್ಲವೂ ಒಳ್ಳೆಯ ಭಾವನೆಗಳು

ದೇವರ ಪ್ರಭಾವದಿಂದ ತಪ್ಪು-ಸರಿಗಳನ್ನು ತಿಳಿದುಕೊಳ್ಳುವುದೆಂದರೆ ಅದು ಕೇವಲ ಹೇಳಿದುದನ್ನು ಮಾತ್ರ ಅನುಸರಿಸಿ ನಡೆಯುವುದನ್ನು ಮಾತ್ರವೇ ಮಾಡಲು ಸಾಧ್ಯ. ಆದರೆ, ಮನುಷ್ಯನ ಪ್ರಭಾವದಿಂದ ನಿರ್ವಹಿಸುವ, ಅಂದರೆ ಬೌದ್ಧೀಯ ಮತ ಧರ್ಮಗಳಲ್ಲಿರುವಂತ ಸರಿ-ತಪ್ಪು ಭಾವಗಳನ್ನು ತಿಳಿಯಲು, ಪ್ರತಿಮಾನವನಲ್ಲೂ ಸ್ವಯಂ-ಎಚ್ಚರಿಕೆ

ಮತ್ತು ಸ್ವಯಂ ತಿಳುವಳಿಕೆಗಳನ್ನು ಬಲಪಡಿಸಿಕೊಳ್ಳುವುದನ್ನು ಆಧರಿಸಿದೆ. ಸ್ವಂತ ತಿಳಿವಳಿಕೆಗಳ ಮೂಲಾಧಾರಿತ ತತ್ವ ಸಿದ್ಧಾಂತಗಳು, ಯಾರೊಬ್ಬರ ಆದೇಶಗಳ ಮೇರೆಗೆ ಅನುಸರಿಸುವ ಸಿದ್ಧಾಂತಗಳಿಗಿಂತಲೂ ಹೆಚ್ಚು ಪ್ರಭಾವ ಮತ್ತು ಸಾಮರ್ಥ್ಯವನ್ನು ಹೊಂದಿವೆ.

ಆದುದರಿಂದ, ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ತಿಳಿದುಕೊಳ್ಳಲು, ಬೌದ್ಧೀಯರು ಮೂರು ಮುಖ್ಯ ವಸ್ತುಗಳಿಗಾಗಿ ನೋಡುವರು—ಆದರ ಉದ್ದೇಶ, ಆ ಕಾರ್ಯದಿಂದ ಒಬ್ಬನ ಸ್ವಯಂ ಸ್ವಭಾವಕ್ಕೆ ಬೀರುವ ಪರಿಣಾಮವೇನೆಂಬುದು ಮತ್ತು ಅಂತೆಯೇ ಈ ಕಾರ್ಯವು ಇತರರ ಮೇಲೆ ಯಾವ ಪ್ರಭಾವ ಬೀರುತ್ತದೆ ಎಂಬುದನ್ನು ಗಮನಿಸುವರು. ಆ ಕಾರ್ಯದ ಉದ್ದೇಶ (ಪ್ರೀತಿ ಮತ್ತು ಬುದ್ಧಿವಂತಿಕೆ) ಒಳ್ಳೆಯದಾಗಿದ್ದರೆ, ಅದು ನನಗೆ ಸಹಾಯಕವಾಗಿದ್ದರೆ (ಅಂದರೆ ಹೆಚ್ಚು ಹೆಚ್ಚು ಕೊಡಲು ಪ್ರೀತಿಸಲು ಮತ್ತು ಬುದ್ಧಿವಂತಿಕೆ ನೀಡುವುದಕ್ಕೆ ನೆರವು ನೀಡುವುದು) ಮತ್ತು ಇತರರಿಗೆ ನೆರವು ನೀಡುವುದಾದರೆ, (ಅವರಿಗೆ, ಹೆಚ್ಚು ಕೊಡಲು, ಹೆಚ್ಚು ಪ್ರೀತಿಸಲು ಮತ್ತು ಬುದ್ಧಿವಂತರಾಗಲು) ಸಹಾಯಕವಾಗಿದ್ದರೆ, ಆಗ ಅಂತಹ ಕೆಲಸಗಳು ಮತ್ತು ಕಾರ್ಯಾಚರಣೆಗಳು ಹಿತಕರ, ಒಳ್ಳೆಯದು ಮತ್ತು ನೀತಿಯುತವಾದುದು. ಇದಕ್ಕೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳು ಇವೆ. ಕೆಲವೊಮ್ಮೆ ನಾನು, ನನ್ನ ಅತ್ಯಂತ ಉತ್ತಮ ಸದುದ್ದೇಶದಿಂದಲೇ ಯಾವುದೋ ಒಂದು ಕಾರ್ಯ ನೆರವೇರಿಸುವೆನು, ಆದರೆ, ಅದು ಇತರರಿಗಾಗಲೀ ಅಥವಾ ನನಗಾಗಲೀ ಯಾವ ಪ್ರಯೋಜನವನ್ನು ತಾರದಿರಬಹುದು. ಅಂತೆಯೇ ಕೆಲವೊಮ್ಮೆ ನಮ್ಮ ಉದ್ದೇಶಗಳು ಉತ್ತಮತನದಿಂದ ಅನತೀ ದೂರದಲ್ಲಿರಬಹುದು, ಆದರೆ ಆ ಕೆಲಸದಿಂದ ಇತರರಿಗೆ ಪ್ರಯೋಜನಕಾರಿಯಾಗಬಹುದು, ಕಡಿಮೆ ಪ್ರಮಾಣದ್ದೇನಲ್ಲ. ಕೆಲವೊಮ್ಮೆ ನಾನು ಉತ್ತಮ ಧ್ಯೇಯೋದ್ದೇಶಹೊಂದಿ ಕಾರ್ಯನಿರ್ವಹಿಸುವೆನು ಅದು ನನಗೆ ಮಾತ್ರ ಸಹಾಯಕಾರಿ, ಇತರರಿಗೆ ಹಲವು ಬಗೆಯ ತೊಂದರೆಗಳನ್ನು ತರುತ್ತದೆ. ಈ ಸಂದರ್ಭದಲ್ಲಿ ನನ್ನ ಕಾರ್ಯಾಚರಣೆ ಸಮಿಶ್ರಣವಾಗಿ, ಅಂದರೆ, ಉತ್ತಮ ಭಾವನೆ ತಳೆಯದೆ, ದುರ್ಭಾವನೆಯಿಂದ ಕಾರ್ಯ ನೆರವೇರಿಸಿದರೆ, ಅದು ನನಗಾಗಲೀ ಅಥವಾ ಇತರರಿಗಾಗಲೀ ಅಪ್ರಯೋಜಕ. ಇಂತಹದು ಕೆಟ್ಟದ್ದು ಅಥವಾ ಅದು ತಪ್ಪು ಕಾರ್ಯವಾಗುವುದು. ಹಾಗೆಯೇ ನನ್ನದು ಸದಾಲೋಚನೆ ಮತ್ತು ಒಳ್ಳೆಯ ಉದ್ದೇಶ ಹೊಂದಿದ ಆ ಕಾರ್ಯವನ್ನು ನೆರವೇರಿಸಿದಾಗ,

ಅದರಿಂದ ನನಗೂ ಮತ್ತು ಇತರರಿಗೂ, ಪ್ರಯೋಜನಕಾರಿಯಾದರೆ, ಆಗ ಆ ಕಾರ್ಯವು ಉತ್ತಮವಾದ್ದು ಮತ್ತು ಅದು ಒಳ್ಳೆಯದೂ ಕೂಡ.

ಪ್ರಶ್ನೆ :— ಹಾಗಾದರೆ ಬೌದ್ಧೀಯ ಧರ್ಮ ನೀತಿ ಶೀಲ ನಿಯಮಗಳನ್ನು ಹೊಂದಿದೆಯೇ ?

—ಹೌದು, ಅದು ಉತ್ತಮ ನೀತಿ ಶೀಲತೆ ಪಡೆದಿದೆ. ಪಂಚೇಂದ್ರಿಯ ಗ್ರಾಹ್ಯ ವೈವಿಧ್ಯತೆಯೇ ಬೌದ್ಧ ಧರ್ಮಗಳ ನೀತಿ ಶೀಲಗಳ ಮೂಲ. ಇಲ್ಲಿನ ಪ್ರಥಮ ಗ್ರಾಹ್ಯವು, ಯಾವುದೇ ಪ್ರಾಣಿ ಅಥವಾ ಜೀವಿಯನ್ನು ಕೊಲ್ಲುವುದು ಇಲ್ಲವೇ ಹಿಂಸಿಸುವುದನ್ನು ನಿಷೇಧಿಸುತ್ತದೆ. ಎರಡನೆಯದು ಕದಿಯುವುದನ್ನು, ಮೂರನೆಯದು ಲೈಂಗಿಕ ದುರ್ವರ್ತನೆಗಳನ್ನು, ನಾಲ್ಕನೆಯದು, ಸುಳ್ಳು ಹೇಳುವುದನ್ನು ಮತ್ತು ಐದನೆಯದು ಮತ್ತು ಬರಿಸುವ ಯಾವ ವಿಧದ ಮಾದಕ ಪದಾರ್ಥಗಳನ್ನು ದೂರವಿರಿಸುವುದು.

ಪ್ರಶ್ನೆ :— ಆದರೆ, ಕೊಲ್ಲುವುದು ಖಂಡಿತವಾಗಿಯೂ ಕೆಲವೊಮ್ಮೆ ಒಳ್ಳೆಯದು. ಉದಾಹರಣೆಯಾಗಿ. ದುಷ್ಟ ರೋಗಗಳನ್ನು ಹರಡುವ ವಿಷಕ್ರಿಮಿಗಳನ್ನು ಕೊಲ್ಲುವುದು, ಅಥವಾ ನಿನ್ನನ್ನೇ ಕೊಲ್ಲಬೇಕೆಂದಿರುವವನನ್ನು ಕೊಲ್ಲುವುದು ಒಳ್ಳೆಯದಲ್ಲವೇ ?

—ಅದು ನಿನಗೆ ಉತ್ತಮವಾಗಬಹುದು. ನೀನು ಕೊಲ್ಲಬಯಸುವ ಆ ವಸ್ತು ಅಥವಾ ವ್ಯಕ್ತಿಯ ಗತಿಯೇನು ? ನೀನು ಜೀವಿಸಿರುವಂತೆ, ಅವೂ ಸಹ ಜೀವಿಸುವ ಹೆಬ್ಬಯಕೆ ಹೊಂದಿರುವುದಿಲ್ಲವೇ. ಕೆಟ್ಟ ರೋಗಗಳನ್ನು ಹರಡುವ ಜೀವಾಣುಗಳನ್ನು ನೀನು ಕೊಲ್ಲುವ ಬಯಕೆಯುಳ್ಳವನಾದಾಗ, ನಿನ್ನ ಭಾವವು ಸಂಮಿಶ್ರಣವಾದುದು, ಅಂದರೆ ಸ್ವಂತದ್ದು (ಒಳ್ಳೆಯದು) ಮತ್ತು ಕೆಟ್ಟದ್ದು ಇವುಗಳಿಂದ ಕೂಡಿದ ಈ ಕೆಲಸವು ನಿನಗೆ ಅನುಕೂಲವಾದರೂ ಆ ಜೀವಾಣುಗಳಿಗೆ ಕೆಟ್ಟದ್ದು (ಮಾರಕ). ಹಾಗಾದರೆ, ಕೆಲವೊಮ್ಮೆ ಕೊಲ್ಲುವುದು ಅವಶ್ಯಕವಾಗಬಹುದು, ಆದರೆ ಅದು ಸರ್ವೋತ್ಕೃಷ್ಟವಾದುದೇನೂ ಅಲ್ಲ.

ಪ್ರಶ್ನೆ :— ಬೌದ್ಧೀಯರಾದ ನೀವು, ಇರುವೆ ಮತ್ತು ತಿಗಣೆಗಳ ಬಗ್ಗೆ ತುಂಬಾ ಸಂಬಂಧ ವಿಟ್ಟುಕೊಂಡಿರುವಿರಲ್ಲವೇ ?

—ಬೌದ್ಧೀಯರು, ಸರ್ವರಲ್ಲಿಯೂ, ಸರ್ವ ವಸ್ತುಗಳಲ್ಲಿಯೂ ಅಸಮಾನ್ಯ ದಯೆ, ಕನಿಕರಗಳನ್ನು ಒಲಪಡಿಸಿ ಜೀವಿಸಲು ತವಕಿಸುವರು. ಅವರು ಇಡೀ ಪ್ರಾಪಂಚಿಕ ವ್ಯವಹಾರಗಳನ್ನು ಒಂದು ಸಾಂಘಿಕ ಘಟಕ

ವೆಂದು ಭಾವಿಸುವರು, ಅಂತೆಯೇ ನಡೆಯುತ್ತಿರುವರು. ಇಲ್ಲಿ ಪ್ರತಿಯೊಂದು ಜೀವಿಯೂ ವಸ್ತುವೂ ಸಹ ತನ್ನದಾದ ಸ್ಥಳವನ್ನೂ ಮತ್ತು ತನ್ನದಾದ ಪಾತ್ರನಿರ್ವಹಣೆಯ ಜವಾಬ್ದಾರಿ ಹೊತ್ತಿದೆ ಎಂದು ಭಾವಿಸಿ ನಡೆಯುವರು. ಪ್ರಕೃತಿಯನ್ನು ವಿಕೃತಿಗೊಳಿಸುವುದಾಗಲೀ, ನಾಶಗೊಳಿಸುವುದಾಗಲೀ ಅಥವಾ ಈ ಪ್ರಕೃತಿಯ ಸಮತೋಲನವನ್ನು ಬದಲಿಸುವುದರಲ್ಲಾಗಲೀ ನಾವು ಅತ್ಯಂತ ಎಚ್ಚರವಾಗಿರಬೇಕು. ಈ ಪ್ರಕೃತಿಯನ್ನು ಪೂರ್ಣವಾಗಿ ಸ್ವಾರ್ಥಕ್ಕಾಗಿ ಬಳಸಬೇಕೆಂಬ ಒತ್ತಾಯವಿರುವ ನಾಗರಿಕತೆಯನ್ನು, ಅದರಲ್ಲೂ, ಕೆನೆಯ ತೊಟ್ಟು ಶಕ್ತಿಯನ್ನು ಹೀರಿಕೊಂಡು ಪ್ರತಿಯಾಗಿ ಏನನ್ನೂ ಉಳಿಸದಂತೆ ವರ್ತಿಸುವ ರಕ್ತ ಗಮನಿಸಿ. ಇದರಿಂದ ವಾಯುಮಾಲಿನ್ಯವೂ ಉಂಟಾಗಿದೆ, ನದಿಗಳು ಕಲುಷಿತಗೊಂಡು ಬತ್ತಿ ಹೋಗುತ್ತಿವೆ, ಅನೇಕ ಸೌಂದರ್ಯದ ಸಸ್ಯ ಪ್ರಾಣಿ ಪಕ್ಷಿಗಳು ಪೀಳಿಗೆಯು ನಾಶವಾಗುತ್ತದೆ, ಅರಣ್ಯದ ಇಳಿಜಾರು ಪ್ರದೇಶಗಳು ಬಣ ಭೂಮಿಗಳಾಗಿಯೂ, ಮತ್ತು ಭೂಕುಸಿತದಿಂದ ಅವ್ಯವಸ್ಥವಾಗಿವೆ. ತತ್ಪರಿಣಾಮದಿಂದ ಹವಾಗುಣವೂ ಪೂರ್ಣ ಬದಲಾಯಿಸುತ್ತಿದೆ. ಹೀಗೆ ಜನಗಳು (ಮಾನವನು ಈ ತುಳಿತವನ್ನು, ವಿನಾಶಕಾರಿ ಕ್ರಿಯೆಗಳನ್ನು ಮತ್ತು ಕೊಲ್ಲುವುದನ್ನು ಅಲ್ಪ ಸ್ವಲ್ಪವಾದರೂ ತಗ್ಗಿಸಿದ್ದಾಗಿದ್ದರೆ, ಇಂತಹ ಘೋರ ದುಸ್ಥಿತಿಗಳು ಉತ್ಪತ್ತಿಯಾಗುತ್ತಲೇ ಇರಲಿಲ್ಲ; ಆದುದರಿಂದ ಈಗ ಮಾನವರೆಲ್ಲರೂ ಪ್ರಕೃತಿಯಲ್ಲಿ ಜೀವರಾಶಿಗಳನ್ನು ಕೊಲ್ಲುವುದರ ವಿರುದ್ಧ ಭಾವನೆಯನ್ನು ಬಲಪಡಿಸಿಕೊಳ್ಳಬೇಕು. ಇದೇ ಇಂದ್ರಿಯ ಪ್ರಥಮ ಗ್ರಾಹ್ಯಸೂತ್ರ.

ಪ್ರಶ್ನೆ : — ಆದರೆ ಸುಳ್ಳು ಹೇಳುವ ಬಗ್ಗೆ ಏನು ? ಅನೃತ ನುಡಿಯದೆ ಜೀವಿಸಲು ಸಾಧ್ಯವೇ ?

—ಇಂದಿನ ನಮ್ಮ ಸಮಾಜದಲ್ಲಿಯಾಗಲೀ, ಅಥವಾ ವ್ಯಾಪಾರ ವಹಿವಾಟುಗಳಲ್ಲಾಗಲೀ ಅನೃತ ನುಡಿಯದೆ ವ್ಯವಹರಿಸಲಾಗುತ್ತಿಲ್ಲ; ಇಂತಹ ಭಯೋತ್ಪಾದಕ ಮತ್ತು ಲಂಚಗುಳಿತನ ವ್ಯಾಪಕಸ್ಥಿತಿಯಲ್ಲಿ ಬದಲಾವಣೆಯು ಅತ್ಯಗತ್ಯವಾಗಿರಬೇಕಾಗಿದೆ. ಈ ದಿಸೆಯಲ್ಲಿ, ಬೌದ್ಧ ಧರ್ಮಗಳು ಏನಾದರೊಂದು ಗಣನೀಯ ಹಾಗೂ ಪರಿಣಾಮಕಾರಿ ಪ್ರಾಯೋಗಿಕ ಕಾರ್ಯವನ್ನು ಸಂಘಟಿಸಿ, ಈ ವಿಷ ಚಕ್ರಕ್ಕೆ ಪರಿಹಾರ ದೊರಕಿಸಿ, ಆ ಮೂಲಕ ಹೆಚ್ಚು ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಬೆಳೆಸಲು ಶ್ರಮಿಸುವವು.

**ಪ್ರಶ್ನೆ :—** ಮಾದಕ ದ್ರವ್ಯಗಳನ್ನು ಕುರಿತಾದ ಅಭಿಪ್ರಾಯಗಳೇನು ? ಅಲ್ಪ ಸ್ವಲ್ಪ ಕುಡಿತವು ತೊಂದರೆಗೀಡುಮಾಡುವುದಿಲ್ಲವಲ್ಲವೇ ?

—ಮಾದಕ ದ್ರವ್ಯಪಾನೀಯಕಾರರು, ಅದನ್ನು ರುಚಿಗಾಗಿ ಎಂದೂ ಸೇವಿಸರು. ಇವರು ಏಕಾಂತವಾಗಿ ಕುಡಿಯುತ್ತಿರುವವರಾದರೆ, ಆ ಕುಡಿತವು ತಮ್ಮ ಮನಸ್ಸಿನಲ್ಲಿರುವ ಕಠಿಣ ಸ್ಥಿತಿಗಳಿಂದ ತಾತ್ಕಾಲಿಕ ವಿಮೋಚನೆ ಪಡೆಯುವುದಕ್ಕಾಗಿ, ಅದೇ ಕುಡಿತವನ್ನು ಒಂದು ಸಂಘ ಸಂಸ್ಥೆಗಳಲ್ಲಿ ಮಾಡಿದರೆ, ಅದನ್ನು ನಿರ್ಧರಿಸಲೋಸುಗವಾಗುತ್ತೆ. ಸ್ವಲ್ಪ ಪ್ರಮಾಣದ ಮದ್ಯಪಾನವು ಸ್ವಪ್ರಜ್ಞೆಯನ್ನು ಬದಲಿಸುತ್ತದೆ ಮಾತ್ರವಲ್ಲದೆ, ತನ್ನ ಸ್ವ-ಎಚ್ಚರವನ್ನು ತಲಕೆಳಗು ಮಾಡುತ್ತದೆ. ಇದನ್ನೇ ಅತಿಯಾಗಿ ಬಳಸಿದರೆ, ಇದರ ಪ್ರಭಾವವು ಕುಡಿದವನ ನಾಶಕ್ಕೆ ನಾಂದಿಯಾಗುವುದು.

**ಪ್ರಶ್ನೆ :—** ಅತಿ ಕಡಿಮೆ ಪ್ರಮಾಣದ ಮಾದಕ ದ್ರವ್ಯಸೇವನೆಯು ಅತಿತೆ ವಿರಳವಾಗಿಯೂ ಪ್ರಜ್ಞೆಯನ್ನು ಕಡಿಯದು ಅಥವಾ ಗ್ರಾಹ್ಯಯನ್ನು ಬದಲಿಸದು, ಹೌದಲ್ಲವೇ? ಇದೊಂದು ಅತಿ ಸಣ್ಣ ವಿಷಯ ಹೇಗೆ.

—ಹೌದು, ಇದೊಂದು ಸಣ್ಣ ವಿಷಯವೇ, ಇಂತಹ ಒಂದು ಚಿಕ್ಕ ಅಥವಾ ಪುಟ್ಟ ಅಭ್ಯಾಸವನ್ನೂ ಅಭ್ಯಸಿಸಲಾರದಾದರೆ, ನಿಮ್ಮ ವಚನ ಬದ್ಧತೆ ಮತ್ತು ಸಂಕಲ್ಪಗಳು ಪ್ರಬಲವಾಗುವುದಿಲ್ಲವೇ ? ಇದು ನಿಜವಲ್ಲವೇ ?

**ಪ್ರಶ್ನೆ :** ಈ ಪಂಚೇಂದ್ರಿಯ ಗ್ರಾಹ್ಯಗಳು ನಕಾರಾತ್ಮಕಗಳು. ಅವುಗಳು ನೀವು ಏನೇನು ಮಾಡಬಾರದುದೆಂಬುದನ್ನು ತಿಳಿಸುವುವು. ಅವುಗಳು ನೀವೇನು ಮಾಡಬೇಕೆಂಬುದನ್ನು ಹೇಳುವುದಿಲ್ಲವಲ್ಲವೇ ?

—ಈ ಪಂಚೇಂದ್ರಿಯ ಗ್ರಾಹ್ಯಗಳು, ಬೌದ್ಧೀಯ ನೀತಿ ಶೀಲಗಳ ಮೂಲಧಾರಗಳು. ಅವೆಂದೂ ನಕಾರಾತ್ಮ ಭಾವತಳೆದಿಲ್ಲ. ನಾವು ನಮ್ಮಲ್ಲಿರುವ ದುರ್ಗುಣಗಳನ್ನು ಗುರುತಿಸಿಕೊಂಡು ಅವುಗಳನ್ನು ತ್ಯಜಿಸುವುದಕ್ಕೆ ಒಂದು ಸತ್ಪ್ರಯತ್ನ ಮಾಡುತ್ತೇವೆ. ಇದಕ್ಕಾಗಿಯೇ ಈ ಪಂಚೇಂದ್ರಿಯ ಗ್ರಾಹ್ಯಗಳು ಬದ್ಧವಾಗಿವೆ. ಕೆಟ್ಟದ್ದನ್ನು ಮಾಡುವುದನ್ನು ಬಿಟ್ಟನಂತರ, ಉತ್ತಮ ಕಾರ್ಯಮಾಡಲು ಉಪಕ್ರಮಿಸುತ್ತೇವೆ. ಒಂದು ಉದಾಹರಣೆಯನ್ನು ತೆಗೆದುಕೊಂಡರೆ, ಭಗವಾನ್ ಬುದ್ಧರ

ಬೋಧನೆ, ಬುದ್ಧರು ಹೇಳುವರು ನಾವು ಸುಳ್ಳು ಹೇಳುವುದರಿಂದ ದೂರ ವಿರಬೇಕು. ತದನಂತರ ನಾವು ಸತ್ಯವನ್ನೇ ನುಡಿಯಬೇಕು, ಜೊತೆಗೆ ಮೃದು ಹಾಗು ಮಿತಭಾಷಿಯಾಗಬೇಕು ಜೊತೆಗೆ ಅದರ ಪೂರಕವಾಗಿ ಮಾತನಾಡಬೇಕು ಅಲ್ಲದೆ, ಸಕಾಲದಲ್ಲಿ ಮಾತ್ರ ಮಾತನಾಡಬೇಕು, ಭಗವಾನ್ ಬುದ್ಧರು ಹೇಳಿರುವರು :

"ಅನೃತ ಭಾಷಣವನ್ನು ತೊರೆದವರು, ಸತ್ಯವನ್ನೇ ನುಡಿಯುವ ಭಾಷಣಕಾರನಾಗುವರು, ನಂಬಿಗಾರ್ಹರು ಭರವಸೆಯುಳ್ಳವರೂ, ಆಶ್ರಯಿಸ ಬಹುದಾದವರು, ಹಾಗು ಅವರು ಈ ಪ್ರಪಂಚವನ್ನು ಮೋಸಕೃತ್ಯಗಳಿಗೆ ಒಡ್ಡರು. ದುರುದ್ದೇಶ ಭಾವನೆಗಳ ಭಾಷಣಕಾರರು, ತಾವು ಕೇಳಿ ತಿಳಿದುದನ್ನು ಪುನಾರಾವರ್ತಿಸರು ಇಲ್ಲವೇ, ಮಾನವ-ಮಾನವರಲ್ಲಿ ಭೇದ ಭಾವನೆಗಳನ್ನು ಉಂಟು ಮಾಡಲು ತಾವು ಕೇಳಿದುದನ್ನು ತಮ್ಮ ಭಾಷಣ ದಲ್ಲಿ ವಿವರಿಸರು. ಇವರು, ವಿಭಿನ್ನಗೊಂಡವರನ್ನು ಸಂಧಾನದಿಂದ ಒಂದು ಗೂಡಿಸುವರು, ಮತ್ತು ಒಂದುಗೂಡಿರುವವರನ್ನು ಉತ್ತಮ ಸ್ನೇಹಿತರ ನ್ನಾಗಿಯೂ ಮಾಡುವರು. ಸೌಹಾರ್ದತೆ ಇವರ ಸಂತಸ ; ಐಕ್ಯಮತ್ಯವೇ ಅವರ ಅತ್ಯಾನಂದ, ಸೌಹಾರ್ದತೆಯೇ ಇವರ ಪ್ರೀತಿ, ಅವರ ಭಾಷಣ ಗಳಿಗೆ ಅವರ ಸೌಹಾರ್ದತೆಯೇ ಪ್ರಮುಖ ಪ್ರೇರೇಣೆ. ಕಠೋರ ಅಥವಾ ಉಗ್ರ ಭಾಷಣಗಳನ್ನು ತೊರೆದವರ ಭಾಷಣಗಳು. ನಿಂದಾಪವಾದಗಳಿಂದ ವಿಮುಕ್ತರು, ಇವರ ಭಾಷಣಗಳು ಕರ್ಣಾನಂದ, ಅರ್ಥಗರ್ಭಿತ ಮತ್ತು ಮೆಚ್ಚುಗೆ ಪಡೆಯುವಂತಹವು, ಹೃದಯದಲ್ಲಿ ಗಾಢವಾಗಿ ಮೂಡುವುವು, ಅನೇಕರಿಂದ ಮೆಚ್ಚಿಗೆ ಪಡೆಯುವಂತಹ. ಇವರು ತಮ್ಮ ಸೋಮಾರಿತನದ ಹರಟೆಯನ್ನು ತ್ಯಜಿಸಿದವರಾದರೆ, ಅವರು, ಸಕಾಲದಲ್ಲಿ ಮಾತನಾಡುವರು, ಸರಿಯಾಗಿರುವುದನ್ನು ಮಾತ್ರ, ಕೇಳಿದಷ್ಟಕ್ಕೆ ಮಾತ್ರವೇ, ಧರ್ಮದ ಬಗ್ಗೆ ಮತ್ತು ಶಿಸ್ತು ಸಂಯಮಗಳ ಬಗ್ಗೆಯೂ ಸಹ ಅಷ್ಟೆ. ಇವರು ಆಡುವ ಶಬ್ದಗಳನ್ನು ಸಂಗ್ರಹಿಸಲು ಯೋಗ್ಯವಾದುವು ಗಳು, ಸಮಯೋಚಿತಗಳು, ಸಮಂಜಸವಾದವುಗಳು, ಉತ್ತಮ ನಿರೂಪಣೆ ಮತ್ತು ಅಗತ್ಯಕ್ಕೆ ತಕ್ಕಂತಹವುಗಳಾಗಿರುವುವು."

**MJ 179**

ಪ್ರಶ್ನೆ :— ದೇವರು ಅಥವಾ ದೇವರುಗಳು ನೀಡುವ ಶಕ್ತಿಯಲ್ಲಿ ವಿಶ್ವಾಸ ವಿಟ್ಟವರು ಮಾತ್ರವೇ ಒಳ್ಳೆಯವರಾಗುವರೆಂದು ಹಲವರು ಹೇಳುವರು. ಇದರ ವಿವರಣೆಯೇನು ?

—ಇದು ಶುದ್ಧವಾದ ಸುಳ್ಳು. ಅನೇಕ ಮಿಲಿಯನ್ ಮತ್ತು ಬಿಲಿಯನ್‌ಗಳಷ್ಟು ವಿಮುಕ್ತ ಆಲೋಚನಾಪರರು ಮತ್ತು ಬೌದ್ಧೀಯರು ತಮ್ಮ ಅತ್ಯುತ್ತಮ ನಡವಳಿಕೆಗಳಿಂದ ಉತ್ತಮರು ಮಾತು ಸಭ್ಯರಾಗಿರುವರು ಇದು ಎಲ್ಲೋ ಒಂದೊಂದು ಸಂದರ್ಭದಲ್ಲಿಯಲ್ಲ, ಆದರೆ ಅವ್ಯಾಹತವಾಗಿ, ಇಂತಹವರು, ಯಾವುದೋ ಒಂದು ಅತಿ ಅಸಮಾನ್ಯ ಜೀವಿಯ ಮೇಲೆ ಭರವಸೆಯನ್ನಿಟ್ಟಿರುವವರಿಗಿಂತಲೂ ಉತ್ತಮ ಸ್ಥಾನದಲ್ಲಿರುವರು. ಆದುದರಿಂದ, ನೀವೂ ಒಂದು ಮನಃಪೂರಕ ಪ್ರಯತ್ನ ಮಾಡಿದ್ದಾದರೆ ನೀವೂ ಸಹ ಸರ್ವೋತ್ತಮ ಗುಣಗಳನ್ನು ಹಾಗೂ ಪರಿಶುದ್ಧತೆಯನ್ನು ಪಡೆಯಬಹುದು ನೀವು ಅಂತಹ ಪರಿಶುದ್ಧತೆಯನ್ನು ಪಡೆದಿದ್ದರೆ, ನೀವು ಉತ್ತಮರಾಗುವುದರಲ್ಲಿ ಸಂಶಯವೇ ಇಲ್ಲ.

—0೧—

## 5. ಪುನರ್ಜನ್ಮ

ಪ್ರಶ್ನೆ :— ಮಾನವನು ಎಲ್ಲಿಂದ ಬಂದನು ಮತ್ತು ಅವನೆಲ್ಲಿಗೆ ಹೋಗುವನು ?

—ಈ ಪ್ರಶ್ನೆಗೆ ಮೂರು ಸಾಧುವಾದ ಉತ್ತರಗಳಿವೆ. ಯಾರು ದೇವರು ಅಥವಾ ದೇವರುಗಳಲ್ಲಿ ನಂಬಿಕೆ ಇಟ್ಟಿರುವರೋ ಅವರು, ಸಾಮಾನ್ಯವಾಗಿ, ಯಾವೊಬ್ಬ ವ್ಯಕ್ತಿಯು ಸೃಷ್ಟಿಯಾಗುವ ಮೊದಲು (ಜನಿಸುವ), ಆ ವ್ಯಕ್ತಿಯ ಅಸ್ತಿತ್ವವೇ ಇರಲಿಲ್ಲವೆಂದು ನಂಬಿಕೆ ಹೊತ್ತು, ಆ ವ್ಯಕ್ತಿಯು ದೇವರ ದಯೆಯಿಂದ ಅಸ್ತಿತ್ವಕ್ಕೆ ಬಂದಿರುವನೆಂದು ನಂಬಿರುವರು. ಇಂತಹ ವ್ಯಕ್ತಿಯು ತನ್ನ ಜೀವನವನ್ನು ನಡೆಸುವನು, ಮತ್ತು ಅವನೇನನ್ನು ನಂಬಿರುವನೋ ಅಥವಾ ಈ ಜೀವಿತಕಾಲದಲ್ಲಿ ಏನೇನನ್ನು ಮಾಡಿರುವನೋ, ಅದರಂತೆ ಅವನು ಶಾಶ್ವತ ಸ್ವರ್ಗ ಅಥವಾ ಶಾಶ್ವತ ನರಕಕ್ಕೆ ಹೋಗುವನು ಎಂಬುವರು. ಮತ್ತೆ ಕೆಲವು ಮಾನವರು, ಮತ್ತು ವಿಜ್ಞಾನಿಗಳು, ಯಾವ ಒಬ್ಬ ಜೀವಿಯೇ ಆಗಲಿ, ಸ್ವಾಭಾವಿಕ ಕಾರಣಗಳಿಂದ ಗರ್ಭಧಾರಣೆಯಾಗಿದ್ದುದರಿಂದ ಜೀವವನ್ನು ಪಡೆಯುತ್ತಾನೆ ಅವನು ಜೀವಿಸುವನು. ಅಂತ್ಯದಲ್ಲಿ ಮರಣಿಸುವನು, ಆ ಜೀವವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಬೌದ್ಧ ಧರ್ಮಗಳು ಈ ಎರಡೂ ವಿವರಣೆಗಳನ್ನೂ ಒಪ್ಪುವುದಿಲ್ಲ. ಮೊದಲನೆಯ ವಿವರಣೆಯು ಅನೇಕ ತತ್ವ ಸಿದ್ಧಾಂತಗಳ ಸಮಸ್ಯೆಯನ್ನೊಡ್ಡುವುದು. ಒಳ್ಳೆಯ ದೇವರು,

ನಿಜವಾಗಿಯೂ ನಮ್ಮೆಲ್ಲರನ್ನೂ ಸೃಷ್ಟಿಸುವವನಾಗಿದ್ದರೆ, ಅನೇಕ ಸಹಸ್ರ ಸಹಸ್ರ ಮಾನವರನ್ನು ವರ್ಣಿಸಲಸದಳವಲ್ಲದ ಅಂಗವಿಕಲರನ್ನಾಗಿ ಏಕೆ ಸೃಷ್ಟಿಮಾಡಿದ್ದಾನೆಂದು ವಿವರಿಸುವುದು ಅತಿ ಕ್ಲಿಷ್ಟವಾದುದು. ಅಥವಾ ಅನೇಕ ಗರ್ಭಧಾರಣೆಗಳು ಪೂರ್ವರಕ್ತ ಸ್ರಾವದಿಂದ, ಜನನದ ಮುನ್ನವೇ ಅಥವಾ ಜನನದ ಕೂಡಲೇ ಸಾಯುವುವು. ಈ ಆಸ್ತಿಕವಾದದಿಂದ ಮತ್ತೊಂದು, ಪೂರ್ಣವಿವರಣೆ ನೀಡದಿರುವ ಸಮಸ್ಯೆಯು ಉದ್ಭವಿಸುವುದು, ಅದೆಂದರೆ, ಒಬ್ಬ ವೈಯಕ್ತಿಕ ವ್ಯಕ್ತಿಯು ತನ್ನ ಅರವತ್ತು ಅಥವಾ ಎಪ್ಪತ್ತು ವರ್ಷಗಳ ಜೀವನ ಕಾಲದಲ್ಲಿ ಮಾಡಿರಬಹುದಾದ ಪಾಪಗಳಿಗೆ, ಬೇರೊಂದು ನರಕದಲ್ಲಿ ಅನವರತದ ವರ್ಣಿಸಲಸದಳವಲ್ಲದ ಸಂಕಟಗಳನ್ನನುಭವಿಸಬೇಕಾಗಿರುವುದರ ವಿವರಣೆ. ಅಂತೆಯೇ ಇದೇ 60 ಅಥವಾ 70 ವರ್ಷಗಳ ಉತ್ತಮ ಜೀವನ ನಡೆಸಿದ್ದುದಕ್ಕಾಗಿ, ಸ್ವರ್ಗದಲ್ಲಿ ಅನವರತದ ಆನಂದವನ್ನನುಭವಿಸುವ ಅವಕಾಶ ಪಡೆಯುವುದರ ವಿವರಣೆಯು ಅಸಮಂಜಸ. ಎರಡನೇ ಬಗೆಯ ವಿವರಣೆಯು ಮೊದಲನೆಯದಿಕ್ಕಿಂತ ಉತ್ತಮವಾಗಿರುವುದು ಮತ್ತು ಅದು ಹೆಚ್ಚಿನ ವೈಜ್ಞಾನಿಕ ವಿವರಣೆಗಳನ್ನೂ ಹೊಂದಿದೆ ಹಾಗೂ ಅದರ ಸೂಕ್ತ ಸಹಾಯವನ್ನು ಪಡೆದಿದೆ. ಆದರೆ ಈ ಬಗ್ಗೆ ಇನ್ನೂ ಉತ್ತರಿಸಲಾರದ ಅನೇಕ ಸಮಸ್ಯೆಗಳು ಹಾಗೆಯೇ ಇವೆ. ಕೇವಲ ಎರಡು ಜೀವಕೋಶಗಳು ಒಂದೆಡೆ ಬೆರೆತು, ಅತ್ಯಾಶ್ಚರ್ಯವಾಗಿ, ಅಪಾರ ಸಂಯುಕ್ತ ಸಂಯೋಜನೆಗಳ ಸಂಕೀರ್ಣವಾಗಿ ಅದರಲ್ಲೂ ಪ್ರಾಜ್ಞತೆಯನ್ನು ಬಲಪಡಿಸಿ ವೃದ್ಧಿಸಿಕೊಳ್ಳುವುದು, ವೀರ್ಯಾಣುಗಳು ಮತ್ತು ಮೊಟ್ಟೆಗಳಿಗೆ ಹೇಗೆ ಸಾಧ್ಯವಾಗಿದೆ ಎಂಬುದನ್ನು ವಿವರಿಸಲಾಗಿಲ್ಲ. ಈ ವರ್ತಮಾನದಲ್ಲಿ, ಉಪಮಾನಸಿಕ ಶಾಸ್ತ್ರವು ಒಂದು ಪರಿಗಣಿತ ವಿಜ್ಞಾನದ ಭಾಗವಾಗಿದೆ. ದೂರವಾರ್ತಾ ನಿಯಂತ್ರಣಗಳಂತಹ ಚಮತ್ಕಾರಗಳು ವಾಸ್ತುವಾಂಶತೆಯ ಮಾದರಿಗಳ ಪ್ರಭಾವವನ್ನೇ ಹೆಚ್ಚು ಹೊಂದಿರುವ ನಮ್ಮ ಮನಸ್ಸಿಗೆ ಒಗ್ಗಿ ಒಲಿಸಿಕೊಳ್ಳುವುದೂ ಸಹಕಷ್ಟ.

ಬೌದ್ಧ ಧರ್ಮಗಳು ಮಾನವನು ಎಲ್ಲಿಂದ ಬರುವನು ಮತ್ತು ಎಲ್ಲಿಗೆ ಹೋಗುವನು, ಇದರ ಬಗ್ಗೆ ಅತ್ಯುತ್ತಮ ಹಾಗು ತೃಪ್ತಿಕರವಾದ ವಿವರಣೆಯನ್ನು ಕೊಡುತ್ತದೆ. ನಾವು ಮರಣ ಹೊಂದಿದ ನಂತರ, ಈ ಮನಸ್ಸು ಅದರ ಎಲ್ಲಾ ಪ್ರವೃತ್ತಿಗಳಿಂದಲೂ, ಮೆಚ್ಚಿಗೆಗಳಿಂದಲೂ, ದಕ್ಷತೆಯಿಂದಲೂ ಮತ್ತು ಗುಣ ನಡವಳಿಕೆಗಳಿಂದಲೂ, ಆ ಜನ್ಮದಲ್ಲಿ ಬಲವರ್ಧಿಸಿ ಮತ್ತು ನಿಗದಿತಕ್ಕೊಳಗಾಗಿದ್ದವೋ, ಇವೆಲ್ಲವೂ ತಾನಾಗಿಯೇ ಗರ್ಭ ಧರಿಸುವ ಆ ಮೊಟ್ಟೆಯಲ್ಲಿ ಪುನರ್ ಪ್ರತಿಷ್ಠಿತವಾಗುವುವು. ಹೀಗೆ,

ಅಂತಹ ವ್ಯಕ್ತಿಯು ಬೆಳೆಯುವನು, ಅವನು ಪುನರ್ಜನ್ಮಿಸುವನು. ಹಾಗೆಯೇ ಅವನ ವ್ಯಕ್ತಿತ್ವವು ಮಾನಸಿಕ ಗುಣ ವಿಶೇಷಣಗಳಿಂದಲೂ (ಹಿಂದಿನದರಿಂದ ಇಲ್ಲಿಗೆ ತೆಗೆದುಕೊಂಡು ಬಂದಿರುವ) ಮತ್ತು ಈ ಹೊಸ ಸನ್ನಿವೇಶಗಳಿಂದಲೂ ಬೆಳೆದು ವೃದ್ಧಿಸುವುದು. ಇಂತಹ ವೈಯಕ್ತಿಕ ವ್ಯಕ್ತಿತ್ವವನ್ನು ಪ್ರಾಜ್ಞಾವಂತಿಕೆಯ ಪ್ರಯತ್ನಗಳಿಂದ ಮತ್ತು ನಿಗದಿತ ವನ್ನುಂಟು ಮಾಡುವ ಸಂದರ್ಭಗಳಿಂದ ಬದಲಿಸಿ, ಮರು ಅಳವಡಿಸಬಹುದು ಹೊಸ ಸಂದರ್ಭಗಳಿಗೆ ಅಂದರೆ, ವಿದ್ಯಾಭ್ಯಾಸ ನೀಡುವಿಕೆ, ಮಾತಾಪಿತೃ ಗಳ ವಾತ್ಸಲ್ಯ ಮತ್ತು ಸಾಮಾಜಿಕ ಪ್ರಭಾವ ಮತ್ತು ಮತ್ತೊಮ್ಮೆ ಅದರ ಸಾವಿನ ಕಾಲದಲ್ಲಿ, ವೃದ್ಧಿಸಿ ಹೊಸ ಗರ್ಭ ತಳೆಯುವ ಅಂಡಾಣುಗಳಲ್ಲಿ ಬಲಿಷ್ಟವಾಗುವುವು. ಈ ಬಗೆಯ ಸಾಯುವ ಮತ್ತು ಮರು ಜನಿಸುವ ವಿಧಾನಗಳು ಅವ್ಯಾಹತವಾಗಿ ನಡೆಯುವುವು ಈ ಸೂಕ್ಷ್ಮ ಬದಲಾವಣೆಗೆ ಬೇಕಾದ ನಿಯಮಗಳು ಕ್ರಿಯಾತ್ಮಿಸುವವರಿಗೆ ಈ ವಿಧಾನದಿಂದ, ಹಂಬಲ ಮತ್ತು ಅಜ್ಞಾನವು ನಿಂತುಹೋಗುವುವು. ಈ ಸಂದರ್ಭಗಳು ಒದಗಿದಾಗ, ಆ ಮನಸ್ಸು ಪುನರ್ಜನ್ಮಿಸುವುದರ ಬದಲು, ಅದು ನಿರ್ವಾಣದ ಹಂತವನ್ನು ಪಡೆಯುವುದು. ಇದೇ ಬೌದ್ಧ ಧರ್ಮಗಳ ಅಂತ್ಯಗುರಿ ಹಾಗೂ ಅದು ಜೀವನ ಉದ್ದೇಶವೂ ಸಹ.

**ಪ್ರಶ್ನೆ :—** ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಮನಸ್ಸು ಹೇಗೆ ಹೋಗಬಲ್ಲದು ?

—ಇದನ್ನು ಕೂಲಂಕುಷವಾಗಿ ಆಲೋಚಿಸಿದರೆ, ಅವು ರೇಡಿಯೋ ತರಂಗಗಳ ಭಾವನೆ ಮೂಡಿಸುತ್ತವೆ. ಈ ರೇಡಿಯೋತರಂಗಗಳು, ಯಾವ ಶಬ್ದಗಳು ಮತ್ತು ಸಂಗೀತದಿಂದ ಕೂಡಿರುವುದಿಲ್ಲ; ಆದರೆ ವಿವಿಧ ಬಗೆಯ ಆಂದೋಳನಗಳಿಂದ ಕೂಡಿದ್ದು, ಇವು ಮಾತ್ರ ಹೊರಹೊಮ್ಮಿ ಸಾಗುತ್ತಿರುವುವು, ಅವು ಬಾಹ್ಯಾಕಾಶದಲ್ಲಿ ಪಯಣಿಸುವುವು, ಇವುಗಳನ್ನು ಆರಿಸಿ, ಸ್ವೀಕರಿಸುವ ಯಂತ್ರಗಳು ಕಾರ್ಯನಿರ್ವಹಿಸಿ, ಪುನಃ ಅವುಗಳನ್ನು ಶಬ್ದಗಳು ಮತ್ತು ಸಂಗೀತಗಳಾಗಿ ಪರಿವರ್ತಿಸಿ, ಶ್ರವಣಕ್ಕೆ ಅನುಕೂಲಿಸುವುವು. ಇದೇ ಬಗೆಯ ಕ್ರಿಯೆಗಳನ್ನು ಮನಸ್ಸು ನಡೆಸುತ್ತಿದೆ. ಮರಣಿಸಿದನಂತರ, ಮಾನಸಿಕ ಶಕ್ತಿಯು ಬಾಹ್ಯಾಕಾಶದಲ್ಲಿ ಪ್ರವಹಿಸುವುದು, ಈ ಎಲ್ಲಾ ಶಕ್ತಿಯನ್ನು ಗರ್ಭಧಾರಣೆ ಧರಿಸುವ ಅಂಡಾಣುಗಳು ಆಕರ್ಷಿಸಿ ಸಂಗ್ರಹಿಸುವುವು, ಈ ಭ್ರೂಣವು ವೃದ್ಧಿಯಾಗುತ್ತಿದ್ದಂತೆ, ಈ ಶಕ್ತಿಯು ಅದರ ಮೆದುಳಿನಲ್ಲಿ ಕೇಂದ್ರೀಕೃತವಾಗು

ತ್ತದೆ, ಆ ನಂತರದ ಸಕಾಲದಲ್ಲಿ ಅದು ಹೊಸ ವ್ಯಕ್ತಿತ್ವ ತಳೆದು ಪ್ರಬುದ್ಧಿಸಿಕೊಂಡು ಕಾರ್ಯೋನ್ಮುಖವಾಗುವುದು.

**ಪ್ರಶ್ನೆ :** ಏಕೈಕ ವ್ಯಕ್ತಿ ಪದೆ ಪದೇ ಮಾನವ ಜೀವಿಯಾಗಿಯೇ ಮರು ಜನ್ಮ ತಳೆಯ ಬೇಕೇ ?

-- ಇಲ್ಲ, ಈ ದಿಶೆಯಲ್ಲಿ ಅನೇಕಾನೇಕ ಸಾಮ್ರಾಜ್ಯಗಳು ಈ ಮರು ಜನ್ಮಕ್ಕಾಗಿಯೇ ನಿಗದಿತವಾಗಿವೆ. ಕೆಲವರು, ಸ್ವರ್ಗದಲ್ಲೂ ಮತ್ತೆ ಕೆಲವರು ನರಕದಲ್ಲೂ, ಇನ್ನೂ ಕೆಲವರು ಹಸಿದ ಭೂತಗಳಾಗಿಯೂ ಮತ್ತು ಇನ್ನು ಅನೇಕ ಬಗೆಯಾಗಿ ಮರುಜನ್ಮಿಸಬಹುದು. ಇಲ್ಲಿ ಸ್ವರ್ಗ ವೆಂಬುದು ಒಂದು ಸ್ಥಳವಲ್ಲ, ಅದೊಂದು ನಿವಾಸಿಸುವ ಒಂದು ಹಂತ, ಇಲ್ಲಿರುವವರು ಅತಿ ಸೂಕ್ಷ್ಮ ಹಾಗೂ ಮಾನಸಿಕ ಶರೀರ ಹೊಂದಿರು ವರು, ಅವರ ಮನಸ್ಸು ಪ್ರಮುಖವಾಗಿ, ಸಂತೋಷವನ್ನೇ ಅನುಭವಿಸು ತ್ತಿರುತ್ತದೆ. ಹಲವು ಮತದವರು, ಇಂತಹ ಸ್ವರ್ಗನಿವಾಸಗಳನ್ನು ಶಾಶ್ವತವೆಂದು ಭ್ರಮಿಸಿ, ಅಲ್ಲಿಯೇ ಮರುಜನ್ಮಿಸಬೇಕೆಂಬ ಹೆಬ್ಬಯಕೆ ಯನ್ನು ತಳೆದು ಆಜೀವ ಪರ್ಯಂತ ಕಷ್ಟ ಕಾರ್ಪಣ್ಯದ, ಕಠಿಣ ಜೀವನ ಕ್ರಮವನ್ನೇ ಅಳವಡಿಸಿಕೊಳ್ಳುವರು. ಆದರೆ ಅದು ಹಾಗಿಲ್ಲ. ಎಲ್ಲಾ ನಿಗದಿತ ನಿಯಮಗಳಂತೆಯೇ ಅಂತಹ ಸ್ಥಿತಿಗತಿಗಳಿಂದ, ಸ್ವರ್ಗವೂ ಸಹ ನಶ್ವರ ಮತ್ತು ಅಲ್ಲಿನ ಜೀವನಾವಧಿಯು ಮುಗಿಯಿತೆಂದರೆ, ಅಂತಹ ವರು, ಅತಿ ಹೆಚ್ಚೆಂದರೆ, ಮಾನವನಾಗಿ ಮರುಜನ್ಮಿಸಬಹುದು. ಅಂತೆಯೇ, ನರಕವೆಂಬುದೂ ಸಹ ಒಂದು ಸ್ಥಳವಲ್ಲ. ಅಲ್ಲಿ ಜೀವಿಸುವವರು. ಹಾಗು ಅವರ ಶರೀರವು ಮಾನಸಿಕವಾಗಿರುವುದು, ಅವರ ಮನಸ್ಸು ಪ್ರಮುಖ ವಾಗಿ ಕುತೂಹಲ ಮತ್ತು ದುಃಖಭಾವನೆಗಳನ್ನೇ ಅನುಭವಿಸುತ್ತಿರುವರು. ಹಸಿದ ಭೂತದ ಜೀವನವಾದರೆ, ಮತ್ತೆ ಇದೂ ಸಹ ಮಾನಸಿಕ ಶರೀರ ದಿಂದ ಜೀವಿಸುವ ಒಂದು ಹಂತ (ಸ್ಥಿತಿ). ಇಂತಹವರ ಮನಸ್ಸು ಸತತ ಅನಾರೋಗ್ಯ ಮತ್ತು ಅಹಿತಕರವಾಗಿದ್ದು, ಬಗೆಬಗೆಯ ಅಪೇಕ್ಷೆ ತಳೆದ ಮತ್ತು ಆ ಸಂತೃಪ್ತಿಯ ಭಾವಾನುಭವಗಳನ್ನೇ ಪಡೆಯುತ್ತದೆ.

ಆದುದರಿಂದ ಸ್ವರ್ಗವಾಸಿಗಳು ಪ್ರಮುಖವಾಗಿ ಸಂತೋಷ ಭರಿತರು. ನರಕವಾಸಿಗಳು ಮತ್ತು ಭೂತಗಳು ಪ್ರಮುಖವಾಗಿ ಸಂಕಟಗಳನ್ನನು ಭವಿಸುವರು ಮತ್ತು ಮಾನವ ಜೀವಿಗಳು ಸುಖ ದುಃಖಗಳ ಮಿಶ್ರಣ ಜೀವನ ನಡೆಸುವರು. ಹೀಗೆ ಮಾನವ ಸಾಮ್ರಾಜ್ಯಗಳಿಗೂ ಮತ್ತು ಇತರ ಸಾಮ್ರಾಜ್ಯಗಳಿಗೂ ಅತಿಮುಖ್ಯವಾದ ವ್ಯತ್ಯಾಸವೆಂದರೆ, ಶರೀರಿಕ ಮಾದರಿಗಳಲ್ಲಿನದು, ಮತ್ತು ಅನುಭವಿಸುವ ಸನ್ನಿವೇಶಗಳಲ್ಲಿ ಭೇದವಿರು ವುದೇ ಆಗಿದೆ.

ಪ್ರಶ್ನೆ:-- ನಾವು ಎಲ್ಲಿ ಮರುಜನ್ಮಿಸುವೆನೆಂಬುದನ್ನು ಯಾವುದು ನಿರ್ಧರಿಸುವುದು?

— ಇದೊಂದು ಅತಿ ಮುಖ್ಯವಾದ ಅಂಶ, ಆದರೆ, ನಾವೆಲ್ಲಿ ಮರುಜನ್ಮಿಸುವೆವು ಮತ್ತು ಯಾವ ಬಗೆಯ ಜೀವನ ನಡೆಸಬೇಕೆಂಬುದನ್ನು ಇದೊಂದೆ ನಿರ್ಧರಿಸಲಾರದು, ಅದು ಕರ್ಮದ ಫಲವಾಗಿರುತ್ತದೆ. ಕರ್ಮ ಎಂಬ ಪದದ ಅರ್ಥ, ಕಾರ್ಯನಿರ್ವಹಣೆ. ಎಂತಲೂ, ಇದು ನಮ್ಮ ಉದ್ದೇಶ ಪೂರಿತವಾದ ಮಾನಸಿಕ ಕಾರ್ಯಕ್ರಮ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಇಂದು ನಾವು ಏನಾಗಿದ್ದೇವೆ ಎಂಬುದನ್ನು, ಹಿಂದೆ ನಾವು ಹೇಗೆ ಆಲೋಚಿಸಿ ಕಾರ್ಯನಿರ್ವಹಿಸಿರುವೆವೋ ಅದರಂತೆಯೇ ಎಂಬುದರ ಆಧಾರಿತ ತೀರ್ಮಾನವೇ ಆಗಿರುವುದು. ಅಂತೆಯೇ ಈ ಜನ್ಮದಲ್ಲಿ ನಾವು ಹೇಗೆ ಯೋಚಿಸಿ, ಕಾರ್ಯೋನ್ಮುಖರಾಗುತ್ತೇವೆಯೋ ಅದರಂತೆಯೇ ನಮ್ಮ ಭವಿಷ್ಯದ ಚಟುವಟಿಕೆಗಳು.

ಸಭ್ಯತೆಯ, ಪ್ರೀತ್ಯಾದಾರಗಳ ನಡುವಳಿಕೆಯ ಮಾನವರು, ಸ್ವರ್ಗದಲ್ಲಿ ಮರುಜನ್ಮಿಸುವ ಅಥವಾ ಮಾನವ ಜೀವಿಗಳಾಗಿ, ಸಂತೋಷಾನುಭವಗಳನ್ನೇ ಹೆಚ್ಚಾಗಿ ಪಡೆಯುವರಾಗಿ ಜನಿಸುವರು. ಆಕಾಂಕ್ಷೆಗಳ, ಕಳವಳಗಳ ಅಥವಾ ಅಸಾಧ್ಯ ಕ್ರೂರತ್ವ ಹೊಂದಿರುವ ಜನಗಳು ನರಕ ಸಾಮ್ರಾಜ್ಯದಲ್ಲಿ ಮರುಜನ್ಮಿಸುವ ಅಥವಾ ಅಪಾರ ಕ್ಲೇಶ ಸಂಕಟಗಳನ್ನನುಭವಿಸುವ ಮಾನವರಾಗಿ ಜನಿಸುವರು. ಹಠಬಲವನ್ನೇ ಬೆನ್ನಟ್ಟಿಕೊಂಡಿರುವ, ಕ್ರೂರ ಅಪೇಕ್ಷೆಗಳನ್ನು ಹೊಂದಿರುವ ಮತ್ತು ಮೇರೆವರಿಯುದ ದುರಾಶೆಗಳು ಮತ್ತು ಅವಶ್ಯಕತೆಗಳನ್ನು ಹೊಂದಿ ಯಾವತ್ತು ಸಂತೃಪ್ತಿ ಪಡೆಯದವನು, ಹಸಿದ ಭೂತನಾಗಿ ಅಥವಾ ಜೀವನದಲ್ಲಿ ಜಿಗುಪ್ಸೆ ಕಳೆದು ಅಪಾರ ಅವಶ್ಯಕತೆಗಳನ್ನು ನಿರೀಕ್ಷಿಸುವ ಮಾನವರಾಗಿ ಜನಿಸುವರು. ಮಾನಸಿಕ ನಡವಳಿಕೆಗಾಗಿ ಈ ಜನ್ಮದಲ್ಲಿ ವೃದ್ಧಿಸಿಕೊಂಡ ಅನೇಕ ಭಾವನೆಗಳು ಮುಂದಿನ ಜನ್ಮದಲ್ಲೂ ಮುಂದುವರಿಯುವುವು. ಆದರೆ ಅನೇಕ ಮಾನವರು, ಮರುಜನ್ಮದಲ್ಲಿಯೂ ಮಾನವರಾಗಿಯೇ ಜನಿಸುವರು.

ಪ್ರಶ್ನೆ:— ಹಾಗಾದರೆ, ನಾವು ನಮ್ಮ ಕರ್ಮಗಳಿಂದಲೇ ನಿರ್ಧರಿತರಾಗಿಲ್ಲವಲ್ಲವೇ. ನಾವು ಅದನ್ನು ಬದಲಾಯಿಸಬಹುದಲ್ಲವೆ?

— ಹೌದು, ನಾವು ನಿಜವಾಗಿಯೂ ಬದಲಿಸಬಹುದು. ಆದುದರಿಂದ ಆರ್ಯ ಅಷ್ಟಾಂಗ ಸೂತ್ರದಲ್ಲಿನ ಒಂದು ಹಂತವು ಪರಿಪೂರ್ಣತೆ ಪಡೆದ ಪ್ರಯತ್ನವೆಂಬುದಾಗಿದೆ. ಅದು ಪ್ರಮುಖವಾಗಿ ನಮ್ಮ ಪ್ರಾಮಾಣ್ಯ.

ತೆಯ ಪ್ರಯತ್ನವನ್ನವಲಂಬಿಸಿದೆ, ಇದಕ್ಕಾಗಿ ನಾವು ವ್ಯಯಿಸುವ ಶಕ್ತಿಯ ಪ್ರಮಾಣ ಮತ್ತು ಆ ನಡವಳಿಕೆಯು ಅದೆಷ್ಟು ಉತ್ತಮ ಪ್ರಮಾಣದ್ದೆಂಬುವುದನ್ನೂ ಅವಲಂಬಿಸಿದೆ. ಹಲ ಕೆಲವರು. ತಮ್ಮ ಹಿಂದಿನ ನಡವಳಿಕೆಗಳ ಪ್ರಭಾವಾಧಾರಿತಗಳಿಂದಲೇ ತಮ್ಮ ಹಿಂದಿನ ನಡವಳಿಕೆಗಳ ಪ್ರಭಾವಾಧಾರಿತಗಳಿಂದ ತಮ್ಮ ಜೀವನದ ಕಾಲವನ್ನೆಲ್ಲಾ ವ್ಯಯಿಸುವರು. ಇವುಗಳ ಬದಲಾವಣೆಗೆ ಯಾವ ಪ್ರಯತ್ನವನ್ನೂ ಮಾಡದೆ, ಈ ದುರಾದೃಷ್ಟ ಹಾಗೂ ಅಸಂತೃಪ್ತಿಯ ಪ್ರತಿಫಲಗಳನ್ನನುಭವಿಸುವ ಬಲಿಪಶುಗಳಾಗುವರು. ಇಂತಹ ಜನರು, ತಮ್ಮ ವರ್ತಮಾನದ ನಡವಳಿಕೆಗಳ ನಕಾರದ ನಡವಳಿಕೆಗಳನ್ನು ಬದಲಿಸದೆ ತೊಂದರೆಗಳನ್ನೇ ಮುಂದುವರಿಸಿಕೊಂಡು ಹೋಗುವರು. ಬೌದ್ಧೀಯರು, ಇಂತಹ ಸನ್ನಿವೇಶಗಳನ್ನು ಅರಿತುಕೊಂಡವರಾಗಿ, ಇದರ ಪ್ರತಿಯೊಂದರಲ್ಲೂ ಪ್ರಯೋಗವನ್ನು ನಡೆಸುವರು. ಹಾಗಾಗಿ, ಇಂತಹ ಅಸಂತೃಪ್ತಿ ಫಲವೀಯುವ ಮಾನಸಿಕ ಸರ್ವನಡವಳಿಕೆಗಳನ್ನೂ ಕಡಿದು ಹಾಕಲು ಹವಣಿಸುವರು ; ಅಲ್ಲದೆ, ಇವಕ್ಕೆ ಬದಲಾಗಿ ಹಿತಕರವೂ ಮತ್ತು ಸಂತಸ ತರುವ ಮಾನಸಿಕ ನಡವಳಿಕೆಗಳನ್ನು ಅಭಿವೃದ್ಧಿಗೊಳಿಸುವರು. ಇದರಲ್ಲಿ ಧ್ಯಾನದೆಡೆಗೆ ಕರೆದೊಯ್ಯುವುದೆಂದು ಸರ್ವೋತ್ತಮ ಮಾರ್ಗ. ಇದು ಮನಸ್ಸಿನ ಇಂತಹ ನಡವಳಿಕೆಗಳನ್ನು ಪೂರ್ಣವಾಗಿ ಮಾರ್ಪಾಟು ಮಾಡುವುದು. ಅಂದರೆ, ನಿರ್ದಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಮಾತನಾಡುವುದು, ಅಥವಾ ಮಾತನಾಡದೇ ಇರುವುದು, ಉತ್ತಮತನದಲ್ಲಿ ಮಾತ್ರ ಕಾರ್ಯ ನಡೆಸುವುದು, ಇಲ್ಲವೇ ಹಲವು ಬಗೆಯ ಕಾರ್ಯಗಳನ್ನು ಯಾವ ಸಂದರ್ಭದಲ್ಲೂ ಮಾಡದಿರುವುದು, ಹೀಗೆ ಇಡೀ ಬೌದ್ಧೀಯ ಸಮೂಹವೇ ಮನಸ್ಸನ್ನು ಪರಿಶುದ್ಧಗೊಳಿಸುವ ತರಬೇತಿಯತ್ತ ಕೇಂದ್ರೀಕೃತವಾಗಿದೆ. ಉದಾಹರಣೆಗೆ, ಸಹನೆ ಪಾಲನೆ, ದಯಾಳತ್ವದಿಂದಿರುವುದು ನಿಮ್ಮ ಹಿಂದಿನ ಜೀವನದಲ್ಲಿ ಒಂದು ಪಾಲಾಗಿದ್ದರೆ, ಅದು ಈ ಜನ್ಮದಲ್ಲಿಯೂ ಮರುಕಳಿಸಿರುತ್ತದೆ. ಈ ಗುಣಗಳನ್ನು ಈ ಜನ್ಮದಲ್ಲಿ ಮತ್ತೂ ಬಲಪಡಿಸಿ, ವೃದ್ಧಿಸಿಕೊಂಡದ್ದಾದರೆ, ಅವು ಭವಿಷ್ಯದ ಜೀವನದಲ್ಲಿ ಮತ್ತೂ ಪ್ರಬಲವಾಗಿಯೂ ಮತ್ತು ಹೆಚ್ಚು ಸ್ಪಷ್ಟವಾಗಿಯೂ ಬೆಳೆಯುವುವು. ಇದು ಸರಳವೂ ಮತ್ತು ಅನುಸರಿಸಬಹುದಾದ ಅಂಶವಾಗಿದ್ದು, ಹೀಗೆ ದೀರ್ಘಾವಧಿಯಲ್ಲಿ ಅಭ್ಯಸಿಸಿದ ನಡವಳಿಕೆಗಳನ್ನು ಸುಲಭವಾಗಿ ಮುರಿಯಲಾಗುವುದಿಲ್ಲ.

ಈಗ, ನೀವು ಸಹನ ಶೀಲರೂ ಮತ್ತು ದಯಾಳುವೂ ಆಗಿರುವಿರಾದರೆ, ನಿಮ್ಮನ್ನು ಯಾರೂ ಸಹ ಯಾವ ಕ್ರೂರತನದಿಂದ ನಿಮ್ಮಲ್ಲಿ ವರ್ತಿಸುವ

ಅವಕಾಶವೇ ಇರುವುದಿಲ್ಲ ; ಜೊತೆಗೆ ನಿಮ್ಮಲ್ಲಿ ಯಾವ ಮಾತ್ಸರದ ಭಾವವೂ ಇರದು, ಆಗ ಜನರು, ನಿಮ್ಮ ಬಳಿ ಬರುವರು, ಆದರಿಸುವರು. ಆ ಮೂಲಕ ನಿಮ್ಮ ನಡವಳಿಕೆಗಳು ಸಂತೋಷದಾಯಕ ಅನುಭವ ನೀಡುವುವು

ಈಗ ನಾವು ಮತ್ತೊಂದು ಉದಾಹರಣೆಯನ್ನೆತ್ತಿಕೊಳ್ಳೋಣ. ನೀವು ನಿಮ್ಮ ಹಿಂದಿನ ಮಾನಸಿಕ ನಡವಳಿಕೆಗಳಿಂದ, ಸಹನ ಶೀಲರೂ ಮತ್ತು ದಯಾಳುವಾಗಿ ಜೀವಿಸಬೇಕೆಂಬ ಭರವಸೆ ಹೊತ್ತು ಈ ಜನ್ಮತಾಳಿದ್ದಿರೆಂದು ಭಾವಿಸಿಕೊಳ್ಳೋಣ. ಆದರೆ, ಈ ಸಹನ ಶೀಲತೆ ಮತ್ತು ದಯಾಳುತನಗಳನ್ನು ಈ ಜನ್ಮದಲ್ಲಿ ಉದಾಶೀನಿಸಿ, ಅವುಗಳನ್ನು ಬಲಪಡಿಸಿಕೊಳ್ಳಲಾಗಲಿಲ್ಲವೆಂದು ತಿಳಿಯಿರಿ. ಆಗ, ಈ ನಿಮ್ಮ ಮನೋಭಾವಗಳಾದ ಸಹನ ಶೀಲತೆ ಮತ್ತು ದಯಾಳುತನವು ಕ್ರಮೇಣ ಬಲಹೀನವಾಗುತ್ತವೆ, ಬಹುಶಃ ಅವು ಪೂರ್ಣನಾಶವೇ ಆಗಿ, ನಿಮ್ಮ ಭವಿಷ್ಯದ ಜೀವನದಲ್ಲಿ ಸಂಪೂರ್ಣ ಇಲ್ಲದೇ ಹೋಗುವವು. ಇಲ್ಲಿನ ಸನ್ನಿವೇಶದಲ್ಲಿ ಸಹನೆ ಮತ್ತು ದಯೆಯು ಇಲ್ಲ ದುರ್ಬಲವಾಗಿರುವುದರಿಂದ, ಈ ಜನ್ಮದಲ್ಲಿಯಾಗಲೀ ಅಥವಾ ಮುಂದಿನ ಜನ್ಮದಲ್ಲಿಯಾಗಲೀ, ಮುಂಗೋಪತ್ವ, ಕೋಪ ಮತ್ತು ಕ್ರೂರಸ್ವಭಾವಗಳು ಬಹುಶಃ ಬೆಳೆದು ವೃದ್ಧಿಯಾಗಿ, ಈ ನಡೆತೆಗಳು ಸೃಷ್ಟಿಸಬಹುದಾದ ಎಲ್ಲಾ ವಿಧಗಳ ಅಸಂತೋಷಕರ ನಡವಳಿಕೆಗಳೇ ಬಹುಶಃ ವೃದ್ಧಿಯಾಗುವುವು. ಅಂತೆಯೇ ಈಗೊಂದು ಕೊನೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ನಿಮ್ಮ ಹಿಂದಿನ ಮಾನಸಿಕ ನಡವಳಿಕೆಗಳಿಂದ, ಈ ಜನ್ಮದಲ್ಲಿ ಮುಂಗೋಪಿಯೂ ಮತ್ತು ಕೋಪಿಷ್ಠನಾಗಿರಬೇಕೆಂದು ಬಯಸಿ ಜನಿಸಿದ್ದೀರೆಂದು ಭಾವಿಸೋಣ. ನಿಮ್ಮ ಪ್ರಾಜ್ಞತೆಗೆ, ಈ ನಡವಳಿಕೆಗಳು ಕೇವಲ ಅಸಂತೋಷಕರ ಸನ್ನಿವೇಶ ತರುವುವೆಂಬುದನ್ನು ಗಮನಿಸುತ್ತೀರಿ ಆಗ ನೀವು ಒಂದು ಪ್ರಯತ್ನಮಾಡಿ ಇವುಗಳ ಬದಲಾವಣೆ ನಿರೀಕ್ಷಿಸುವಿರಿ. ಆಗ, ನೀವು ಈ ದುರ್ಭಾವನೆಗಳನ್ನು ಉತ್ತಮ. ಭಾವನೆಗಳಿಂದ ಪ್ರತಿಕ್ಷೇಪಿಸಿಕೊಳ್ಳುವಿರಿ. ಆಗ, ನೀವು ಆ ಅಸಂತೃಪ್ತಿಕರ ನಡವಳಿಕೆಗಳನ್ನು ಸಂಪೂರ್ಣ ತೊಡೆದುಹಾಕಿದ್ದೀರೆಂದು ಭಾವಿಸಿಕೊಳ್ಳಿ–ಇದು ಸಾಧ್ಯವೂ ಕೂಡ ನಿಮ್ಮ ಉತ್ತಮ ಪ್ರಯತ್ನದಿಂದ, ಆಗ ನೀವು ಈ ಅಸಂತೃಪ್ತಿಕರ ಭಾವನೆಗಳನ್ನು ತರುವ ಸನ್ನಿವೇಶಗಳಿಂದ, ಮುಂಗೋಪ ಮತ್ತು ಕೋಪತಾಪಗಳಿಂದ ಬಿಡುಗಡೆ ಹೊಂದುವಿರಿ. ನೀವು ಇಂತಹ ದುರ್ಭಾವನೆಗಳ ಪ್ರಭಾವಗಳನ್ನು ದುರ್ಬಲಗೊಳಿಸಬಲ್ಲವರಾದರೆ, ಅವು ನಿಮ್ಮ ಭವಿಷ್ಯ ಜೀವನದಲ್ಲಿ ಮರುಕಳಿಸುತ್ತವೆ, ಆಗ ನಿಮ್ಮ ಈ ಪ್ರಯತ್ನವು ಇನ್ನೂ ಬಲಗೊಳಿಸುವುದಾದರೆ, ಅವುಗಳನ್ನು ಸಂಪೂರ್ಣ ತೊಡೆದು ಹಾಕಬಲ್ಲಿರಿ ಮತ್ತು ಆ ಮೂಲಕ ಈ ಅಸಂತೃಪ್ತಿ ಭಾವನೆಗಳಿಂದ ಪೂರ್ಣ ವಿಮುಕ್ತರಾಗಬಲ್ಲಿರಿ.

ಪ್ರಶ್ನೆ : ಪುನರ್ಜನ್ಮ ಕುರಿತಾಗಿ ವಿಶೇಷ ವಿಷಯಗಳನ್ನು ತಿಳಿಸಿದ್ದೀರಿ, ಹೆಚ್ಚು ಮಾತನಾಡಿದ್ದೀರಿ. ಆದರೆ, ನಾವು ಮರಣಿಸಿದ ಮೇಲೆ, ಪುನರ್ಜನ್ಮಿಸುತ್ತೇವೆ ಎಂಬುದಕ್ಕೆ ನಿದರ್ಶನವಿದೆಯೇ?

—ಪುನರ್ಜನ್ಮದಲ್ಲಿ ನಂಬಿಕೆ ತಳೆದಿರುವ ಬೌದ್ಧೀಯರಿಗೆ ಉತ್ತೇಜನ ನೀಡುವಂತೆ, ವಿಜ್ಞಾನದ ನಿದರ್ಶನಗಳಿರುವುದು ಮಾತ್ರವಲ್ಲದೆ, ಜೀವಿತದ ನಂತರದ ತತ್ವವನ್ನು ನಿದರ್ಶನದಿಂದ ತಿಳಿಸುವುದು ಇದೊಂದೇ ಮಾರ್ಗ. ಸ್ವರ್ಗದ ಅಸ್ತಿತ್ವ ಕುರಿತು ಆಧಾರಸಹಿತ ನಿರ್ಧರಿಸುವ ಒಂದು ತೃಣ ನಿದರ್ಶನವೂ ಇಲ್ಲ. ಅಂತೆಯೇ ಸಾವಿನ ಅನಂತ ಸರ್ವನಾಶವಾಯಿತೆಂದು ಸಾಧಿಸಲು ಸಹ ಯಾವ ಆಧಾರಗಳೂ ಅಪೂರ್ಣ. ಆದರೆ ಹಿಂದಿನ ಮೂವತ್ತು ವರ್ಷಗಳ ಹಿಂದೆಯೂ ಈ ಉಪಮಾನಸಿಕ ಶಾಸ್ತ್ರವು, ಇಂದು ಹಲವು ಜನರು ತಮ್ಮ ಹಿಂದಿನ ಜನ್ಮದ ಹಲವು ಸ್ಪಷ್ಟ ನೆನಪುಗಳನ್ನು ಹೊಂದಿರುವರು ಎನ್ನುವ ಬಗ್ಗೆ ಸುದೀರ್ಘ ವರದಿಗಳನ್ನು ಪರಿಶೀಲಿಸಿದ್ದಾರೆ. ಉದಾಹರಣೆಗೆ, ಇಂಗ್ಲೆಂಡ್‌ನಲ್ಲಿ, ಐದು ವರ್ಷದ ಬಾಲಕಿಯೊಬ್ಬಳು ತನ್ನ "ಹಿಂದಿನ ಜನ್ಮದ ತಂದೆ ತಾಯಿಗಳನ್ನು ಸ್ಪಷ್ಟವಾಗಿ ನೆನಪಿಸಿಕೊಳ್ಳುವಳಲ್ಲದೆ, ಮತ್ತೊಬ್ಬ ವ್ಯಕ್ತಿಯ ಜೀವನದಲ್ಲಿ ಸಂಬಂಧಿಸಿದ ಸುಸ್ಪಷ್ಟ ಸನ್ನಿವೇಶಗಳನ್ನು ಈ ಮಗುವು ಅತ್ಯುತ್ತಮವಾಗಿ ಹೇಳಬಲ್ಲಳು. ಉಪ ಮಾನಸಿಕ ಶಾಸ್ತ್ರಜ್ಞರು ಈ ಅಂಶವನ್ನು ಪರೀಕ್ಷಿಸಲು, ಆ ಹುಡುಗಿಯನ್ನು ಸಂದರ್ಶಿಸಿದರು. ಆಕೆಗೆ ನೂರಾರು ಪ್ರಶ್ನೆಗಳನ್ನು ಹಾಕಿ ಸರಿ ಉತ್ತರಗಳನ್ನು ಪಡೆದರು. ಆ ಹುಡುಗಿಯು ಸ್ಪೈನ್ ದೇಶದಲ್ಲಿನ ಒಂದು ನಿರ್ದಿಷ್ಟ ಹಳ್ಳಿಯನ್ನು ಹೆಸರಿಸಿದಳು. ಅವಳು ಅಲ್ಲಿ ವಾಸಿಸುತ್ತಿದ್ದ ಸ್ಥಳ, ರಸ್ತೆ ಮತ್ತು ಪತಾರವನ್ನು ಖಚಿತವಾಗಿ ಹೇಳಿದಳಲ್ಲದೆ, ಆಕೆಯು ನೆರೆಹೊರೆಯವರ ಹೆಸರು, ಅವರ ಹೆಸರುಗಳೊಡನೆ ವಿವರವನ್ನಲ್ಲದೆ, ಆ ದಿನ ಆಕೆಯು ಚಟುವಟಿಕೆಗಳನ್ನು ಮತ್ತು ದಿನಚರಿಯನ್ನೂ ವರ್ಣಿಸಿದಳು. ಅಲ್ಲದೆ, ಆ ಹುಡುಗಿ ಕಂಬನಿ ತುಂಬಿಕೊಂಡು ಮಾತನಾಡುತ್ತ ತಾನು ಹೇಗೆ ಒಂದು ಕಾರಿನ ಹೊಡೆತದಿಂದ ಕೆಳಗೆ ಬಿದ್ದು ಗಾಯಗೊಂಡು, ಎರಡು ದಿನಗಳ ನಂತರ ಆ ಗಾಯಗಳಿಂದಲೇ ಮರಣ ಹೊಂದಿದುದನ್ನು ತಿಳಿಸಿದಳು. ಈ ವಿವರಗಳನ್ನೆಲ್ಲಾ ವಿಮರ್ಶಿಸಿ ಪರೀಕ್ಷಿಸಿದಾಗ ಪ್ರತಿಯೊಂದು ವಿಷಯವೂ ಕರಾರುವಾಕ್ ಸರಿಯಾಗಿದ್ದವು. ಆ ಹುಡುಗಿಯು ಹೇಳಿದ ಊರು ಸ್ಪೈನ್ ದೇಶದಲ್ಲಿದ್ದಿತು. ಅಂತೆಯೇ ಆಕೆ ಹೇಳಿದಂತಹ ಮನೆಯೂ ಮತ್ತು ಬೀದಿಯೂ ಅದರ ಹೆಸರೂ ತಾಳೆ ಹೊಂದಿತು. ಇದಕ್ಕೂ ಇನ್ನೂ ಮಿಗಿಲಾಗಿದ್ದುದೆಂದರೆ, ಓರ್ವ ಇಪ್ಪತ್ತು ಮೂರು

ವರ್ಷದ ತರುಣಿಯೊಬ್ಬಳು ಆ ಮನೆಯಲ್ಲಿ ವಾಸವಾಗಿದ್ದುದಲ್ಲದೆ, ಇದಕ್ಕೆ ಐವತ್ತು ವರ್ಷದ ಹಿಂದೆ ಆ ತರುಣಿಯು ಒಂದು ಕಾರಿನ ಅಪಘಾತದಿಂದ ಮೃತ ಹೊಂದಿರುವುದೂ ಬೆಳಕಿಗೆ ಬಂದಿತು. ಈಗ ನಮ್ಮ ಮುಂದಿರುವ ಆಶ್ಚರ್ಯವೆಂದರೆ, ಇಂಗ್ಲೆಂಡ್ ದೇಶದಲ್ಲಿ ಜನಿಸಿರುವ ಈ ಐದು ವರ್ಷದ ಹುಡುಗಿ, ಸ್ಪೆಯಿನ್ ದೇಶಕ್ಕೆ ಹೋಗಿಯೇ ಇರದಿದ್ದರೂ, ಅಲ್ಲಿನ ಈ ವಿವರಣೆಗಳೆಲ್ಲವನ್ನು ಹೇಗೆ ತಿಳಿದುಕೊಂಡಿರುವಳು? ಎಂಬುದು. ಅಂತೆಯೇ ಈ ಬಗೆಯ ಸುದ್ದಿ ಇದೊಂದೇ ಆಗದೆ, ಇನ್ನೂ ಅನೇಕವಿವೆ. ವರ್ಜೀನಿಯಾ ವಿಶ್ವವಿದ್ಯಾಲಯದಲ್ಲಿನ ಮಾನಸಿಕ ಶಾಸ್ತ್ರ ವಿಭಾಗದ ಪ್ರೊಫೆಸರ್ ಇವಾನ್ ಸ್ಟೀವನ್‌ಸನ್ ಎಂಬುವರು, ತಮ್ಮ ಪುಸ್ತಕದಲ್ಲಿ* ವಿವರಿಸಿದ್ದಾರೆ ಇವರೊಬ್ಬ ವಿಶ್ವಾಸನೀಯ ವಿಜ್ಞಾನಿ. ಇವರು ಇಪ್ಪತ್ತೈದು ವರ್ಷಗಳಿಗಿಂತಲೂ ಹೆಚ್ಚು ವರ್ಷಗಳ ಕಾಲ, ಈ ಕ್ಷೇತ್ರದಲ್ಲಿ ಬಗೆಬಗೆಯ ಜನರನ್ನು ಅದರಲ್ಲೂ ಯಾರಾರು ತಮ್ಮ ಹಿಂದಿನ ಜನ್ಮದ ನೆನಪುಗಳನ್ನು ತಾವಾಗಿಯೇ ನೀಡಬಲ್ಲರೋ ಅವರ ಹೇಳಿಕೆಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ಪರಿಶೀಲಿಸಿ, ಅವರಿಗೆ ದೊರೆತ ಗುರುತರ ಸಾಕ್ಷ್ಯಾಧಾರಗಳ ಅಧ್ಯಯನ ನಡೆಸಿ, ಅದನ್ನು ಬೌದ್ಧೀಯ ಬೋಧನೆಗಳಲ್ಲಿ ಕಂಡುಬರುವ ಭಾಗಗಳನ್ನು ಹೋಲಿಸಿ, ಹೊಂದಾಣಿಕೆಯನ್ನು ಪಡೆದಿದ್ದಾರೆ.

**ಪ್ರಶ್ನೆ:—** ಕೆಲವು ಜನರು, ಹಿಂದಿನ ಜನ್ಮದ ನೆನಪುಗಳನ್ನು ಹೊಂದಿರುವುದು ದೆವ್ವ ಅಥವಾ ಭೂತಗಳ ಕೆಲಸವೆನ್ನುವರಲ್ಲವೇ ?

ಯಾವುದನ್ನೇ ಆಗಲೀ, ಅದು ನಿಮ್ಮ ನಂಬಿಕೆಗಳ ಕ್ಷೇತ್ರಗಳಲ್ಲಿ ಸಮಂಜಸತೆಯನ್ನು ಪಡೆಯುತ್ತಿಲ್ಲವೆಂಬ ಒಂದೇ ಕಾರಣಕ್ಕಾಗಿ ಅಂತಹ ಎಲ್ಲಾ ವಿಷಯಗಳನ್ನು ತಳ್ಳಿಹಾಕಲಾಗದು, ಹಾಗೂ ಅದು ದೆವ್ವಗಳ ಕೆಲಸವಂತೆಂದೂ ನಂಬಲಾಗದು. ತಣ್ಣಗಿನ ಸನ್ನಿವೇಶಗಳಿದ್ದಾಗ, ಗಡಸು ಸತ್ವಾಂಶಗಳು ಒಂದು ಉದ್ದೇಶಕ್ಕೆ ಆಶ್ರಯನೀಡಲು ಉತ್ಪತ್ತಿಯಾಗುವುವು ಆದುದರಿಂದ ನೀವು ಸಕಾರಣೀ ಭಾವನೆ ಮತ್ತು ನ್ಯಾಯಸಮ್ಮತ ಭಾವನೆಗಳನ್ನು ಬಳಸಿ, ಆ ಸಮಸ್ಯೆಗಳನ್ನು ವಿಶ್ಲೇಷಿಸಬೇಕು–ಹಾಗಲ್ಲದೆ, ಸೂಕ್ತ ಕಾರಣಗಳ ಸೂಚನೆಗಳಿಲ್ಲದೆ, ಮೂಢನಂಬಿಕೆಗಳ ವಾಗ್ವಾದವನ್ನು ಈ ದೆವ್ವಗಳ ಸಮಸ್ಯೆ ಪರಿಹಾರಕ್ಕೆ ರೂಢಿಸಬಾರದು.

---

* ಈ ಬಗೆಯ ಇಪ್ಪತ್ತು ಪುನರ್ಜನ್ಮ ಪಡೆದಿರುವವರ ಸಿದ್ಧಾಂತಿಸುವ ಸನ್ನಿವೇಶಗಳನ್ನು ವರ್ಣಿಸಿರುವುದನ್ನು, ವರ್ಜೀನಿಯಾ ವಿಶ್ವವಿದ್ಯಾಲಯದ ಮುದ್ರಣ ಚಾರ್ಲೊಟಿವಿಲೆ, ಯು.ಎಸ್.ಎ. 1975 ಇದನ್ನು ನೋಡಿರಿ.

ಪ್ರಶ್ನೆ :— ನೀವು ದೆವ್ವ-ಭೂತಗಳನ್ನು ಕುರಿತಾದ ಚರ್ಚೆಯು ಮೂಢ ನಂಬಿಕೆಯದೆಂದು ಹೇಳುವಿರಿ. ಹಾಗಾದರೆ ಪುರುಜನ್ಮದ ಬಗ್ಗೆ ಮಾತನಾಡುವುದು ಸ್ವಲ್ಪಮಟ್ಟಿಗೆ ಮೂಢ ನಂಬಿಕೆ ಯಲ್ಲವೇ ?

—ಶಬ್ದಾರ್ಥ ಕೋಶದಲ್ಲಿ 'ಮೂಢನಂಬಿಕೆ' ಎಂಬುದು, ಯಾವ ಮೂಲ ಕಾರಣ ಹೊಂದಿರದ ನಂಬಿಕೆ ಎಂದು ತಿಳಿಸುವುದು. ಅಥವಾ ಒಂದು ಸನ್ನಿವೇಶ. ಯಾವ ಸತ್ಯೋದ್ದೇಶಗಳನ್ನು ಹೊಂದದಿರುವುದು, ಮಾಯಾ ಮಂತ್ರಗಳಿಗಿದ್ದಂತೆ. ನೀವು, ಒಬ್ಬ ಶ್ರೇಷ್ಠ ವಿಜ್ಞಾನಿಯು. ಈ ದೆವ್ವಗಳ ಅಸ್ತಿತ್ವದ ಬಗ್ಗೆ ವಿಮರ್ಶಿಸಿ ಬರೆದಿರುವ ಗ್ರಂಥವನ್ನು ಅಥವಾ ಸಾಕ್ಷಿಯನ್ನು ನನಗೆ ತೋರಿಸಿದರೆ, ಆಗ ನಾನು, ಈ ದೆವ್ವಗಳ ಬಗ್ಗೆ ತಳೆದಿರುವ ಮೂಢನಂಬಿಕೆ ಭಾವವನ್ನು ತೊರೆಯುವೆನು. ಆದರೆ, ಈ ದೆವ್ವಗಳ ಬಗೆಗಿನ ಯಾವ ಸಂಶೋಧನೆಯನ್ನೂ ಇದುವರೆಗೂ ಕೇಳಿ ತಿಳಿದಿಲ್ಲ ; ವಿಜ್ಞಾನಿಗಳೂ ಸಹ ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸರು. ಆದುದರಿಂದ ನಾನು, ದೆವ್ವಗಳ ಅಸ್ತಿತ್ವದ ಬಗ್ಗೆ ಯಾವ ಪುರಾವೆಗಳೂ ಇಲ್ಲವೆಂಬುದನ್ನು ಹೇಳುವೆನು. ಆದರೆ, ಈಗತಾನೆ ನಾವು ತಿಳಿದುಕೊಂಡಂತೆ, ಮರುಜನ್ಮವು ಸಾಧ್ಯವೆಂಬುದನ್ನು ಸೂಚಿಸುತ್ತಿರುವಂತೆ ಅದು ನಡೆಯುತ್ತದೆ ಎಂಬುದು ಖಚಿತ. ಆದ್ದರಿಂದ ಈ ಮರುಜನ್ಮದ ಬಗ್ಗೆ ಹಲವು ಸ್ಪಷ್ಟ ನಿದರ್ಶನಗಳನ್ನು ಸೂಚಿಸುತ್ತಿರುವುದಾದ್ದರಿಂದ, ಅದೊಂದು ಮೂಢ ನಂಬಿಕೆಯಾಗುವುದಿಲ್ಲ.

ಪ್ರಶ್ನೆ :— ಮರುಜನ್ಮದಲ್ಲಿ ನಂಬಿಕೆ ತಳೆದಿರುವ ವಿಜ್ಞಾನಿಗಳು ಯಾರಾದರೂ ಇದ್ದಾರೆಯೇ ?

—ಹೌದು, ಥಾಮಸ್ ವಿಲಿಯಂ ಹಕ್ಸ್ಲೆ ಎಂಬುವರು, ಬ್ರಿಟಿಷ್ ಶಾಲೆಗಳಲ್ಲಿ ವಿಜ್ಞಾನವನ್ನು ಹತ್ತೊಂಭತ್ತನೆಯ ಶತಮಾನದಲ್ಲಿ ಜಾರಿಗೆ ತಂದವರು ಮತ್ತು ಇವರು ಡಾರ್ವಿನ ವಂಶಾವಳಿ ಶಾಸ್ತ್ರವನ್ನು ಸಂರಕ್ಷಿಸಿದರಲ್ಲದೆ, ಮರುಜನ್ಮವೆಂಬುದೊಂದು ಅತಿ ಸಮಂಜಸವಾದ ಅಭಿಪ್ರಾಯವೆಂದರು. ಇವರ ಪ್ರಖ್ಯಾತವಾದ ಗ್ರಂಥ ಉತ್ಕ್ರಾಂತಿವಾದ ಮತ್ತು ಧರ್ಮಶಾಸ್ತ್ರ ಮತ್ತು ಇತರೇ ಪ್ರಬಂಧಗಳು ಎಂಬುದರಲ್ಲಿ ಅವರು ಹೀಗೆ ಹೇಳಿರುವರು.

"ಜನ್ಮಾಂತರಗೊಳ್ಳುವ ಸಿದ್ಧಾಂತದಲ್ಲಿ, ಅದರ ಮೂಲವು ಏನೇ ಇದ್ದರೂ, ಬುದ್ಧಿಜೀವಿತ ಮತ್ತು ಬೌದ್ಧೀಯ ಪರ್ಯಾಯಲೋಚನೆಗಳು

ಬ್ರಹ್ಮಾಂಡ ಮತ್ತು ಮಾನವ ಇವರ ಮಧ್ಯೆ ನ್ಯಾಯಸಮ್ಮತ ಸ್ಥಾಪನೆಗೆ ಬೇಕಾದ ಮಾರ್ಗಗಳನ್ನು ನಿರ್ಮಿಸುವುದಕ್ಕೆ ಮುಕ್ತಾಭ್ಯಾಸದಿಂದ ಸಿದ್ಧವಾಗಿ ಕೈಗೆತ್ತಿಕೊಂಡಿದೆ.......ಆದರೂ ಈ ನ್ಯಾಯಸಮ್ಮತ ವಿಚಕ್ಷಣತೆಯನ್ನು ಇತರ ನೆಪಗಳಿಗಿಂತ ಕಡಿಮೆ ಮಾಡಿರುವುದಿಲ್ಲ; ಇದನ್ನು ಆತುರದ ಆಲೋಚನಾಕಾರರು, ಪರಂಪರಾನುಗತ ಅಸಂಬದ್ಧಗಳನ್ನು ಮುಂದುಮಾಡಿ, ತಿರಸ್ಕರಿಸುವರು–ಇವರಲ್ಲದೆ ಬೇರಾರೂ ಈ ಬಗ್ಗೆ ಆ ಅಭಿಪ್ರಾಯ ತಳೆದಿಲ್ಲ. ಜೀವ ವಿಕಾಸವಾದ ಸಿದ್ಧಾಂತಗಳಂತೆ, ಜನ್ಮಾಂತರಗೊಳ್ಳುವ ಸಿದ್ಧಾಂತಗಳೂ ಸಹ, ವಾಸ್ತವಿಕತೆಯ ಮೂಲಾಧಾರವನ್ನು ಹೊಂದಿವೆ. ಈ ಅನುರೂಪತೆ ಹೊಂದಿರುವ ಮಹಾ ವಿವಾದಗಳು ಒದಗಿಸುತ್ತಿರುವುದನ್ನೇ ಇದಕ್ಕೆ ಆಶ್ರಯ ನೀಡುತ್ತಿದೆ ಎಂದೂ ನಾವು ಎಣಿಸಬಹುದು."

ಹಾಗೆಯೇ ಪ್ರೊಫೆಸರ್ ಗಸ್ಟಫ್ ಸ್ಟ್ರಾಂಬರ್ಗ್, ಎಂಬ ಹೆಸರಾಂತ ಸ್ವೀಡನ್ ದೇಶದ ನಕ್ಷತ್ರ ಶಾಸ್ತ್ರಜ್ಞರು. ಭೌತಶಾಸ್ತ್ರಜ್ಞ ಮತ್ತು ಐನ್‌ಸ್ಟೈನ್ ರವರ ಸ್ನೇಹಿತರಾಗಿದ್ದವರೂ ಸಹ ಈ ಮರುಜನ್ಮದ ಸಮಂಜಸತೆಯು ತುಂಬಾ ಮನ ಒಪ್ಪುವಂತಿರುವುದು.

"ಮಾನವರ ಆತ್ಮಗಳು ಮರುಜನ್ಮ ಪಡೆಯುತ್ತವೆ ಎಂಬುದರ ಬಗ್ಗೆ ಅಭಿಪ್ರಾಯ ಭೇದಗಳಿರಬಹುದು. ಕ್ರಿ.ಶ. 1936 ರಲ್ಲಿ ಅತಿ ಚಮತ್ಕಾರದ ಹಾಗೂ ಆಸಕ್ತಿಗಳಿಸುವ ಒಂದು ಸನ್ನಿವೇಶದ ಶೋಧನೆಯನ್ನು ಪೂರ್ಣವಾಗಿ ಪರಾಮರ್ಶಿಸಲಾಯಿತು ಮತ್ತು ಭಾರತ ದೇಶದ ಸರ್ಕಾರವೇ ಈ ಬಗೆಗೆ ಒಂದು ವರದಿಯನ್ನು ನೀಡಿದೆ. ಒಬ್ಬ ಹುಡುಗಿ (ದೆಹಲಿಯಲ್ಲಿನ ಶಾಂತಿದೇವಿ)ಯು ತನ್ನ ಪೂರ್ವಜನ್ಮದ ಜೀವನ ಚಕ್ರವನ್ನೇ ಕರಾರುವಾಕ್ಕಾಗಿ ವಿವರಿಸುವಳು (ದೆಹಲಿಗೆ ಸುಮಾರು 450 ಮೈಲಿದೂರದಲ್ಲಿರುವ ಮಥುರಾದಲ್ಲಿನ ಜೀವನ) ಇದು ಈ ಎರಡನೆಯ ಜನನಕ್ಕೆ ಒಂದು ವರ್ಷದ ಹಿಂದೆ ಕೊನೆಯಾಗಿತ್ತು. ಆಕೆಯು ತನ್ನ ಪತಿಯ ಮತ್ತು ಮಗುವಿನ ಹೆಸರನ್ನು ಹೇಳಿ, ತನ್ನ ಮನೆಯ ಹಾಗೂ ಆಕೆಯ ಜೀವನದ ವಿವರವನ್ನು ನೀಡಿದಳು. ಇದರ ಸತ್ಯಾನ್ವೇಷಣೆಯ ತಂಡವು ಆ ಹುಡುಗಿಯನ್ನು ಅವಳ ಹಿಂದಿನ ಬಂಧುಗಳ ಬಳಿ ಕರೆದೊಯ್ದರು ಮತ್ತು ಆಕೆಯ ಪ್ರತಿಯೊಂದು ಹೇಳಿಕೆಯನ್ನು ವಿಮರ್ಶಿಸಿದರು, ವಿಶ್ಲೇಷಿಸಿದರು. ಪ್ರತಿಯೊಂದೂ ಸಮಂಜಸವಾಗಿತ್ತು. ಭಾರತದೇಶದಲ್ಲಿನವರಿಗೆ ಈ ಮರುಜನ್ಮ ಪ್ರವೃತ್ತಿಯು ಸರ್ವೇ ಸಾಮಾನ್ಯವಾದುದು; ಇವರಿಗೆ ಅತಿ

ಆಶ್ಚರ್ಯವಾದುದೆಂದರೆ ಆ ಹುಡುಗಿಯು ತನ್ನ ಹಿಂದಿನ ಜನ್ಮದ ಅಷ್ಟೆಲ್ಲಾ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡಿರುವಳಲ್ಲ ಎಂಬುದು. ಇದು ಮತ್ತು ಇನ್ನು ಅನೇಕ ಈ ಬಗೆಯ ವಿಷಯಗಳು, ಮಾನಸಿಕ ಭಾವನೆಗಳನ್ನು ನಾಶಪಡಿಸಲಾಗದೆಂಬ ತತ್ವವನ್ನು ಸಿದ್ಧಾಂತಿಸುವುದೆಂಬುದೇ ಹೆಚ್ಚಿನ ಮಾಹಿತಿಯಾಗುವುದು.

ಪ್ರೊಫೆಸರ್ ಜೂಲಿಯನ್ ಹಕ್ಸಲೇಯವರು, ಬ್ರಿಟಿಷ್ ದೇಶದ ಒಬ್ಬ ವಿಖ್ಯಾತ ವಿಜ್ಞಾನಿಗಳು, ಯುನೆಸ್ಕೊ (UNESCO) ಕ್ಕೆ ವಿಶೇಷ ನಿರ್ದೇಶಕರು, ಪುನರ್ಜನ್ಮ ತಳೆಯುವುದು, ವಿಜ್ಞಾನ ಮನೋಭಾವಗಳಿಗೆ ಅತ್ಯಂತ ಸಮಂಜಸವಾಗಿದೆ ಎಂದು ನಂಬಿದವರು.

‘‘ಯಾವುದೇ ಜೀವಿಯ ಮರಣ ಸಂಭವಿಸಿದಾಗ, ಅಲ್ಲಿನ ಶಾಶ್ವತವಾಗಿ ಜೀವಕಳೆಯು ವೈಯಕ್ತಿಕ ಚೇತನವೊಂದು, ಯಾವುದೋ ಒಂದು ನಂಬುವುದಕ್ಕೆ ಯಾವ ವಿರುದ್ಧ ಭಾವನೆಯೂ ಇಲ್ಲ : ತಂತಿ ಸಂಪರ್ಕವಿಲ್ಲದ ವಾರ್ತಾ ಪ್ರಸರಣೆಯನ್ನು ಬಿತ್ತರಿಸುವ ಯಂತ್ರಸೌಲಭ್ಯಗಳ ಮಾದರಿಯಲ್ಲಿಯೆ ಬಿಟ್ಟು ಹೋಗುವುದು. ಹೀಗೆ ಬಿತ್ತರಿಸಿದ ವಾರ್ತಾ ಪ್ರಸರಣವು ಅದರಂತೆಯೇ ಕಾರ್ಯನಿರ್ವಹಿಸುವ ಮತ್ತೊಂದು ಹೊಸ ಯಾಂತ್ರಿಕ ಸಲಕರಣೆಯನ್ನು ತಲುಪಿದಾಗ ಮಾತ್ರವೇ ಅದೊಂದು ಸಂದೇಶವಾಗಿ ಹೊರಬರುವುದು ; ಇದನ್ನು ನಾವು ಸ್ವಾಗತಿಸುವ ಯಂತ್ರವೆನ್ನುವೆವು. ಹೀಗೆಯೇ ನಮ್ಮ ಚೈತನ್ಯವು ಹೊರಹೊಮ್ಮಿ ಮತ್ತೊಂದು ಗುರಿಯಮುಟ್ಟುವುದು. ಇದು ಹಿಂದಿನದಂತಹ ಮತ್ತೊಂದು ಯಾವುದೋ ಒಂದು ಬಗೆಯ ಶರೀರವನ್ನು ಪಡೆದು ಅದರಲ್ಲಿ ಬಂಧಿತವಾಗುವವರೆಗೂ ತನ್ನ ಆಲೋಚನೆ ಅಥವಾ ಅಸ್ತಿತ್ವ ಪ್ರದರ್ಶನ ಪಡೆಯಲಾರದು. ನಮ್ಮ ವ್ಯಕ್ತಿತ್ವವು ನಮ್ಮ ಶರೀರದ ಮೂಲಾಧಾರವನ್ನು, ಅದರಲ್ಲೂ ಯಾವ ಸತ್ಯಮೂಲದ ಭಾವನೆ ತಳೆದಿರುವ ಈ ಶರೀರವನ್ನು ಹೊಂದಿರದೆ, ಯಾವುದನ್ನೂ ನಾನು ತಿಳಿದಿರುವಂತೆ, ಹೊರಗೆಡುವಬೇಕೆಂದರೆ, ಯಾವ ಪುರುಷ ಅಥವಾ ಸ್ತ್ರೀಯಾಗಲೀ, ತಂತಿ ಸಂಪರ್ಕವಿಲ್ಲದ ಸುದ್ದಿ ಪ್ರಸರಣೆ ಯಂತ್ರ ಹೊಂದುವಂತಹ ಶಕ್ತಿಯನ್ನು ಹೊಂದಿರಬೇಕು, ಹಾಗೆಯೇ ಈ ಸಾವು ಮತ್ತು ಪುನರ್ಜನ್ಮವು, ಈಗಿನ ಸಂದರ್ಭದಲ್ಲಿ ಕಾಣುವಂತೆ, ಇದೊಂದು ವಿಧವಾದ ಬಗೆಬಗೆಯ ಮಾರ್ಗಗಳಿಂದ ಇಡೀ ವಿಶ್ವಾಂಬರದಲ್ಲಿ ಅಡೆತಡೆಗಳಿಂದ ಸುತ್ತಾಡುವ ಒಂದು ಯಾಂತ್ರಿಕ ಕ್ರಿಯೆ. ಇದು ಮತ್ತೊಂದು ಇದೇ ವಿಧವಾದ ಸ್ವಾಗತಿಸುವ ಯಾಂತ್ರಿಕ ಸಾಧನೆಯಾದ

ಮತ್ತೊಂದು ಶರೀರ ಪಡೆದು ಬಂಧಿತವಾಗುವವರೆಗೂ ನಡೆಯುವುದು. ಆನಂತರವೇ ಅದು ತನ್ನ ನಿಜವಾದ ಪ್ರಜ್ಞಾವಸ್ಥೆಯನ್ನು ಹಾಗೂ (ಅದರ) ಮನಸ್ಸಿನಆಲೋಚನೆಗಳನ್ನು ಮಾಡುವ ಸಾಮರ್ಥ್ಯವನ್ನು ಪಡೆಯುವುದು.

ಕೊನೆಗೆ, ಸರ್ವ ಪ್ರಾಯೋಗಿಕ ಭಾವದ ಮತ್ತು ಪ್ರಪಂಚದಲ್ಲಿ ಉತ್ತಮ ಸ್ಥಾನ, ಆರ್ಥಿಕ ಸ್ಥಿತಿಯನ್ನು ಹೊಂದಿರುವ ಅಮೇರಿಕಾದ ಕೈಗಾರಿಕೋದ್ಯಮಿ ಹೆನ್ರಿ ಫೋರ್ಡ್‌ರು ಸಹ ಈ ಮರುಜನ್ಮದ ಅಭಿಪ್ರಾಯವು ಒಪ್ಪಬಹುದಾದ ವಿಷಯವೆನ್ನುವರು. ಹೆನ್ರಿ ಫೋರ್ಡ್‌ರವರು ಈ ಮರುಜನ್ಮದ ಅಭಿಪ್ರಾಯದಿಂದ ತುಂಬಾ ಆಕರ್ಷಿತರಾಗಿರುವರು. ಏಕೆಂದರೆ, ಈ ಆಸ್ತಿಕವಾದಿಗಳಂತೆ ಅಥವಾ ವಸ್ತು ನಿತ್ಯತೆಯನ್ನನುಸರಿಸುವವರಂತೆ, ಮರುಜನ್ಮ ತಳೆಯುವುದು, ನಿಮಗೊಂದು ಎರಡನೆಯ ಅವಕಾಶವನ್ನು ನಿಮ್ಮ ವ್ಯಕ್ತಿತ್ವವನ್ನು ಉತ್ತಮಪಡಿಸಲೋಸುಗ ದೊರೆಯುವುದೆಂಬುದನ್ನು ಅಂತವರಾಗಿರುವರು, ಮತ್ತು ಅವರು ಹೀಗೆ ಹೇಳುವರು :

"ನಾನು ನನ್ನ 26ನೆಯ ವಯಸ್ಸಿನಲ್ಲಿಯೇ ಈ ಮರುಜನ್ಮತಳೆಯುವ ಅಭಿಪ್ರಾಯವನ್ನು ಅಳವಡಿಸಿಕೊಂಡೆನು. ನನ್ನ ಜಾತಿ ಧರ್ಮಗಳು ಈ ಅಭಿಪ್ರಾಯಕ್ಕೆ ಏನನ್ನು ಕೊಡಲಿಲ್ಲ. ನನ್ನ ಉದ್ಯೋಗವೂ ಸಹ ನನಗೆ ಪೂರ್ಣ ಸಂತೃಪ್ತಿಯನ್ನು ತರಲಿಲ್ಲ. ಈ ಉದ್ಯೋಗವು ಆ ಒಂದು ಜೀವನದಲ್ಲಿನ ಅನುಭವಗಳನ್ನು ಸದುಪಯೋಗ ಪಡೆದುಕೊಳ್ಳದಿರುವುದಾದ ಮುಂದಿನ ಜನ್ಮದಲ್ಲೂ ಅದು ಅಪ್ರಯೋಜಕ. ನಾನು ಈ ಮರುಜನ್ಮದ ಸತ್ಯತೆಯನ್ನು ಕಂಡುಕೊಂಡಾಗ, ಅದು ನನಗೆ ಇಡೀ ವಿಶ್ವದ ಕಲ್ಪನೆಯನ್ನೇ ಕರುಣಿಸಿದೆ ಎಂದಂತಾಗಿತ್ತು. ನನ್ನ ಹಾವಭಾವನೆಗಳನ್ನು ಉತ್ತಮ ಮಾರ್ಗದಲ್ಲಿ ಕರಗತಗೊಳಿಸಬಹುದೆಂಬುದನ್ನು ನಾನು ಸಂಪೂರ್ಣ ಮನಗಂಡೆನು. ಕಾಲಮಿತಿಯು ನನಗೆ ಯಾವ ನಿಬಂಧನೆ ಹೇರಿಸಿರಲಿಲ್ಲ. ಗಡಿಯಾರದ ಮುಳ್ಳುಗಳನ್ನು ವೀಕ್ಷಿಸಿ ನಡೆಯುವಂತ ಗುಲಾಮ ನಾನಾಗಲಿಲ್ಲ. ಅನುಭವಾಮೃತವೇ ನನ್ನ ಬುದ್ಧಿ ವೈಭವವಾಯಿತು ಇದನ್ನು ಕೆಲವರು ಪ್ರತಿಭೆ ಅಥವಾ ಒಂದು ವರಪ್ರಸಾದವೆಂದು ಬಗೆದರು. ಆದರೆ, ನನ್ನ ಅನೇಕ ದೀರ್ಘ ಜೀವನಾನುಭವಗಳ ಪ್ರತಿಫಲ. ಕೆಲವರು ಇತರೆಯವರಿಗಿಂತ ವಯಸ್ಸಾದ ಆತ್ಮವನ್ನು ಪಡೆದಿರಬಹುದು. ಆದುದರಿಂದ ಅವರು ಹೆಚ್ಚಿನ ಜ್ಞಾನವಂತರಿರಬಹುದು ......ಮರುಜನ್ಮದ ಶೋಧನೆಯು ನನ್ನ ಮನಸ್ಸನ್ನು ಆನಂದದಿಂದಲೂ ಮತ್ತೂ ಹಗುರವಾಗಿಗಿಸಿದೆ. ಈ ಸಂಭಾಷಣೆಗಳನ್ನು ನೀವು ದಾಖಲಿಸಿ ಸಂಗ್ರಹಿಸಿಕೊಂಡರೆ, ಅದನ್ನು

ಬರೆಯಿರಿ, ಏಕೆಂದರೆ ಇದು ಜನರ ಮನಸ್ಸನ್ನು ಹಗುರಗೊಳಿಸು ನಾನು ಇದನ್ನು ಇತರರಿಗೂ ಮರು ಪ್ರಸರಣಗೊಳಿಸಲಿಚ್ಛಿಸುವೆನು ; ಇದು ನನ್ನ ದೀರ್ಘ ಜೀವನಾಭಿಪ್ರಾಯದಲ್ಲಿ ತಳೆಯಬಹುದಾದ ಶಾಂತತೆಯನ್ನು ನೀಡುವುದು.

ಆದುದರಿಂದ ಬೌದ್ಧ ಬೋಧನೆಗಳು ಮರುಜನ್ಮದ ಬಗ್ಗೆ ಹಲವಾರು ವೈಜ್ಞಾನಿಕ ನಿದರ್ಶನಗಳನ್ನು ಇದರ ಬೆಂಬಲಕ್ಕಾಗಿ ಪಡೆದಿದೆ. ಇದು ನ್ಯಾಯಬದ್ಧ ನಿರ್ವಹಣೆಯನ್ನು ಪಡೆದಿದೆ. ಇದು ಈ ಬಗೆಯ ಪ್ರಶ್ನೆಗಳಿಗೆ ಉತ್ತರ ನೀಡುವ ದೀರ್ಘಕಾಲಾವಧಿಯ ಉತ್ತರಗಳನ್ನು ಆಸ್ತಿಕರು ಮತ್ತು ಪಸ್ತ್ರದೇಹ ಸಂಬಂಧಿಸಿದವರು ಕೇಳುವ ಪ್ರಶ್ನೆಗಳಿಗೂ ಉತ್ತರ ವೀಯುವುದು. ಇದು ನಮ್ಮನ್ನು ಸಂತೋಷವಾಗಿಟ್ಟಿರುವುದು. ನಿಮ್ಮ ಈ ಜನ್ಮದಲ್ಲಿ ಮಾಡಿದ ತಪ್ಪುನೆಪ್ಪುಗಳನ್ನು ತಿದ್ದಿಕೊಳ್ಳಲು, ಹಾಗೂ ನೀವು ಸಾಧಿಸಿರುವ ಹಾಗೂ ಇನ್ನೂ ಅಭಿವೃದ್ಧಿಪಡಿಸಲು ಬಯಸುವ ಅನೇಕ ಚತುರತೆ ಮತ್ತು ಸಾಮರ್ಥ್ಯಗಳನ್ನು ವೃದ್ಧಿಸಿ ಕಾರ್ಯಗತಗೊಳಿಸಿಲು ಅವಕಾಶ ವೀಯದೆ ಇರುವ ಸನ್ನಿವೇಶಗಳಿಂದಲೂ ಮತ್ತೂ ಕೆಟ್ಟದ್ದನ್ನೇನು ಆಲೋಚಿಸಬಹುದು. ಭಗವಾನ್ ಬುದ್ಧರ ಬೋಧನೆಯಂತೆ "ನೀವು ಈ ಜನ್ಮದಲ್ಲಿ ನಿರ್ವಾಣವನ್ನು ಪಡೆಯಲಾಗದಿದ್ದರೆ, ಮುಂದಿನ ಜನ್ಮದಲ್ಲಿಯಾದರೂ ಇದನ್ನು ಸಾಧಿಸುವ ಸುವರ್ಣಾವಕಾಶವು ಮರು ಜನ್ಮದಿಂದ ಪಡೆಯುವಿರಿ ಅಥವಾ ಅದು ಮತ್ತೊಂದು ಜನ್ಮದಲ್ಲಿಯಾದರೂ ಸಾಧ್ಯವಾಗುವುದು. ಈ ಜನ್ಮದಲ್ಲಿ ತಪ್ಪನ್ನು ಮಾಡಿದ್ದರೆ ಮುಂದಿನ ಜನ್ಮದಲ್ಲಿ ಅವುಗಳನ್ನು ತಿಳಿದುಕೊಳ್ಳಬಹುದು. ನಿಮ್ಮ ತಪ್ಪುಗಳಿಂದ ಅನೇಕ ಉತ್ತಮ ಭಾವನೆಗಳನ್ನು ಕಲಿಯಬಲ್ಲಿರಿ. ನೀವು ಈ ಜನ್ಮದಲ್ಲಿ ಸಾಧಿಸಲಾಗದೇ ಇದ್ದುದನ್ನು ಅಥವಾ ನಿರ್ವಹಿಸಲಾಗದಿದ್ದುದನ್ನು ಮುಂದಿನ ಜನ್ಮದಲ್ಲಿ ಪಡೆಯಬಹುದು. ಇದೆಂತಹ ಸರ್ವೋತ್ತಮ ಬೋಧನೆಯಾಗಿದೆಯಲ್ಲವೇ !

—0೧—

## 6. ಬುದ್ಧಿವಂತಿಕೆ ಮತ್ತು ದಯೆ (ಕನಿಕರ)

ಪ್ರಶ್ನೆ :— ಬೌದ್ಧೀಯರು, ಅನೇಕ ಸಂದರ್ಭಗಳಲ್ಲಿ ಬುದ್ಧಿವಂತಿಕೆ ಮತ್ತು ದಯೆ (ಕನಿಕರ)ಯ ಬಗ್ಗೆ ಮಾತನಾಡುವರು. ಈ ಎರಡು ಶಬ್ದಗಳು ಯಾವ ಯಾವ ಅರ್ಥಗಳನ್ನು ಕೊಡುತ್ತವೆ ?

—ಹಲವು ಮತಾವಲಂಬಿಗಳು ದಯೆ ಅಥವಾ ಪ್ರೀತಿ ಎಂಬುದು

ಅತ್ಯುತ್ತಮ ಆಧ್ಯಾತ್ಮಿಕ (ಚೈತನ್ಯ) ಶಬ್ದಭಾವಗಳಿಂದು ಗುರುತಿಸುವರಾದರೂ ಅವರು ಯಾವ ಬುದ್ಧಿವಂತಿಕೆಯನ್ನು ವೃದ್ಧಿಪಡಿಸರು. ಆದುದರಿಂದ ನೀವು ಉತ್ತಮ ಹೃದಯವಿರುವ ಅವಿವೇಕಿಯಾಗಿ ಇವನ್ನು ಕೊನೆಗಾಣಿಸುವಿರಿ ; ಅತಿದಯಾಳು ವ್ಯಕ್ತಿ ಆದರೆ ಅಲ್ಪ ಅಥವಾ ಏನೂ ತಿಳಿಯದಿರುವವನು. ವಿಜ್ಞಾನ ಅಥವಾ ಇನ್ನೂ ಬೇರೆ ವಿಧಗಳ ಬುದ್ಧಿವಂತಿಕೆಯನ್ನು, ಎಲ್ಲಾ ಬಗೆಯ ಮನೋವಿಕಾರವನ್ನು ಕನಿಕರವೂ ಕೂಡಿದಂತೆ ಅವನ್ನು ಬಹು ದೂರವಿಟ್ಟಾಗಲೇ ಒಲಿಸಿ ಬಲಿಸಿಕೊಳ್ಳಲು ಸಾಧ್ಯ. ಪರಿಣಾಮವೇನೆಂದರೆ, ವಿಜ್ಞಾನವು, ಫಲಿತಾಂಶಗಳಿಗಾಗಿ ಪೂರ್ವನಿಯೋಜಿತಗೊಂಡಿದೆ. ಮತ್ತು ವಿಜ್ಞಾನವು ಮಾನವನ ಸೇವೆಗೆಂಬುದನ್ನು ಮರೆತಿದೆ, ಅದರಲ್ಲೂ ಮಾನವನನ್ನು ನಿಯಂತ್ರಿಸಲಾಗದೆ ಅವನನ್ನು ತನ್ನ ಪ್ರಭಾವದಡಿಯಲ್ಲಿರಿಸಿದೆ. ಹಾಗಿಲ್ಲದಿದ್ದರೆ, ಈ ವಿಜ್ಞಾನಿಗಳು ಅಣುಬಾಂಬ್‌ಗಳನ್ನು, ವಿಷಕ್ರಿಮಿ ಬಳಕೆಯುದ್ಧಗಳನ್ನು ಮತ್ತು ಇದೇ ಬಗೆಯ ಮಾರತಂತ್ರಗಳ ವೃದ್ಧಿಗೆ ತಮ್ಮ ಬುದ್ಧಿಚಾತುರ್ಯತೆಗಳನ್ನು ಬಳಸುತ್ತಿರಲಿಲ್ಲ. ಮತಧರ್ಮಗಳು, ಸದಾ ಸಕಾರಣ ಮತ್ತು ಬುದ್ಧಿಚಾತುರ್ಯತೆಯನ್ನು ಮನೋವಿಕಾರದ ಶತ್ರುಗಳಾದ ಪ್ರೀತಿ ಮತ್ತು ನಂಬಿಕೆಗಳಿಂದು ಗುರುತಿಸಿದೆ. ಮನೋವಿಕಾರವು ಪ್ರೀತಿ ಮತ್ತು ನಂಬಿಕೆಗಳು ಸಕಾರಣ ಮತ್ತು ಕಾರ್ಯ ಚತುರತೆಯ ಶತ್ರುಗಳೆಂದು ವಿಜ್ಞಾನವು ಗುರುತಿಸುವುದು. ಈ ವಿಜ್ಞಾನವು ಪ್ರಬುದ್ಧಿಸಿದಂತೆಲ್ಲಾ ಮತಧರ್ಮಗಳು ಕೆಳಗಿಳಿಯುತ್ತದೆ. ಬೌದ್ಧೀಯತೆ ಧರ್ಮಗಳು. ನೀವು ಸಮತೋಲನದ ಭಾವಜೀವನನ್ನು ತಳೆಯಲು ಹಾಗೂ ವೈಯಕ್ತಿಕತೆಯನ್ನೂ ಗುರುತಿಸಿಕೊಳ್ಳಲು, ನೀವು ಬುದ್ಧಿವಂತಿಕೆ ಮತ್ತು ದಯೆಯನ್ನು ಬಲಪಡಿಸಿಕೊಳ್ಳಬೇಕು. ಇದು ಸ್ವಸಿದ್ಧಾಂತ ಭಾವನೆ ಹೊಂದಿಲ್ಲವಾದ್ದರಿಂದಲೂ, ಅನುಭವಾಮೃತದ ಪರಾಕಾಷ್ಠತೆ ಪಡೆದಿರುವುದರಿಂದಲೂ, ವಿಜ್ಞಾನಪ್ರಭಾವಗಳಿಗಾಗಿ, ಬೌದ್ಧೀಯತೆಯು ಹೆದರುವ ಅವಶ್ಯಕತೆ ಇಲ್ಲ.

ಪ್ರಶ್ನೆ :— ಬೌದ್ಧೀಯತೆಯ ಪ್ರಕಾರ 'ಬುದ್ಧಿವಂತಿಕೆ' ಎಂಬುದು ಏನು ?

ವಾಸ್ತವಿಕತೆಯಲ್ಲಿ ಪ್ರಾಪಂಚಿಕ ಎಲ್ಲಾ ಚಮತ್ಕಾರಗಳು, ಅಪೂರ್ಣ, ನಶ್ವರ ಮತ್ತು ಸ್ವಯಂತನವನ್ನು ಪಡೆದಿಲ್ಲವೆಂಬುದನ್ನು ತಿಳಿಯುವುದೇ ಬುದ್ಧಿವಂತಿಕೆಯ ಪ್ರಥಮ ಮಟ್ಟದ ಅರಿವು. ಈ ತಿಳುವಳಿಕೆಯು ಸರ್ವಭೇದಗಳ ವಿಮುಕ್ತತೆ ನೀಡುವುದು ಮತ್ತು ಅತ್ಯುತ್ತಮ ರಕ್ಷಣೆ ಮತ್ತು ಸಂತೋಷದೆಡೆಗೆ ಸಾಗಿಸುವುದು. ಅದನ್ನೇ ನಿರ್ವಾಣ

ವೆನ್ನುವರು. ಆದರೆ ಭಗವಾನ್ ಬುದ್ಧರ ಈ ಮಟ್ಟದ ಬುದ್ಧಿವಂತಿಕೆಯು ಬಗ್ಗೆ ಹೆಚ್ಚಿನ ಸಂಭಾಷಣೆ ನೀಡರು. ಇದು ಬುದ್ಧಿವಂತಿಕೆಯಾಗಲಾರದು ನಾವು ಕೇಳಿದುದನ್ನು ನಂಬುವುದಾದರೆ. ನಿಜವಾದ ಬುದ್ಧಿವಂತಿಕೆ ಎಂದರೆ, ನಾವೇ ಸ್ವತಃ ನೇರವಾಗಿ ನೋಡಿ ಅರಿತುಕೊಳ್ಳುವುದು. ಈ ಹಂತದಲ್ಲಿ ಬುದ್ಧಿವಂತಿಕೆಯು, ಮನಸ್ಸನ್ನು ತೆರೆದಿಟ್ಟುಕೊಂಡಿರುವುದು ಮತ್ತು ಅದನ್ನು ಮುಚ್ಚಿಡಬಾರದು, ಸದ್ಭಾವನೆಗಳನ್ನು ಗಮನವಿಟ್ಟು ಕೇಳುವುದು ಮತ್ತು ಪರಮತನಿಂದಕನಾಗಬಾರದು. ನಮ್ಮ ನಂಬಿಕೆಗಳನ್ನು ವಿರೋಧಿಸುವುದನ್ನು ಅತಿ ಚಾಕಚಕ್ಯದಿಂದ ಪರೀಕ್ಷಿಸಬೇಕು ಅದಕ್ಕೆ ಬದಲಾಗಿ ನಮ್ಮ ತಲೆಯನ್ನು ಮರಳಲ್ಲಿ ಹೂತುಕೊಳ್ಳಬಾರದು. ಯಾವತ್ತೂ ಸದ್ಭಾವನೆ ಬೆಳವಣಿಗೆಯನ್ನು ಅಸೂಯೆ ಮತ್ತು ಭಿನ್ನಭಾವನೆ ತೊರೆದು ಬೆಳಸಬೇಕು ; ಆತುರದ ಅಭಿಪ್ರಾಯ ತಳೆಯುವ ಬದಲು ಕಾಲವನ್ನು ಕಳೆದು ತೀರ್ಮಾನಿಸಬೇಕು. ಭಾವೋದ್ವೇಗಳಿಂದ ನಮಗೆ ದೊರೆತದನ್ನು ಆತುರವಾಗಿ ಒಪ್ಪಿಕೊಳ್ಳಬಾರದು. ನಮಗೆ ಒಪ್ಪಿಸಿದ ಅಭಿಪ್ರಾಯಗಳು ನಮ್ಮ ನಂಬಿಕೆಗಳಿಗೆ ವಿರೋಧವಾಗಿದ್ದರೂ ಅವು ಉತ್ತಮವೆಂದು ತಿಳಿದರೆ ಒಪ್ಪಿಕೊಳಬೇಕು. ಇವನ್ನೆಲ್ಲಾ ಅನುಸರಿಸುವ ವ್ಯಕ್ತಿಯು ನಿಜವಾಗಿಯೂ ಬುದ್ಧಿವಂತನು ಮತ್ತು ಕೊನೆಗೆ ಸೂಕ್ತವಾದ ತಿಳಿವಳಿಕೆಯನ್ನು ಸಕಾಲದಲ್ಲಿ ಪಡೆಯಬಲ್ಲನು. ಹೇಳಿದುದನ್ನು ಹಾಗೆಯೇ ನಂಬುವುದು ಅತಿ ಸುಲಭ. ಆದರೆ ಬೌದ್ಧೀಯ ವಿಧಾನಗಳ ನಂಬಿಕೆಗಳಿಗೆ, ಧೀಮಂತಿಕೆ, ಸಹನೆ ಸಮ್ಮಿಳನತೆ ಮತ್ತು ಬುದ್ಧಿ ಚಾತುರ್ಯತೆಯ ಸೂಕ್ತತೆಗಳು ಬೇಕು.

ಪ್ರಶ್ನೆ :— ಕೇವಲ ಕೆಲವು ಮಂದಿ ಮಾತ್ರವೇ ಇದನ್ನು ಮಾಡಬಹುದು. ಆದ್ದರಿಂದ ಕೇವಲ ಕೆಲವು ಮಂದಿ ಮಾತ್ರವೇ ಅನುಸರಿಸುತ್ತಿರುವುದಾದರೆ, ಇದರ ಔಚಿತ್ಯವೇನು ?

— ಇಂದಿಗೂ ಸರ್ವರೂ ಈ ಬೌದ್ಧೀಯತೆಯನ್ನು ಒಪ್ಪಿಕೊಳ್ಳಲಾರರೆಂಬುದು ಸತ್ಯ. ಆದರೆ, ಅಪ್ರಮಾಣಿಕತೆಯ ಧರ್ಮವನ್ನು ಬೋಧಿಸಿ, ಸರ್ವರನ್ನು ಆ ಮತದೆಡೆಗೆ ಆಕರ್ಷಿಸುವ ಸಾಹಸವನ್ನು ಮಾಡಲಾಗದು, ಅದು ಹುಚ್ಚು ಸಾಹಸ ಮತ್ತು ಅಪಹಾಸ್ಯವಾಗುವುದು. ಹಾಗೆಯೇ ಬೌದ್ಧ ಧರ್ಮಗಳು ಸತ್ಯ ಸಂರಕ್ಷಣೆಗೆ ಮೀಸಲಾದುವು, ಇವನ್ನು ಪ್ರತಿಯೊಬ್ಬರೂ ಈಗ ಅರಿಯಲಾರದವರಾದರೂ ಅವರೆಲ್ಲರೂ ತಮ್ಮ ಮುಂದಿನ ಜನ್ಮದಲ್ಲಾದರೂ ಇದರ ತಿಳಿವಳಿಕೆಯನ್ನು ಹೊಂದುವರು, ಅಂತೆಯೇ ಇಂದು ಹೆಚ್ಚಿನ ಸಂಖ್ಯೆ ಜನರು, ಹಲವೇ ಉತ್ತಮ ಬೋಧನೆ

ಗಳು ಮತ್ತು ನೀತಿಯುತ ಉತ್ತೇಜನ ಪಡೆದವರು. ಈಗ ಈ ತಿಳಿವಳಿಕೆಯು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿರುವರು. ಈ ಕಾರಣ ದಿಂದ, ಬೌದ್ಧೀಯರು, ಸರಳವಾಗಿಯೂ ಸೌಮ್ಯ ಮತ್ತು ಶಾಂತತೆಯಿಂದ ಈ ಧರ್ಮದಲ್ಲಿನ ಅಂತರ್ಯದೃಷ್ಟಿಯನ್ನು ನಡೆಸಲು ಉಳಿದವರೆಲ್ಲರೊಡನೆ ಸಹಕರಿಸಿ ಹಂಚಿಕೊಳ್ಳುತ್ತಿರುವರು. ಭಗವಾನ್ ಬುದ್ಧರು ದಯಾಪರರಾಗಿ ನಮಗೆ ಈ ಧರ್ಮಗಳನ್ನು ಬೋಧಿಸಿದರು. ನಾವು ಅದನ್ನೇ, ಅದೇ ದಯೆಯಿಂದ ಇತರರಿಗೆ ಬೋಧಿಸುವೆವು.

ಪ್ರಶ್ನೆ :— ಹಾಗಾದರೆ ನಾವು ಈಗ ದಯೆಯ ಬಳಿ ಬಂದೆವು. ಬೌದ್ಧೀ ಯತೆಯ ಪ್ರಕಾರ ದಯೆ ಎಂಬುದೇನು ?

—ಬುದ್ಧಿವಂತಿಕೆಯು ಪ್ರಾಜ್ಞತೆಯನ್ನು ಹೇಗೆ ಅಥವಾ ಗ್ರಾಹ್ಯಕ ಭಾವವನ್ನು ಹೇಗೆ ಒಂದುಗೂಡಿಸುವುವೋ ಹಾಗೆ ಅದು ಅವರವರ ಪ್ರತಿಭೆಯನ್ನೂ ತೋರಿಸುತ್ತದೆ, ಹಾಗೆಯೆ ದಯೆ ಎಂಬುವುದು ಭಾವೈಕ್ಯತೆ ಭಾಗ ಅಥವಾ ಅಂತರ್ಯಾನುಭವಗಳನ್ನು ಸೂಚಿಸುತ್ತದೆ. ಬುದ್ಧಿ ವಂತಿಕೆಯ ಹಾಗೆ, ಈ ದಯೆಯೆಂಬುದು ಮಾನವನ ಒಂದು ಅಂತರ್ಯ ಭಾವ, ಕನಿಕರ ಅಥವಾ 'ಕಂಫ್ಯಾಷನ್' ಎಂಬುದು ಎರಡು ಶಬ್ದಗಳಿಂದಾ ಗಿದೆ, ಕೊ (Co) ಅಂದರೆ ಜೊತೆಗೆ ಮತ್ತು ಫ್ಯಾಷನ್ ಎಂದರೆ ಮಹತ್ವ ಭಾವನೆ ಎಂಬುದು. ಹಾಗಾದರೆ ಇಷ್ಟೇ ಅರ್ಥವೇ ಕಂಫ್ಯಾಷನ್ ಎಂಬು ದಕ್ಕೆ ತೊಂದರೆಗೊಳಗಾಗಿರುವವರನ್ನು ಕಂಡರೆ ನಾವು ನೊಂದುಕೊಳ್ಳು ತ್ತೇವೆ. ಅದು ನಮ್ಮದೆಂದೇ ತಿಳಿವೆವು. ಆಗ ನಾವು ಅದರ ನಿವಾರಣೆಗೆ ಪ್ರಯತ್ನಿಸುವೆವು ಅಥವಾ ಅದನ್ನು ಕಡಿಮೆಮಾಡಲು ಯತ್ನಿಸುವೆವು. ಇದನ್ನೇ ಕಂಫಾಷನ್ ಅಥವಾ ದಯೆ ಎನ್ನುವೆವು. ಎಲ್ಲಾ ಒಳ್ಳೆಯ ಮಾನವರೂ ಆದರಲ್ಲಿ ಬೌದ್ಧೀಯರೆಲ್ಲರೂ ಹಂಚಿಕೊಳ್ಳಬಹುದಾದ, ಇತರರಿಗೆ ಸಂತಸವೀಯುವ, ದಯಾಳುತನದ, ಅದರ ಸಂಬಂಧ ಬೆಳಸು ವುದು, ಅದಕ್ಕಾಗಿ ಗಮನಕೊಡುವುದು-ಇವೆಲ್ಲವೂ ಆ ದಯೆ, ಕನಿಕರದಲ್ಲಿ ಅಡಗಿವೆ. ದಯೆಯುಳ್ಳ ಜನರು, ಇತರರ ಪ್ರೀತಿ ಮತ್ತು ಹಿತವನ್ನು ತೆರೆಯುವುದು. ಅದು ತನ್ನ ಮೂಲವನ್ನು ಅವನಲ್ಲಿರುವ ಪ್ರೀತಿ ಮತ್ತು ಹಿತಾಶಕ್ತಿಗೆ ಅನುಗುಣವಾಗಿರುವುದು. ನಾವು ನಮ್ಮನ್ನು ಚೆನ್ನಾಗಿ ಅರಿತುಕೊಂಡಾಗುತ್ತದೆ. ಇತರರನ್ನೂ ಅರಿಯಬಹುದು. ನಮಗೆ ಅತ್ಯುತ್ತಮವಾದುದು. ಇತರರಿಗೂ ಅತ್ಯುತ್ತಮವೇ. ನಾವು ನಮ್ಮನ್ನು ಅರಿತುಕೊಳ್ಳಬಲ್ಲವರಾದರೆ, ಆಗ ಇತರರನ್ನೂ ಅರಿಯಬಲ್ಲೆವು. ಹೀಗೆ ಬೌದ್ಧೀಯರಲ್ಲಿ ಯಾರೊಬ್ಬರಲ್ಲಿ ವೃದ್ಧಿಸುವ ಆಧ್ಯಾತ್ಮಿಕ ಬೆಳವಣಿಗೆಯ

ತಾನೇ ತಾನಾಗಿ ಇತರರಲ್ಲೂ ಅದನ್ನು ರೂಢಿಸಿಕೊಳ್ಳುವುದಕ್ಕೆ ಸಹಾಯಕ. ಭಗವಾನ್ ಬುದ್ಧರ ಜೀವನ ಚರಿತ್ರೆಯು ಇದನ್ನು ಸಾಕ್ಷೀಕರಿಸಿದೆ. ಅವರು ಆರು ವರ್ಷಗಳ ಹೋರಾಟದಿಂದ ತಮ್ಮ ಅಭಿವೃದ್ಧಿಯನ್ನು ಪಡೆದವರು, ಆನಂತರ ಉಳಿದ ಜೀವನವನ್ನೆಲ್ಲಾ ಇತರರ ಒಳಿತಿಗಾಗಿಯೇ ನಿಯೋಗಿಸಿದರು. ಇಡೀ ಮಾನವರೆಲ್ಲರಿಗೂ ವಿನಿಯೋಗಿಸಿದರು.

ಪ್ರಶ್ನೆ :— ನಮಗೆ ನಾವು ಸಹಾಯ ಪಡೆದನಂತರ, ನಾವು ಇತರರಿಗೆ ಹೆಚ್ಚು ಉಪಕಾರಿಗಳಾಗುವೆವು ಎಂದು ಹೇಳಿದಿರಿ, ಇದು ಸ್ವಲ್ಪ ಸ್ವಾರ್ಥವಾಗುವುದಿಲ್ಲವೇ ?

—ನಾವು ಪರರ ಹಿತಚಿಂತನೆಮಾಡುವೆವು, ಇತರರಿಗೆ ಇದು ಪ್ರಥಮ ಸಂಬಂಧದ್ದು, ಇದು ಸ್ವಾರ್ಥಕ್ಕೆ ವಿರುದ್ಧ, ಬೇರೆಯವರಿಗಿಂತ ಮೊದಲೇ ಸಂಬಂಧ ಹೊಂದಿರುವುದು. ಬೌದ್ಧೀಯ ಧರ್ಮಗಳು ಒಬ್ಬರು ಅಥವಾ ಇತರರದೆಂದು ಕಾಣುವುದಿಲ್ಲ. ಆದರೆ ಇವೆರಡಕ್ಕೂ ಸಂಬಂಧಿಸಿದದು, ನ್ಯಾಯಬದ್ಧ ಸಂಬಂಧ ಸ್ವಭಾವವು. ಬೇರೆಯವರ ಉನ್ನತಿಗಾಗಿ ಬಲಿಯುವುವು. ಅಂತೆಯೇ ಇತರರೂ ಸಹ ಮತ್ತೊಬ್ಬರಂತೆಯೇ ಎಂದು ಕಾಣುವರು ಇದೇ ನ್ಯಾಯಸಂಬಂಧದ ದಯೆ. ಎಂಬುದು ಭಗವಾನ್ ಬುದ್ಧರ ಬೋದನೆಯಲ್ಲಿ. ಅತಿ ಸುಂದರವಾದ ಆಭರಣ.

—00—

## 7. ಸಸ್ಯಾಹಾರಿತನ

ಪ್ರಶ್ನೆ :— ಬೌದ್ಧೀಯರು ಶುದ್ಧ ಸಸ್ಯಾಹಾರಿಗಳಾಗಿರಬೇಕಲ್ಲವೇ ?

....ಇದು ಅತ್ಯವಶ್ಯಕವೇನಲ್ಲ. ಭಗವಾನ್ ಬುದ್ಧರು ಸಸ್ಯಾಹಾರಿಯಾಗಿರಲಿಲ್ಲ. ಅವರು ತನ್ನ ಅನುಯಾಯಿಗಳಿಗೆ ಸಸ್ಯಾಹಾರಿಗಳಾಗಿರಿ ಎಂದು ಬೋಧಿಸಲಿಲ್ಲ ಮತ್ತು ಇಂದಿಗೂ ಸಹ ಉತ್ತಮ ಬೌದ್ಧೀಯರಲ್ಲಿ ಹಲವರು ಸಸ್ಯಾಹಾರಿಗಳಲ್ಲ.

ಪ್ರಶ್ನೆ : ನೀವು ಮಾಂಸಾಹಾರಿಗಳಾದರೆ ಅಪ್ರತ್ಯಕ್ಷವಾಗಿ ನೀವು ಪ್ರಾಣಿಹಿಂಸೆಗೆ ಜವಾಬ್ದಾರರು. ಇದು ನಿಮ್ಮ ಪ್ರಥಮ ಸೂತ್ರದ ಉಲ್ಲಂಘನೆಯಲ್ಲವೇ ?

—ನಾವು ಮಾಂಸಾಹಾರಿಗಳಾದರೆ, ನೀವು ಅಪ್ರತ್ಯಕ್ಷವಾಗಿ ಮತ್ತು ಸ್ವಲ್ಪಮಟ್ಟಿಗೆ ಪ್ರಾಣಿಹಿಂಸೆಗೆ ಜವಾಬ್ದಾರರು. ಆದರೆ, ಇದೇ ವಿಷಯವು ನೀವು ಸಸ್ಯಾಹಾರಿಯಾಗಿದ್ದರೂ ನಿಜವಾಗುವುದು. ವ್ಯವಸಾಯಗಾರನು

ಕ್ರಿಮಿನಾಶಕಗಳನ್ನು ಹಲವು ಕ್ರಿಮಿವಿಷಗಳನ್ನು ಬೆಳೆಯ ಮೇಲೆ ಚೆಲ್ಲುವನು, ಅದರಿಂದ ಬಂದ ಸಸ್ಯಗಳೇ ನಮಗೆಲ್ಲಾ ಆಹಾರವಾಗುವುವು. ಅಲ್ಲದೆ, ಕೊಂದ ಅನೇಕ ಪ್ರಾಣಿಗಳ ಚರ್ಮವು ನಿಮ್ಮ ಸೊಂಟಪಟ್ಟಿ ಅಥವಾ ಕೈಚೀಲಗಳು, ಎಣ್ಣೆ, ಸೋಪು ಮುಂತಾದ ಅನೇಕ ಸಹಪತ್ರವಸ್ತುಗಳು ಈ ಪ್ರಾಣಿಹಿಂಸೆಯಿಂದಾಗುವುವು. ಹೀಗೆ, ನಮ್ಮ ಜೀವನವು, ಇತರೇ ಪ್ರಾಣಿಗಳನ್ನು ಕೊಲ್ಲದೆ ನಡೆಸಲು ದುರ್ಬರವಾಗುತ್ತದೆ. ಇದೊಂದು ಮೊದಲನೆಯ ಸತ್ಯಾರ್ಥಸೂತ್ರಕ್ಕೆ ಉದಾಹರಣೆ. ಸಾಮಾನ್ಯವಾಗಿ ಜೀವಿಸುವುದೇ ಕೇವಲ ಸಂಕಟಾನುಭವ ಮತ್ತು ಅಸಂತೃಪ್ತಿಗೆ ಕಾರಣ. ನೀವು ಇದರ ಪ್ರಥಮ ಸೂತ್ರ ಪ್ರತಿಜ್ಞೆಯನ್ನು ಸ್ವೀಕರಿಸುವಾಗ, ಪ್ರಾಣಿ ಹಿಂಸೆಯನ್ನು ನೇರವಾಗಿ ಮಾಡುವುದನ್ನು ತೊರೆಯುವೆನು ಎಂದಲ್ಲವೇ ?

ಪ್ರಶ್ನೆ :— ಮಹಾಯಾನ ಬೌದ್ಧೀಯರು ಮಾಂಸಾಹಾರಿಗಳಲ್ಲ, ಇದು ನಿಜವೇ ?

—ಇದು ಸರಿಯಲ್ಲ. ಚೀಣಾದೇಶದ ಮಹಾಯಾನ ಬೌದ್ಧೀಯ ತತ್ವವು ಸಸ್ಯಾಹಾರಿಗಳಾಗಿರಬೇಕೆಂದೇ ಬಹಳ ಒತ್ತಾಯ ಹೇರಿದೆಯಾದರೂ ಬೌದ್ಧ ಸನ್ಯಾಸಿಗಳೂ ಮತ್ತು ಸಾಧಾರಣ ಬೌದ್ಧರು, ಹೆಣ್ಣುಮಕ್ಕಳು ಈ ಗುಂಪಿಗೆ ಸೇರಿದವರು ಮತ್ತು ಸಂಪ್ರದಾಯಕ ಜಪಾನ್ ಮತ್ತು ಟಿಬೆಟ್ ಬೌದ್ಧರು ಸಾಮಾನ್ಯವಾಗಿ ಮಾಂಸಾಹಾರಿಗಳು.

ಪ್ರಶ್ನೆ :— ಹೀಗಿದ್ದರೂ, ಬೌದ್ಧೀಯರು ಸಸ್ಯಾಹಾರಿಗಳಾಗಿರುವುದೇ ಶ್ರೇಷ್ಠವೆಂದು ನಾನು ಆಲೋಚಿಸುತ್ತೇನೆ. ತಾವೇನು ಹೇಳುವಿರಿ ?

—ಕಟ್ಟುನಿಟ್ಟಿನ ಸಸ್ಯಾಹಾರಿಯೊಬ್ಬನು ಬೌದ್ಧೀಯನು, ಆದರೆ ಅವನು ಸ್ವಾರ್ಥಿ, ಅನ್ಯಾಯಸ್ಥ ಮತ್ತು ಹೀನಭಾವನೆಯುವನಾಗಿರುವನು. ಮತ್ತೊಬ್ಬ ಬೌದ್ಧೀಯನು ಸಸ್ಯಾಹಾರಿಯಲ್ಲ, ಆದರೆ ಇತರರ ಬಗ್ಗೆ ಯಾವತ್ತೂ, ಅಪಾರ ಆಸಕ್ತಿಯುಳ್ಳವನು, ನ್ಯಾಯಸ್ಥ, ಧಾರಾಳತ್ವದವನು ಮತ್ತು ದಯಾಳು ಆಗಿರುವನು. ಈರ್ವರಲ್ಲಿ ಯಾವನು ಉತ್ತಮ ಬೌದ್ಧೀಯನಾಗುವನು ?

ಪ್ರಶ್ನೆ :— ಇವರಲ್ಲಿ ನ್ಯಾಯಸ್ಥ ಮತ್ತು ದಯಾಳು ಬೌದ್ಧೀಯ ಉತ್ತಮನಲ್ಲವೇ ?

—ಏಕೆ ?

ಪ್ರಶ್ನೆ :— ಏಕೆಂದರೆ, ಈ ನಡವಳಿಕೆಯು ಬೌದ್ಧೀಯನು ನ್ಯಾಯವಾಗಿಯೇ ಒಳ್ಳೆಯ ಹೃದಯುದವನಾಗರಬೇಕಾಗಿರುವುದರಿಂದಲ್ಲವೇ ?

ಸತ್ಯವಾಗಿಯೂ, ಮಾಂಸಾಹಾರಿಯಾಗಿದ್ದರೂ ಹೃದಯವು ಪರಿಶುದ್ಧವಾಗಿಟ್ಟುಕೊಂಡಿರುವವನು ಮತ್ತೊಬ್ಬನು ಮಾಂಸಾಹಾರಿಯಲ್ಲದಿದ್ದರೂ, ಅಶುದ್ಧಹೃದಯಿಯಾಗಿರುವವನು. ಬೌದ್ಧೀಯ ಧರ್ಮಬೋಧನೆಗಳನ್ನು ಕಾಣಬರುವುದು. ಅತಿ ವೈಶಾಲ್ಯ ಹಾಗೂ ಪರಿಶುದ್ಧ ಹೃದಯವನ್ನು ಹೊಂದಬೇಕೆಂಬುದನ್ನೇ ಕಾಣುವೇ ಹೊರತು ನೀವು ತಿನ್ನುವ ಆಹಾರ ಬಗ್ಗೆಯಲ್ಲ. ಅನೇಕ ಬೌದ್ಧೀಯರು ಮಾಂಸಹಾರಿಯಾಗಿರದಂತೆ ಹೆಚ್ಚಿನ ಎಚ್ಚರಿಕೆ ವಹಿಸುವರು. ಆದರೆ ಸ್ವಾರ್ಥಿಯಾಗದಿರಲು ಯಾವ ಆಸಕ್ತಿ ಇಲ್ಲ. ಅಂತೆಯೇ ಅನ್ಯಾಯಸ್ಥ, ಕ್ರೂರತ್ವ ಅಥವಾ ಅಸೂಯೆಯ ಬಗ್ಗೆಯೂ ಸಹ. ಅವರು ತಮ್ಮ ಆಹಾರಾಭ್ಯಾಸ, ಬದಲಾಯಿಸಲು ಕಷ್ಟಪಡಬೇಕಾಗಿಲ್ಲ. ಆದರೆ ತಮ್ಮ ಹೃದಯ ವೈಶಾಲ್ಯತೆಯ ಬದಲಾವಣೆಯ ಬಗ್ಗೆ ಅವರಿಗೆ ಬಲವಿರಬೇಕು. ಅದು ಸುಲಭ ಸಾಧ್ಯವಲ್ಲ. ನೀವು ಸಸ್ಯಾಹಾರಿಯೇ ಅಥವಾ ಅಲ್ಲವೇ ಎಂಬುದು ಬೌದ್ಧಧರ್ಮಿಗಳಲ್ಲಿ ಮುಖ್ಯವಲ್ಲ. ಆದರೆ ಅವರು ತಮ್ಮ ಮನಸ್ಸನ್ನು ಹೇಗೆ ಪರಿಶುದ್ಧಗೊಳಿಸಿಕೊಳ್ಳುವರು ಎಂಬುದನ್ನು ಬಹುಮುಖ್ಯ ಸೂತ್ರವಾಗಿ ಪರಿಗಣಿಸುತ್ತದೆ.

—00—

## 8. ಒಳ್ಳೆಯ ಅದೃಷ್ಟ ಮತ್ತು ವಿಧಿ

ಪ್ರಶ್ನೆ :— ಮಾಯಾಮಂತ್ರ ಮತ್ತು ಭವಿಷ್ಯನುಡಿಗಳ ಬಗ್ಗೆ ಬುದ್ಧರು ಏನು ಹೇಳಿರುವರು ?

... ಭಗವಾನ್ ಬುದ್ಧರು ಈ ಅಭ್ಯಾಸಾನುಭವಗಳ ಬಗ್ಗೆ ಅಂದರೆ, ಭವಿಷ್ಯ ನುಡಿಯುವುದು ರಕ್ಷಣೆಗಾಗಿ. ಮಾಯಾ ಮಾಟ ತಂತ್ರಗಳನ್ನು ನೆರವೇರಿಸುವುದು, ಅದೃಷ್ಟತರುವ ಮನೆಕಟ್ಟುವ ಜಾಗನಿರ್ಣಯ, ಉತ್ತಮ ದಿನ ಕಾಲಗಳನ್ನು ನಿರ್ಧರಿಸಿ ನಡೆಯುವುದು ಅಪ್ರಯೋಜಕ ಮೂಢನಂಬಿಕೆ ಮತ್ತು ಈ ಭಾವನೆಗಳನ್ನು ತನ್ನ ಅನುಯಾಯಿಗಳು ಯಾವ ಕಾರಣಕ್ಕೂ ಅನುಸರಿಸಬಾರದೆಂಬ ಸೂಚನೆಯಿತ್ತಿರುವುದಲ್ಲದೆ, ಅವುಗಳನ್ನು ಸಂಪೂರ್ಣ ಬಹಿಷ್ಕರಿಸಿದ್ದಾರೆ. ಅವರು ಈ ಎಲ್ಲಾ ಚಟುವಟಿಕೆಗಳನ್ನು ''ಅತಿ ಕೆಳಮಟ್ಟದ ಕಲೆ'', ಎಂದು ಕರೆದಿದ್ದಾರೆ.

“ಹಲವು ಮತಾವಲಂಬಿಗಳು, ಅವರ ಅತಿ ನಂಬಿಗಾರ್ಹರಾದವರು, ‘ಕೆಳಮಟ್ಟ’ದ ಕೆಲಸಗಳಿಗಾಗಿ ಅರ್ಪಿಸುವ ಆಹಾರವಸ್ತುಗಳಿಂದ ಸುಖ ಜೀವನ ನಡೆಸುವರು ; ಹಸ್ತಸಾಮುದ್ರಿಕಶಾಸ್ತ್ರ ಬಳಕೆ, ಮಾಂತ್ರಿಕಯಂತ್ರಗಳನ್ನು ದೇವರ ಹೆಸರಲ್ಲಿ ಬಳಸುವುದು, ಸ್ವಪ್ನಫಲಗಳ ವಿವರಣೆ ನೀಡುವುದು, ಒಳ್ಳೆಯ ಅದೃಷ್ಟವನ್ನು ತರಿಸುವ ಕುತಂತ್ರ, ಇದಕ್ಕಾಗಿ ವಿಧಿ ದೇವತೆಯನ್ನು ಪ್ರೇರೇಪಿಸುವುದು. ಅದೃಷ್ಟ ತರುವ ಗೃಹನಿರ್ಮಾಣಗಳ ಉತ್ತಮ ಮನೆನಿವೇಶ ಸೂಚನೆ, ಇಂತಹ ಕೆಳದರ್ಜೆಯ ಕಲೆಯಿಂದ ಹಲವರು ಉತ್ತಮ ಜೀವನ ನಡೆಸುವುದು ಮೊದಲಾದುವನ್ನು ಬೌದ್ಧ ಸನ್ಯಾಸಿ ಗೌತಮರು ಕೆಳದರ್ಜೆವೃತ್ತಿ ಎಂದು ನಿರ್ಧರಿಸಿರುವರು ಮತ್ತು ತಪ್ಪು ವಿಧಾನದ ಜೀವನಗಳಿಕೆ”, ಎನ್ನುವರು.

D. 19-12

ಪ್ರಶ್ನೆ :— ಜನರು ಇಂತಹ ವ್ಯವಹಾರಗಳನ್ನು ಏಕೆ ನಂಬಿ ಅಭ್ಯಸಿಸುವರು ?

—ಏಕೆಂದರೆ, ಆ ಜನರು ಲೋಭತ್ವ ಮತ್ತು ಅಜ್ಞಾನ ಹೊತ್ತಿರುವರು. ಇಂತಹವರು, ಭಗವಾನ್ ಬುದ್ಧರ ಉಪದೇಶಗಳನ್ನು ಅರಿತ ಕೂಡಲೇ ಅವರು ಪರಿಶುದ್ಧದ ಹೃದಯಪಂಕ್ತಿಕೆಯತ್ತ ಗಮನ ಹರಿಸುವರು. ಅಲ್ಲದೆ ಕಾಗದದ ಯಂತ್ರಲೋಹದ ತಾಳಿಗಳು ಮಂತ್ರಪಠಣದಿಂದ ಪವಿತ್ರಗೊಳಿಸಿರುವುದು. ಇವುಗಳನ್ನು ನಂಬದೆ ಶುದ್ಧ ಹೃದಯದತ್ತ ಗಮನವೀಯುವರು. ಭಗವಾನ್ ಬುದ್ಧರ ಉಪದೇಶಗಳು, ನ್ಯಾಯಬದ್ಧವಾದುವು, ದಯಾಳುತನದವು, ಸರಳವಾಗಿ ಅರಿತುಕೊಳ್ಳಬಹುದಾದವು, ನ್ಯಾಯನಿಷ್ಠೆಪರಿಪಾಲನೆ ಮತ್ತು ಇನ್ನೂ ಇತರ ಉತ್ತಮ ನಡವಳಿಕೆಗಳಿಂದ ಕೂಡಿ, ನಿಮಗೆ ಪೂರ್ಣ ಅಭ್ಯುದಯವನ್ನು ಮತ್ತು ಶುದ್ಧರಕ್ಷಣೆಯನ್ನು ನೀಡುವುವು.

ಪ್ರಶ್ನೆ :— ಹೀಗಿದ್ದರೂ, ಕೆಲವು ಅದೃಷ್ಟದ ಮಂತ್ರಗಳು ಸತ್ಯತರುತ್ತವೆಯಲ್ಲವೇ ?

—ಇಂತಹ ಅದೃಷ್ಟಯಂತ್ರಗಳನ್ನು ಮಾರಿ ಜೀವಿಸುವ ಒಬ್ಬ ವ್ಯಕ್ತಿಯನ್ನು ನಾನು ಬಲ್ಲೆನು. ಆತನು, ತನ್ನ ಆ ಯಂತ್ರಗಳ ಬಳಕೆಯಿಂದ ಉತ್ತಮ ಅದೃಷ್ಟ ಭಾಗ್ಯೋದಯ ಮತ್ತು ಆರೋಗ್ಯವು ದೊರೆಯುವುದೆಂಬ ಭರವಸೆಯನ್ನು ತರುವುದು ಖಚಿತವೆಂದು ಭರವಸೆ ನೀಡುವನು. ಅಲ್ಲದೆ ಅಂತಹವರು ಮೂರು ಸಂಖ್ಯೆಗಳನ್ನು ಆರಿಸಿಕೊಳ್ಳಬಲ್ಲರು ಎನ್ನ

ವನು. ಆದರೆ ಅವನು ಇತರರಿಗೆ ಇವನ್ನೆಲ್ಲಾ ಕಲಿಸಬಲ್ಲವನಾಗಿದ್ದು ತನಗೆ ತಾನೆ ಏಕೆ ಅವನ್ನು ಪ್ರಯೋಗಿಸಿಕೊಂಡು ಅಪಾರ ಐಶ್ವರ್ಯವಂತನಾಗಬಾರದು ? ಅವನ ಅದೃಷ್ಟಮಂತ್ರದ ತಾಯಿತಗಳು ನಿಜವಾಗಿಯೂ ಕ್ರಿಯಾತ್ಮಿಸುವುದಾದರೆ, ಅದರಿಂದ ಅವನೇಕೆ ವಾರ ವಾರದ ಲಾಟರಿಗಳಲ್ಲಿ ವಿಜೇತನಾಗಬಾರದು ? ಅಂದರೆ. ಆತನಿಗೆ ಇರುವ ಒಂದೇ ಒಂದು ಅದೃಷ್ಟವೆಂದರೆ, ತಿಳಿಗೇಡಿ ಜನರು ಇವನ ಅದೃಷ್ಟಮಂತ್ರದ ತಾಯಿತಗಳನ್ನು ಕೊಳ್ಳುತ್ತಿರುವುದೇ.

ಪ್ರಶ್ನೆ :— ಅದೃಷ್ಟವೆಂಬುದು ಇದೆಯಾ ?

—ಶಬ್ದಕೋಶವು 'ಅದೃಷ್ಟ'ವೆಂಬುದನ್ನು, ಒಳ್ಳೆಯದು ಅಥವಾ ಕೆಟ್ಟದ್ದಾಗಲೀ ಒಬ್ಬನಿಗೆ ಸಂಭವಿಸುವುದನ್ನು ನಂಬುವುದು, ಹಟವು ಸನ್ನಿವೇಶಗಳಿಂದ ಸಂಭವಿಸಬಹುದಾದ ವಿಧಿ ಅಥವಾ ಅದೃಷ್ಟವೆಂಬುವುದು." ಭಗವಾನ್ ಬುದ್ಧರು ಈ ನಂಬಿಕೆಯನ್ನು ಸಂಪೂರ್ಣ ತಿರಸ್ಕರಿಸುವರು. ಪ್ರತಿಯೊಂದು ಸಂಭಾವನೀಯಗಳು ಒಂದೊಂದು ನಿರ್ದಿಷ್ಟ ಕಾರಣಕ್ಕಾಗಿಯೇ ಸಂಭವಿಸುವುವು. ಆದುದರಿಂದ ಇಂತಹ ಪ್ರತಿಯೊಂದು ಕಾರಣಕ್ಕೂ ಒಂದು ಫಲಿತವಿರುವ ಸಂಬಂಧವಿದೆ. ಖಾಯಿಲೆ ಬೀಳುವುದಕ್ಕೆ ಒಂದು ನಿರ್ದಿಷ್ಟಕಾರಣವಿದೆ. ಅವನು ರೋಗಜೀವಾಣುಗಳ ಸಂಪರ್ಕಪಡೆದಿರಬೇಕು ಮತ್ತು ಆವನ ಶರೀರವು ಈ ರೋಗಜೀವಾಣುಗಳ ಬೆಳವಣಿಗೆಗೆ, ಅದರ ದುರ್ಬಲತೆಯಿಂದ ಆಶ್ರಯ ನೀಡಿರಬೇಕು. ಹೀಗೆ, ಒಂದು ನಿರ್ದಿಷ್ಟವಾದ ಸಂಬಂಧವು ಕಾರಣ ಮತ್ತು ಪ್ರತಿಕ್ರಿಯೆಗಳ ಮಧ್ಯೆ (ರೋಗಾಣುಗಳು ಮತ್ತು ದುರ್ಬಲ ಶರೀರ) ಮತ್ತು ಖಾಯಿಲೆ ರೋಗಾಣುಗಳು ಶರೀರದ ಕೋಶಗಳೊಡನೆ ಬೆರೆತು ಹೋರಾಡಿ ಖಾಯಿಲೆ ತರುವುದು. ಆದರೆ ಯಂತ್ರಗಳಿಂದ ಬರೆದು ಕಟ್ಟಿದ ಕಾಗದ ಅಥವಾ ಲೋಹದ ತಾಯಿತಗಳು ಖಾಯಿಲೆ ನಿವಾರಣೆಗೆ, ಐಶ್ವರ್ಯ ತರುವುದಕ್ಕೆ, ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಕ್ಕೆ ಹೇಗೆ ನೆರವು ನೀಡುವುದು. ಬೌದ್ಧ ಧರ್ಮಗಳು, ಏನೇ ಸಂಭವಿಸಿದರೂ ಅದು ಒಂದು ಕಾರಣದಿಂದಲೇ, ಅದೆಂದೂ ಅದೃಷ್ಟದಿಂದ ಅಥವಾ ವಿಧಿವಿಲಾಸದಿಂದಲ್ಲವೆಂಬುದನ್ನು ಬೋಧಿತ್ತದೆ. ಅದೃಷ್ಟದಲ್ಲಿ ನಂಬಿಕೆ ಇಡುವವರು, ಯಾವುದಾದರೂ ಪಡೆಯುವ ಅಭಿಲಾಷೆಯುಳ್ಳವರೇ. ಅದರಲ್ಲೂ ಹೆಚ್ಚಿನ ಹಣ ಅಥವಾ ಐಶ್ವರ್ಯವನ್ನೇ ಬಯಸುವವರು. ಭಗವಾನ್ ಬುದ್ಧರು, ನಮ್ಮ ಹೃದಯ ಮತ್ತು

ಮನಸ್ಸನ್ನು ಉತ್ತಮವಾಗಿ ವೃದ್ಧಿಸಿಕೊಳ್ಳುವುದೇ ಅತಿ ಪ್ರಮುಖವೆಂದು ಬೋಧಿಸಿರುವರು. ಅವರು ಹೀಗೆ ಹೇಳಿದ್ದಾರೆ.

"ಆಳವಾದ ಅಧ್ಯಯನ ಮತ್ತು ಕುಶಲತೆ,
ಅತ್ಯುತ್ತಮ ತರಬೇತಿ ಮತ್ತು ಸೂಕ್ತ ಶಬ್ದಗಳ ಬಳಕೆ,
ಇದೇ ಅತ್ಯುತ್ತಮ ಅದೃಷ್ಟ

ತಂದೆತಾಯಿಗಳಿಗೆ ಉತ್ತಮ ಸೇವೆ, ಸತಿ ಪುತ್ರರ ಉತ್ತಮ
ಪಾಲನೆ ಮತ್ತು ಸರಳ ಜೀವನ ; ಇವೇ ಉತ್ತಮ ಅದೃಷ್ಟ

ತನ್ನ ಪ್ರತಿಯೊಂದು ಕಾರ್ಯದಲ್ಲೂ ಧಾರಾಳತ್ವ, ನ್ಯಾಯ,
ಬಂಧು ಬಳಗದವರಿಗೆ ನೆರವು ನೀಡುವುದು, ನಿಂದಾರೋಪಗಳಿಂದ
ವಿಮುಕ್ತವಾಗಿರುವುದು ; ಇವೇ ಅತ್ಯುತ್ತಮ ಅದೃಷ್ಟ.

ದುಷ್ಟಕಾರ್ಯ ಚಟುವಟಿಕೆ, ಮಾದಕ ದ್ರವ್ಯಗಳ ಸೇವನೆ ಮತ್ತು
ಲೋಭಗಳಿಂದ ಅತಿ ದೂರವಾಗಿರುವುದು ಮತ್ತು ಸದ್ಗುಣ
ಸಂಪಾದನೆಗೆ ಸದಾ ಹಾತೊರೆಯುವುದು, ಇವೇ ಸರ್ವೋತ್ತಮ
ಅದೃಷ್ಟ

ಪೂಜ್ಯಭಾವ, ನಮ್ರತೆ, ಸಂತೃಪ್ತತೆ, ಕೃತಜ್ಞತೆ ಮತ್ತು ದಮ್ಮ
ಪಠನೆ ಮತ್ತು ಕೇಳುವುದು ; ಇವೇ ಸರ್ವೋತ್ತಮ ಅದೃಷ್ಟ.

Sn. 261-265

—00—

## 9. ಬೌದ್ಧೀಯರಾಗುವಿಕೆ

**ಪ್ರಶ್ನೆ :—** ಇದುವರೆಗೆ ನೀವು ತುಂಬಾ ಹಿತಕರವಾದ ವಿವರಣೆ ನೀಡಿರುವಿರಿ ನಾನು ಹೇಗೆ ಬೌದ್ಧೀಯನಾಗಬಹುದು ?

—"ಉಪಾಲಿ' ಎಂಬುವನು ಒಂದು ಕಾಲದಲ್ಲಿದ್ದನು ಅವನು ಮತ್ತೊಂದು ಧರ್ಮಾನುಯಾಯಿ. ಇವನು ಭಗವಾನ್ ಬುದ್ಧರ ಬಳಿ ಸಾರಿ, ಆತನನ್ನು ವಾದ ವಿವಾದಗಳಿಂದ ಸೋಲಿಸಿ, ಬುದ್ಧರನ್ನು ಬೇರೆ ಧರ್ಮಕ್ಕೆ ಪರಿವರ್ತಿಸಲು ಪ್ರಯತ್ನಿಸಿದನು. ಆದರೆ ಈ ವಾಗ್ವಾದದಲ್ಲಿ ಉಪಾಲಿಯ ಭಾವನೆಗಳು ಸಂಪೂರ್ಣ ಬದಲಾವಣೆಗೊಂಡವು, ಈತನು

ಭಗವಾನ್ ಬುದ್ಧರ ವಿದ್ವತ್ತಿಗೆ ಮಾರುಹೋದನು. ಕೊನೆಗೆ ಉಪಾಲಿಯು ಭಗವಾನ್ ಬುದ್ಧರ ಅನುಯಾಯಿಯಾಗಲು ನಿರ್ಧರಿಸಿದನು. ಆಗ ಭಗವಾನ್ ಬುದ್ಧರು ಹೀಗೆ ಬೋಧಿಸಿರುವರು.

“ಮೊದಲು ನಿನ್ನ ಪ್ರಾಮಾಣ್ಯತೆಯ ಪರೀಕ್ಷೆ ಮಾಡು. ಅತ್ಯುತ್ತಮ ವಿಶ್ಲೇಷಣೆಯು ನಿನ್ನಂತಹ ಜ್ಞಾನವುಳ್ಳವನಿಗೆ ಅತಿ ಶ್ರೇಷ್ಠವಾದುದು.”

ಈಗ ನಾನು ಅತ್ಯಂತ ಹರ್ಷಿತನು ಮತ್ತು ಸಂತೃಪ್ತನು ಏಕೆಂದರೆ, ಭಗವಾನ್‌ರು ನನಗೆ, “ಪ್ರಥಮದಲ್ಲಿಯೇ ಉತ್ತಮ ಶೋಧನೆ ನಡಿಸು” ಎಂದು ಹೇಳಿರುವರು. ಅಲ್ಲದೆ, ಬೇರೆ ಮತ ಪಂಥವರು ನನ್ನನ್ನು ಆ ಧರ್ಮದ ಅನುಯಾಯಿಯಾಗಿ ಪಡೆದಿದ್ದರೆ ಆ ಧರ್ಮದವರು ಆ ನಗರದ ಸುತ್ತಲೂ ಉತ್ತಮ ಭಿತ್ತಿ ಫಲಕಗಳಿಂದ ನನ್ನನ್ನು ಇಡೀ ನಗರದಲ್ಲೆಲ್ಲಾ ಮೆರವಣಿಗೆ ಮಾಡುತ್ತಿದ್ದರು, ಹಾಗೂ ಈ ರೀತಿ ಹೇಳುತ್ತಿದ್ದರು.” “ಉಪಾಲಿಯು ನಮ್ಮ ಧರ್ಮಕ್ಕೆ ಸೇರಿಕೊಂಡರು ಎಂದು.” ಆದರೆ ಈ ನಮ್ಮ ಭಗವಾನರು ನನಗೆ “ಮೊದಲು ಸಂಶೋಧನೆ ನಡೆಸು” ಎಂದು ಹೇಳಿರುವರು. “ಇದು ನಿನ್ನಂತಹ ಹೆಸರಾಂತ ವ್ಯಕ್ತಿಗೆ ಅತಿ ಶೋಭಾಯಮಾನವಾದುದು.

MII 379

ಬೌದ್ಧ ಧರ್ಮದಲ್ಲಿ, ಉತ್ತಮ ತಿಳುವಳಿಕೆಗೆ ಅತಿ ಪ್ರಮುಖ ಸ್ಥಾನ ವಿತ್ತಿರುವರು. ಇಂತಹ ತಿಳಿವಳಿಕೆಯು ಹೆಚ್ಚು ಕಾಲವಾದ ನಂತರವೇ ಗೋಚರಿಸುವುದು. ಆದುದರಿಂದ ನೀವು ತಾತ್ಕಾಲಿಕ ಉದ್ವೇಗದಿಂದ ಈ ಬೌದ್ಧ ಧರ್ಮಗಳಲ್ಲಿ ಒಳಹೊಗಬೇಡಿ. ನಿಮಗೆ ಸಾಕಾಗುವಷ್ಟು ಕಾಲವನ್ನು ತೆಗೆದುಕೊಳ್ಳಿ, ಬೇಕಾದ ಪ್ರಶ್ನೆಗಳನ್ನು ಹಾಕಿರಿ, ಯಾವುದೊಂದನ್ನೂ ಸಂಪೂರ್ಣ ಹಾಗು ಎಚ್ಚರದಿಂದ ವಿಮರ್ಶಿಸಿಕೊಳ್ಳಿ. ಇವಾದ ನಂತರ ನಿಮ್ಮ ತೀರ್ಮಾನವನ್ನು ತೆಗೆದುಕೊಳ್ಳಿರಿ. ಭಗವಾನ್ ಬುದ್ಧರು ಅತಿ ಹೆಚ್ಚಿನ ಸಂಖ್ಯೆಯ ಉಪಾಸಕರನ್ನು ಪಡೆಯಲು ಯಾವ ಕಾತರವನ್ನು ವ್ಯಕ್ತಪಡಿಸಿದವರಲ್ಲ. ಅವರ ಸರ್ವ ಹಿತಾಸಕ್ತಿಯು, ಮಾನವರು ಅವರ ಪ್ರಬೋಧನೆಗಳನ್ನು ತುಂಬಾ ಎಚ್ಚರಿಕೆಯಿಂದ ಸಂಶೋಧಿಸಿ ಮತ್ತು ಸಾಧಕ ಬಾಧಕಗಳೊಡನೆ ಸತ್ಯಾಂಶಗಳನ್ನು ಪರಿಗಣಿದ ಸಿನಂತರವೇ ಇದನ್ನು ಅನುಸರಿಸುವುದೇ ಉತ್ತಮವೆಂದು ಸಾರಿರುವರು.

ಪ್ರಶ್ನೆ :— ನಾನು ಇದೆಲ್ಲವನ್ನು ಪರಿಶೋಧಿಸಿ, ಭಗವಾನ್ ಬುದ್ಧರ ಬೋಧನೆಗಳು ನನಗೆ ಒಪ್ಪಿಗೆಯಾಗಿವೆಯಾದರು, ನಾನು ಬೌದ್ಧೀಯನಾಗಲು ಏನು ಮಾರ್ಗ ?

-- ಒಂದು ಉತ್ತಮ ಬೌದ್ಧ ದೇವಾಲಯ ಅಥವಾ ಬೌದ್ಧೀಯರ ಗುಂಪಿನೊಡನೆ ಸೇರಿಕೊಂಡು, ಅವರಿಗೆ ನೆರವಾಗುವುದು, ಅವರಿಂದ ನಿಮ್ಮ ಆಶ್ರಯ ಪಡೆದುಕೊಳ್ಳುವುದು, ಮತ್ತು ಇನ್ನೂ ಹೆಚ್ಚಿನ ಬೌದ್ಧೀಯ ಧರ್ಮಗಳನ್ನು, ಭಗವಾನ್ ಬುದ್ಧರ ಬೋಧನೆಗಳನ್ನು ಕಲಿತುಕೊಳ್ಳುವುದು ಸಾಧುವಾದುದು. ಹೀಗೆ ನೀವು ಈ ಎಲ್ಲಾ ಬಗೆಯಲ್ಲಿಯೂ ಸಿದ್ಧರಾದಾಗ, ನೀವು ಯಾವಾಗಲಾದರೂ ಸರಿಯೇ, ಸಾಮಾನ್ಯವಾಗಿ ತ್ರಿಚರಣ ಸೂತ್ರ ಪ್ರತಿಜ್ಞೆಯನ್ನು ತೆಗೆದುಕೊಂಡು ಬೌದ್ಧೀಯರಾಗಬಹುದು.

ಪ್ರಶ್ನೆ — ಈ ತ್ರಿಚರಣ ಸೂತ್ರಗಳಾವುವು ?

ಜನರು, ಅತಿ ಕಷ್ಟ ಮತ್ತು ನಿರಾಶ್ರಯರಾದಾಗ, ತಮ್ಮ ರಕ್ಷಣೆ ನೀಡಬಹುದಾದ ಸ್ಥಳ ಅಥವಾ ಆಶ್ರಯಧಾಮಗಳಿಗೆ, ತೆರಳುವರು ಆಗ ಅವರಿಗೆ ಅತ್ಯಾವಶ್ಯಕವಾಗಿ ಸುಖಕರ ಮತ್ತು ಸಂಪೂರ್ಣ ರಕ್ಷಣೆಯ ಅವಶ್ಯಕತೆ ಇರುತ್ತದೆ. ಇಂತಹ ಆಶ್ರಯಧಾಮಗಳು ಅನೇಕವಿವೆ. ಜನರು ಅಸಂತಸರಾಗಿರುವಾಗ ಸಾಮಾನ್ಯವಾಗಿ, ತನ್ನ ಸ್ನೇಹಿತರ ರಕ್ಷಣೆ ಪಡೆಯುವರು : ಜನರು ತುಂಬಾ ಮಾನಸಿಕ ಕ್ಲೇಶಗಳಿಗೆ ಮತ್ತು ಬೆದರಿಕೆಗಳಿಗೆ ತುತ್ತಾದಾಗ, ಅವರು ಮಿಥ್ಯ ಭರವಸೆಗಳ ಮತ್ತು ನಂಬಿಕೆಗಳ ಮರೆ ಹೋಗುವರು. ಅವರ ಮರಣವು ಸನ್ನಿಹಿತವಾದಾಗ, ಶಾಶ್ವತ ಸ್ವರ್ಗವಿದೆ ಎಂದು ನಂಬಿರುವ ಆ ತಾಣದ ಆಶ್ರಯಕ್ಕೆ ಹೋಗಬಹುದು. ಆದರೆ ಭಗವಾನ್ ಬುದ್ಧರ ಪ್ರಕಾರ, ಇವು ಯಾವುವೂ ನೈಜ ಆಶ್ರಯವಾಗಲಾರವು ; ಏಕೆಂದರೆ, ವಾಸ್ತವಾಂಶದಡಿಯಲ್ಲಿ, ಇವು ಯಾವುವೂ ಸುಖ ಸಂತಸ, ರಕ್ಷಣೆ ನೀಡುವುದಿಲ್ಲ.

"ಸತ್ಯವಾಗಿಯೂ ಇವು ಯಾವೂ ಕ್ಷೇಮರಕ್ಷಣೆಗಳಲ್ಲ,
ಅತ್ಯುತ್ತಮವಾದ ಆಶ್ರಯಗಳಲ್ಲ.
ಯಾವೊಬ್ಬನೂ, ಅಂತಹ ಆಶ್ರಯದಿಂದ,
ಎಲ್ಲಾ ವ್ಯಸನಗಳಿಂದಲೂ ವಿಮುಕ್ತನಲ್ಲ.

ಆದರೆ, ಆಶ್ರಯ ಪಡೆಯುವುದು,
ಬುದ್ಧ, ಧಮ್ಮ ಮತ್ತು ಸಂಘದಲ್ಲಿ

ಮತ್ತು ಸರಿಯಾದ ತಿಳಿವಳಿಕೆಯಿಂದ ನೋಡುವುದು,
ಆ ಆರ್ಯಚತುರ್ಥಾರ್ಥ ಸೂತ್ರಗಳನ್ನು

ಸಂಕಟಗಳೆಂಬ ಕಾರಣಗಳ ಸಂಕಟದಿಂದ ಸಂಕಟಪಡುವುದು,
ಈ ಸಂಕಟಗಳನ್ನು ಅತಿಶಯಿಸುವುದು, ಮತ್ತು
ಆ ಆರ್ಯ ಅಷ್ಟಾಂಗ ಸೂತ್ರಗಳ ಮಾರ್ಗದರ್ಶನದಿಂದ
ಈ ಸಂಕಟ ಸಮೂಹಗಳನ್ನು ಅತಿಶಯಿಸಬಹುದು.

ಇದೇ ನಿಜವಾಗಿಯೂ ಕ್ಷೇಮಾಶ್ರಯ
ಈ ಆಶ್ರಯವೇ ಅತ್ಯುನ್ನತೆಯದು
ಈ ಆಶ್ರಯದ ನೆರವಿನಿಂದ ಒಬ್ಬನು
ತನ್ನೆಲ್ಲಾ ಸಂಕಟಗಳಿಂದ ವಿಮುಕ್ತನು.

D·P· 189-192

ಭಗವಾನ್ ಬುದ್ಧರ ಆಶ್ರಯವನ್ನು ಪಡೆಯುವುದೊಂದು, ಪೂರ್ಣ ನಂಬಿಕೆ ಮತ್ತು ಒಪ್ಪಿಗೆ ಪಡೆದಂತಹ ಅಂಶ, ಇದರಿಂದ ಯಾವೊಬ್ಬನಾದರೂ ಸರ್ವೋತ್ತಮ ಜ್ಞಾನೋದಯವನ್ನು ಪಡೆಯಬಹುದು, ಈ ಮೂಲಕ ಭಗವಾನ್ ಬುದ್ಧರು ಪಡೆದ ಪರಿಪೂರ್ಣತೆಯನ್ನು ಪಡೆಯಬಹುದು. ಧಮ್ಮದಲ್ಲಿ ಆಶ್ರಯ ಪಡೆಯುವುದರಿಂದ, ಆರ್ಯ ಚತುರಾರ್ಥ ಸೂತ್ರಗಳನ್ನು ತಿಳಿದುಕೊಂಡು, ತನ್ನ ಜೀವನದ ಮೂಲವನ್ನು ಆರ್ಯ ಅಷ್ಟಾಂಗ ಸೂತ್ರದ ಆಧಾರದಿಂದ ನಡೆಯುವಂತೆ ಆಶಿಸುವುದು. ಇವನ್ನು ಅನುಸರಿಸುವುದರಿಂದ, ಯಾವೊಬ್ಬನಾದರೂ, ಬೌದ್ಧೀಯನಾಗಬಹುದು ಮತ್ತು ಆ ಮೂಲಕ ನಿರ್ವಾಣ ಪಡೆಯುವ ಪ್ರಥಮ ಹೆಜ್ಜೆಯನ್ನು ಹಾಕಿ ಜೀವನ ಸಾಗಿಸಬಹುದು.

ಪ್ರಶ್ನೆ :— ನೀವು ಪ್ರಥಮದಲ್ಲಿ ತೆಗೆದುಕೊಂಡ ತ್ರಿಚರಣ ಸೂತ್ರಗಳ ಕಾರಣದಿಂದಾಗಿ ಯಾವ ಬದಲಾವಣೆಗಳನ್ನು ನಿಮ್ಮ ಜೀವನದಲ್ಲಿ ಹೊಂದಿರುವಿರಿ ?

—ಅಂಖ್ಯಾತ ಮಿಲಿಯನ್ ಜನರು, ಇತರರು 2500 ವರ್ಷಗಳ ಹಿಂದಿನಿಂದಲೂ ಏನು ಪಡೆದಿರುವರೋ ಅದನ್ನೆಲ್ಲಾ ಪಡೆದಿರುವೆನು. ಭಗವಾನ್ ಬುದ್ಧರ ಪ್ರಬೋಧನೆಗಳು, ಈ ಕಷ್ಟ ಕಾರ್ಪಣ್ಯದ ಪ್ರಪಂಚದ ಬಗೆಗಿನ ಅಲ್ಪ ಅರ್ಥವನ್ನು ತಿಳಿಸಬಲ್ಲದ್ದಾಗಿದೆ, ಅರ್ಥವೇ ಇಲ್ಲದ ಜೀವನವೆಂಬುವರಿಗೆ ಆ ಬಗೆಯ ಪೂರ್ಣಾರ್ಥವನ್ನಿತ್ತಿವೆ. ಇವು ನನಗೆ, ಮಾನತ್ವ ಮತ್ತು ಇವನಲ್ಲಿರಬೇಕಾದ ಅಪಾರ ಕರುಣೆಯನ್ನು ಮತ್ತು ಅವುಗಳ ತತ್ವ

ಸಾರವನ್ನು ತಿಳಿಸಿವೆ. ಇವುಗಳೇ ನನ್ನ ಜೀವನ ನಡೆಸುವ ಸಾಧನಗಳು. ಅಲ್ಲದೆ ಇವುಗಳು ನನ್ನ ಮುಂದಿನ ಜನ್ಮದಲ್ಲಿ ಹೇಗೆ ನಾನು ಪರಿಶುದ್ಧತೆಯನ್ನು ಮತ್ತು ಸನ್ಮಾರ್ಗಗಳನ್ನು ಪಡೆಯಬಹುದೆಂಬುದನ್ನು ತೋರಿಸಿವೆ. ಭಾರತದ ಅತಿ ಪ್ರಾಚೀನ ಕಾಲದ ಕವಿಯೊಬ್ಬರು, ಭಗವಾನ್ ಬುದ್ಧರನ್ನು ಕುರಿತು ಹೀಗೆ ಬರೆದರು.

"ಆಶ್ರಯಕ್ಕಾಗಿ ಅವರ ಬಳಿ ಹೋಗುವುದು, ಅವರ ಸ್ತೋತ್ರಗಳನ್ನು ಹಾಡಲು, ಅವರಿಗೆ ಆತ್ಮಪೂರಕ ಗೌರವಾದರಗಳನ್ನರ್ಪಿಸುವುದು ಮತ್ತು ಅವರ ಧರ್ಮದ ನಿಬಂಧನೆಗಳಿಗೆ ವಿಧೇಯವಾಗಿ ನಡೆಯುವುದು, ಇವೆಲ್ಲವೂ, ಅತ್ಯುನ್ನತ ಅರಿವಿನಿಂದ ಜೀವಿಸುವುದಾಗಿದೆ. ನಾನು ಈ ಎಲ್ಲಾ ಶಬ್ದಗಳ ಅರ್ಥಗಳನ್ನು ಪೂರ್ಣ ಒಪ್ಪುತ್ತೇನೆ.

**ಪ್ರಶ್ನೆ** :— ಹಾಗಾದರೆ, ನಾನೂ ಸಹ.

—00—